ಕೊಡಗು ಜಿಲ್ಲೆಯ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಆರ್ಥಿಕ ಚಟುವಟಿಕೆಯನ್ನು ಕುರಿತು

ಅರ್ಥಶಾಸ್ತ್ರೀಯ ಹಿನ್ನೆಲೆಯಲ್ಲಿ ಅಂತರ್‌ಶಿಸ್ತೀಯ

ಅಧ್ಯಯನ

(ವೀರಾಜಪೇಟೆ ತಾಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್ ಸಂಪ್ರಬಂಧ)

ಸಂಶೋಧಕ

ರವಿ ಎಚ್.ಎಲ್.

ಮಾರ್ಗದರ್ಶಕರು

ಡಾ. ಚೆಲುವರಾಜು

ಪ್ರವಾಚಕರು

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೮

ಕೊಡಗು ಜಿಲ್ಲೆಯ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಆರ್ಥಿಕ ಚಟುವಟಿಕೆಯನ್ನು ಕುರಿತು

ಅರ್ಥಶಾಸ್ತ್ರೀಯ ಹಿನ್ನೆಲಯಲ್ಲಿ ಅಂತರ್‌ಶಿಸ್ತೀಯ

ಅಧ್ಯಯನ

(ವೀರಾಜಪೇಟೆ ತಾಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್ ಸಂಪ್ರಬಂಧ)

ಸಂಶೋಧಕ

ರವಿ ಎಚ್.ಎಲ್.

ಮಾರ್ಗದರ್ಶಕರು

ಡಾ. ಚೆಲುವರಾಜು

ಪ್ರವಾಚಕರು

ಬುಡಕಟ್ಟು ಅಧ್ಯಯನ ವಿಭಾಗ

ಬುಡಕಟ್ಟು ಅಧ್ಯಯನ ವಿಭಾಗ


ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೮

ಕೊಡುಗು ಜಿಲ್ಲಾ ನಕ್ಷೆ
ಕರ್ನಾಟಕ



ವಿರಾಜಪೇಟೆ ತಾಲೂಕ ನಕ್ಷೆ (ಕೊಡಗು ಜಿಲ್ಲೆ)



Government of India 2005

ದೃಢೀಕರಣ

ರವಿ ಎಚ್.ಎಲ್. ಇವರು **ಕೊಡಗು ಜಿಲ್ಲೆಯ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಆರ್ಥಿಕ ಚಟುವಟಿಕೆಯನ್ನು ಕುರಿತು (ವೀರಾಜಪೇಟೆ ತಾಲೂಕನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಚೆಲುವರಾಜು
ಪ್ರವಾಚಕರು
ಬುಡಕಟ್ಟು ಅಧ್ಯಯನ ವಿಭಾಗ

ಸ್ಥಳ : ವಿದ್ಯಾರಣ್ಯ

ದಿನಾಂಕ :

ಪ್ರಮಾಣ ಪತ್ರ

ಕೊಡಗು ಜಿಲ್ಲೆಯ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಆರ್ಥಿಕ ಚಟುವಟಿಕೆಯನ್ನು ಕುರಿತು (ವೀರಾಜಪೇಟೆ ತಾಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ.ಚೆಲುವರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ರವಿ. ಹೆಚ್. ಎಲ್.

ರವಿ ಹೆಚ್.ಎಲ್.
ಸಂಶೋಧಕ
ಬುಡಕಟ್ಟು ಅಧ್ಯಯನ ವಿಭಾಗ
ಕವಿಹಂ, ವಿದ್ಯಾರಣ್ಯ

ಸ್ಥಳ : ವಿದ್ಯಾರಣ್ಯ

ದಿನಾಂಕ :

ಪರಿವಿಡಿ

ಅಧ್ಯಾಯ ೧.

ಪ್ರಸ್ತಾವನೆ

ಅಧ್ಯಾಯ ೨.

ಅಧ್ಯಯನ ಕ್ಷೇತ್ರದ ಭೌಗೋಳಿಕ ಹಿನ್ನಲೆ ಮತ್ತು ಬುಡಕಟ್ಟು ಸಮುದಾಯಗಳು

ಅಧ್ಯಾಯ ೩.

ಬುಡಕಟ್ಟು ಮಹಿಳೆಯರ ಆರ್ಥಿಕ ಸಂಘಟನೆ

ಅಧ್ಯಾಯ ೪

ಬುಡಕಟ್ಟು ಮಹಿಳೆ ಮತ್ತು ಸ್ವಸಹಾಯ ಗುಂಪುಗಳು

ಅಧ್ಯಾಯ ೫

ಸಮಾರೋಪ

ಅನುಬಂಧಗಳು

ವಕ್ತೃ ವಿವರ

ಪರಾಮರ್ಶನ ಗ್ರಂಥಗಳು

ಛಾಯಾಚಿತ್ರಗಳು

ಅಧ್ಯಾಯ ೧

ಪ್ರಸ್ತಾವನೆ

ಅಧ್ಯಯನದ ಉದ್ದೇಶ

ಅಧ್ಯಯನದ ಮಹತ್ವ

ಅಧ್ಯಯನದ ವ್ಯಾಪ್ತಿ

ಅಧ್ಯಯನದ ವಿಧಿ ವಿಧಾನಗಳು

ಅಧ್ಯಾಯ ೧

ಪ್ರಸ್ತಾವನೆ

ಪ್ರಪಂಚದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಆದರೆ ಪುರುಷರೊಂದಿಗೆ ಹೋಲಿಸಿ ನೋಡಿದಾಗ ಮಹಿಳೆಯರಿಗೆ ಅಭಿವೃದ್ಧಿಯ ಫಲ ಸಾಕಷ್ಟು ಸಿಗುತ್ತಿಲ್ಲ. ಈ ಸಮಾಜವು ಸರ್ವರಿಗೂ ಬದುಕಲು ಸಮಾನವಾದ ಅವಕಾಶಗಳನ್ನು ಕೊಟ್ಟಿದೆಯೇ ಎಂದು ಯೋಚಿಸಿ ನೋಡಿದಾಗ ಹಲವಾರು ಸಮಸ್ಯೆಗಳು ನಮ್ಮ ಕಣ್ಮುಂದೆ ಬರುತ್ತದೆ. ಒಂದು ಕುಟಂಬದ, ದೇಶದ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಪಾರವಾದುದು, ಆದರೆ ಇವರ ದುಡಿಮೆಗೆ ಸಾಕಷ್ಟು ಮನ್ನಣೆಯಿಲ್ಲದಿರುವುದು ದುರಾದೃಷ್ಟಕರ ವಿಷಯ.

ಮಹಿಳೆಯರಿಗೆ ಸರಿಯಾದ ಸ್ಥಾನಮಾನ ಸಿಗುತ್ತಿಲ್ಲ ಎನ್ನುವುದು ಕೇವಲ ಭಾರತ ದೇಶಕ್ಕೆ ಸೀಮಿತವಾಗಿಲ್ಲ. ಪ್ರಸ್ತುತದಲ್ಲಿ ಹಲವಾರು ರಾಷ್ಟ್ರಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನೇ ನೀಡಿಲ್ಲದಿರುವುದನ್ನು ನೋಡಬಹುದಾಗಿದೆ. ಕೆಲವು ದೇಶಗಳಲ್ಲಿ ಮಹಿಳೆ ಮೈ ಮುಖ ಮುಚ್ಚಿಕೊಳ್ಳದೆ ಹೊರಗೆ ಕಾಲಿಡುವಂತಿಲ್ಲ. ಗಂಡಂದಿರೊಂದಿಗೆ ಸಮಾನವಾಗಿ ನಿಲ್ಲುವಂತಿಲ್ಲ, ಅಷ್ಟೇ ಏಕೆ ಇಂಗ್ಲೆಂಡ್ ಅಮೇರಿಕಾದಂತಹ ಪ್ರಗತಿಪರ ದೇಶದಲ್ಲೂ ಕೂಡ ಸ್ತ್ರೀಯರಿಗೆ ಮತಾಧಿಕಾರದ ಹಕ್ಕು ದೊರೆತು ಕೇವಲ ೭೫ವರ್ಷಗಳಾಗಿವೆ. ಪ್ರಸ್ತುತ ಮಹಿಳೆಯರಿಗೆ ಸರಿಯಾದ ಸ್ಥಾನಮಾನ ಸಿಗುತ್ತಿಲ್ಲ ಎಂಬ ವಿಚಾರಗಳನ್ನು ನಾವು ಕಾಣಬಹುದಾಗಿದೆ. ೧೯೮೦ರ ಕೋಪನ್‌ಹೆಗ್‌ನಲ್ಲಿ ನಡೆದ ವಿಶ್ವಸಂಸ್ಥೆಯ ವರದಿಯ ಪ್ರಕಾರ ಮಹಿಳೆಯರು ಜಗತ್ತಿನ ಜನಸಂಖ್ಯೆಯ ಅರ್ಧದಷ್ಟಿದ್ದರು. ಶೇ. ೩೩ರಷ್ಟು ದುಡಿಮೆಯಲ್ಲಿ ಭಾಗವಹಿಸುವರು. ಅವರು ಹೊಂದಿರುವ ಆಸ್ತಿಯ ಪಾಲು ಶೇ. ೧ರಷ್ಟಿವೆ ಎಂಬುದನ್ನು ತಿಳಿಯಪಡಿಸುತ್ತದೆ. ಇದು ಎಂಥಾ ವಿಪರ್ಯಾಸ! ಸಂಪನ್ಮೂಲಗಳ ಮೇಲಿನ ಅತ್ಯಂತ ಕಡಿಮೆ ನಿಯಂತ್ರಣ ಎಂದರೇ ತಪ್ಪಾಗಲಾರದು. ೧೯೯೫ರ ಬೀಜಿಂಗ್ ಜಾಗತಿಕ ಮಹಿಳಾ ಸಮ್ಮೇಳನದ ವಿಚಾರ ಮಂಡನೆಯ ಮೇಲೂ ಕೂಡ ಮೂಡಿಬಾರದೆ ಇದ್ದ ಕನಸ್ಸಿನ ಕಲ್ಪನೆ ಅನೇಕ ರಾಷ್ಟ್ರಗಳ ಮಹಿಳಾ ಪ್ರತಿನಿಧಿಗಳಿಂದ ಅರಿಯುವಂತಾಗಿದೆ. ೧೯೯೫ ಅಂಕಿ-ಅಂಶಗಳ ಪ್ರಕಾರ ದಕ್ಷಿಣ ಏಷ್ಯಾದಲ್ಲಿ ಶೇ. ೫೫, ಆಗ್ನೇಯ ಏಷ್ಯಾದಲ್ಲಿ ಶೇ.೪೨, ಪೂರ್ವ ಏಷ್ಯಾದಲ್ಲಿ ಶೇ ೩೫. ಹಾಗೂ ಮಧ್ಯ ಏಷ್ಯಾದಲ್ಲಿ ಶೇ ೩೩ರಷ್ಟು ಮಹಿಳಾ ಶ್ರಮಶಕ್ತಿಯಿದೆ ಎಂದು ತಿಳಿದು ಬಂದಿದೆ. ಮಹಿಳೆಯರು ಇಷ್ಟೆಲ್ಲಾ ಶ್ರಮಶಕ್ತಿಯನ್ನು ಹೊಂದಿದ್ದರು ಕೂಡ ಅ ಶ್ರಮ ಬಳಕೆಯಾಗುತ್ತಿಲ್ಲ ಎಂಬುದು ವಿಷಾದಕರ ಸಂಗತಿಯಾಗಿದೆ.

೧೯೯೫ರ ಸೆಪ್ಟೆಂಬರ್‌ನಲ್ಲಿ ಬೀಜಿಂಗ್ ವಿಶ್ವಸಂಸ್ಥೆಯ ವತಿಯಿಂದ ನಡೆದ ನಾಲ್ಕನೆ ಮಹಿಳಾ ಸಮ್ಮೇಳನದಲ್ಲಿ ಮಹಿಳೆಯರಿಗೆ ಸಮಾನಸ್ಥಾನಮಾನ ನೀಡಬೇಕೆಂದು ಚೀನಾ ದೇಶವು ಉಳಿದ ಸರ್ಕಾರಗಳಿಗೆ ಕರೆ ನೀಡಿತು. ಮಹಿಳೆಯರನ್ನು ನೀತಿ ನಿರ್ಧಾರಗಳ ಕ್ರಿಯೆಯಲ್ಲಿ ತೊಡಗಿಸದೆ ಇರುವುದು ಸಮಾಜಕ್ಕೆ ಆಗಿರುವ ಒಂದು ದೊಡ್ಡ ನಷ್ಟ. ಮಹಿಳೆ ಕೇವಲ ಮಹಿಳೆಯಾಗಿಲ್ಲ ತಾಯಿಯಾಗಿ, ಹೆಂಡತಿಯಾಗಿ, ಕುಟುಂಬದ ರಕ್ಷಕಿಯಾಗಿ, ಮಹಿಳೆಯರು ನಿರ್ವಹಿಸುವ ಪಾತ್ರ ಅದ್ವಿತೀಯ, ಹಾಗಾಗೀ ನೀತಿ ನಿರ್ಧಾರಗಳ ಕ್ರಿಯೆಯಲ್ಲಿ ಮಹಿಳೆಯ ಪಾತ್ರವೆಂದರೇ ಉತ್ತಮ ತರದ ನಿರ್ಣಯವೆಂದೇ ಅರ್ಥ.

ಮಹಿಳೆಯರು ಮನೆ ಕೆಲಸದ ಜೊತೆಗೆ ಅನೇಕ ಕೌಶಲ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಕಲೆ ಮಹಿಳೆಯರಿಗಿದೆ. ಈ ಕೌಶಲ್ಯಕ್ಕೆ ಮಾನ್ಯತೆ ಇಲ್ಲದಿರುವುದು ಒಂದು ದೊಡ್ಡ ದುರಂತ. ಅಂದರೇ ಈ ಕೌಶಲ್ಯಗಳಿಗೆ ಮೌಲ್ಯ ನಿರ್ಣಯವಾಗಿಲ್ಲ. ಅದಕ್ಕೆ ವಾಣಿಜ್ಯ ಬೆಲೆಯು ಕೂಡ ಬಂದಿಲ್ಲ. ಮಹಿಳೆಯರಿಗೆ ಹೆಚ್ಚು ವಿದ್ಯಾಭ್ಯಾಸದ ಸೌಕರ್ಯಗಳಿಲ್ಲದಿರುವುದೇ ಕೌಶಲ್ಯಕ್ಕೆ ಮಾನ್ಯತೆ ಸಿಗದೆ ಇರುವುದಕ್ಕೆ ಪ್ರಮುಖ ಕಾರಣವಾಗಿದೆ ಎಂದು ಹೇಳಬಹುದಾಗಿದೆ.

ಮಹಿಳೆಯರು ವಿವಿಧ ಚಟುವಟಿಕೆಗಳಲ್ಲಿ ತಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸುವಲ್ಲಿ ಅದರಲ್ಲೂ ಮಹಿಳೆಯರಿಗೆ ಹಲವಾರು ಅಡಚಣೆಗಳು ಎದುರಾಗುತ್ತಿವೆ. ತಾತ್ವಿಕವಾಗಿ ಮಹಿಳೆ ಪುರುಷ ಸಮಾನತೆ ಇರುವುದರಿಂದ ನೀತಿ ನಿರ್ಧಾರಗಳ ಸಂದರ್ಭ ಬಂದಾಗ ಪುರುಷರು ಮಾತ್ರ ನಿರ್ಧಾರ ಕೈಗೊಳ್ಳುತ್ತಾರೆ. ಮಹಿಳೆಯರ ಪಾತ್ರ ಇಂಥ ಸಾಮಾನ್ಯ ಸಂದರ್ಭಗಳಲ್ಲಿ ಶೂನ್ಯವಾಗಿರುವುದು. ನಿರ್ಧಾರ ಕೈಗೊಳ್ಳುವಂತಹ ಹುದ್ದೆಗಳಲ್ಲಿ ಮಹಿಳೆಯರಿಗೆ ಶೇ. ೩೩ ಪಾಲನ್ನು ನೀಡಬೇಕೆಂಬ ಗುರಿ ಸಾಧನೆಯನ್ನು ಬೀಜಿಂಗ್ ಮಹಿಳಾ ಸಮ್ಮೇಳನ ಅಂಗೀಕರಿಸಿತು. ಆದರೆ ವಿಶ್ವಸಂಸ್ಥೆ ಮಹಿಳಾ ನಿಧಿ ಬಿಡುಗಡೆ ಮಾಡುವ ವರದಿ ಪ್ರಕಾರ ಕೇವಲ ಎಂಟುರಾಷ್ಟ್ರಗಳು, ಅದರಲ್ಲೂ ಬಹುತೇಕ ಸ್ಕ್ಯಾಂಡಿನೇವಿಯನ್ ರಾಷ್ಟ್ರಗಳು ಮಾತ್ರ ಈ ಗುರಿಯನ್ನು ತಲುಪಲು ಸಮರ್ಥನಿಯವಾಗಿವೆ ಎಂದು ವರದಿ ಮಾಡಿದೆ.

೧೯೯೭ರ ವಿಶ್ವಸಂಸ್ಥೆಯ ವರದಿಯು ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ಮಹಿಳೆಯ ಪಾತ್ರ ಹೆಚ್ಚುತ್ತಲಿದೆ ಎಂಬುದಾಗಿ ಪ್ರಕಟಿಸಿದೆ. ಇದು ನಿಜವಾಗಿಯು ಒಂದು ಆರೋಗ್ಯಕರವಾದ ಬೆಳವಣಿಗೆ, ನಗರ ಪ್ರದೇಶದ ಮಹಿಳೆಯರಿಗಿಂತ ಗ್ರಾಮೀಣ ಪ್ರದೇಶದ ಮಹಿಳೆಯರು ಆರ್ಥಿಕ ಚಟುವಟಿಕೆಯಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಾರೆ ಎಂದು ೧೯೯೭ರ ವಿಶ್ವಸಂಸ್ಥೆಯ ವರದಿಯು ತಿಳಿಸುತ್ತದೆ.

ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಮಹಿಳೆ ಪುರುಷನ ಮಾತಿಗೆ ವಿಶೇಷ ಮನ್ನಣೆ ನೀಡುವುದನ್ನು ಸಮಾಜ ಮಹಿಳೆಯ ಮೇಲೆ ವಿಧಿಸಿರುವ ಅಲಿಖಿತ ವಿಧಿಯಾಗಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಂಪ್ರದಾಯ, ಸಂಸ್ಕೃತಿಗಳು ಮಹಿಳೆಯರ ಬದುಕಿನಲ್ಲಿ ಹಿಡಿತವನ್ನು ಸಾಧಿಸಿವೆ. ಇದಕ್ಕೆಲ್ಲಾ ಮೂಲ ಕಾರಣ ಮಹಿಳೆಯರಲ್ಲಿ ಹೆಚ್ಚಿನ ಅಕ್ಷರ ಜ್ಞಾನ ಇಲ್ಲದಿರುವುದು.

ದೇಶದ ಅಭಿವೃದ್ಧಿಯಲ್ಲಿ ಆ ದೇಶದ ಪ್ರತಿಯೊಂದು ವರ್ಗದ ಜನರು ತಮ್ಮದೆಯಾದ ಕೊಡುಗೆಯನ್ನು ನೀಡುತ್ತಿದ್ದಾರೆ. ಹಾಗೆಯೇ ನಮ್ಮ ದೇಶದ ಬುಡಕಟ್ಟು ಮಹಿಳೆಯರು ಇತರೇ ಸಾಮಾನ್ಯ ಮಹಿಳೆಯರೊಂದಿಗೆ ಬೆರೆತು ಹಲವಾರು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ತಮ್ಮ ಜೀವನಮಟ್ಟವನ್ನು ಉತ್ತಮಗೊಳಿಸುವುದರ ಜೊತೆಗೆ ದೇಶದ ಆರ್ಥಿಕತೆಗೆ ಕೊಡುಗೆಯನ್ನು ನೀಡುತ್ತಿರುವುದು ಶ್ಲಾಘನೀಯವಾದುದು. ಶತಶತಮಾನಗಳಿಂದಲೂ ಕಾಡೇ ನಮ್ಮ ಸ್ವರ್ಗ, ಕಾಡೇ ನಮ್ಮ ದೇವರು, ಕಾಡೇ ನಮ್ಮ ಪ್ರಪಂಚ ಎಂದು ಅಪ್ಪಿಕೊಂಡಿದ್ದ ಬುಡಕಟ್ಟು ಮಹಿಳೆಯರು ಇಂದಿನ ದಿನಗಳಲ್ಲಿ ಕಾಡಿನಿಂದ ನಾಡಿಗೆ ಬಂದು ಸಮಾಜದ ಇತರೆ ಜನರೊಂದಿಗೆ ಬೆರೆತು ಹಲವಾರು ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡು ನಾವು ಯಾರಿಗೂ ಕಡಿಮೆ ಇಲ್ಲ ಎಂದು ಅಭಿವೃದ್ಧಿ ಪಥದತ್ತ ಸಾಗುತ್ತಿರುವುದು ಹೆಮ್ಮೆಯ ವಿಚಾರವಾಗಿದೆ.

ಅಧ್ಯಯನದ ಉದ್ದೇಶಗಳು

ಕರ್ನಾಟಕದಲ್ಲಿ ೧೯೯೪-೯೭ರಿಂದ ಮಹಿಳಾ ಸ್ವ-ಸಹಾಯ ಸಂಘಗಳು ಸ್ಥಾಪನೆಯಾಗಿವೆ. ಈ ಸಂಘಗಳು ಸ್ಥಾಪನೆಯಾಗುವುದಕ್ಕಿಂತ ಮುಂಚೆ ಜನರು ಲೇವಾದೇವಿದಾರರು ಮತ್ತು ಜಮೀನ್ದಾರರ ಬಳಿ ಸಾಲವನ್ನು ಪಡೆದು ಸಂಕಷ್ಟಕ್ಕೆ ಸಿಲುಕಿಕೊಂಡಿದ್ದರು. ಈ ಸಮಸ್ಯೆಯ ಫಲವಾಗಿ ಸರ್ಕಾರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ತರುವ ಉದ್ದೇಶದಿಂದ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಸ್ವಯಂಸೇವಾ ಸಂಸ್ಥೆಗಳನ್ನು ಸ್ಥಾಪನೆ ಮಾಡಲಾಯಿತು. ಇಂತಹ ಸ್ತ್ರೀ ಶಕ್ತಿ ಗುಂಪುಗಳು ಸಾಮಾನ್ಯವಾಗಿ ಎಲ್ಲಾ ವರ್ಗದ ಮಹಿಳೆ ಮತ್ತು ಪುರುಷರು ಈ ಸಂಘಗಳನ್ನು ಸ್ಥಾಪನೆ ಮಾಡಿಕೊಂಡು ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಹಣವನ್ನು ಸಂಗ್ರಹಣೆ ಮಾಡಲಾಗುತ್ತಿದೆ. ಅದರಲ್ಲಿ ಮುಖ್ಯವಾಗಿ ಬುಡಕಟ್ಟು ಮಹಿಳೆಯರು ೧೦-೨೦ ಸದಸ್ಯರೊಂದಿಗೆ ಸಂಘಗಳನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ. ಜೊತೆಗೆ ಇತರೇ ಜನರೊಂದಿಗೆ ಬೆರೆತು ಸಂಘಗಳನ್ನು ಸ್ಥಾಪನೆ ಮಾಡಿಕೊಂಡು ಯಾವ ರೀತಿ ಆರ್ಥಿಕವಾಗಿ ಪ್ರಬಲವಾಗಿ, ಉತ್ತಮವಾದ ಜೀವನಮಟ್ಟವನ್ನು ಸಾಗಿಸುತ್ತಿದ್ದಾರೆ. ಅವರ ಧ್ಯೇಯೋದ್ದೇಶಗಳೇನು ಎಂಬುದನ್ನು ತಿಳಿದುಕೊಳ್ಳುವುದು ಈ ಅಧ್ಯಯನದ ಪ್ರಮುಖವಾದ ಉದ್ದೇಶವಾಗಿದೆ.

೧. ಬುಡಕಟ್ಟು ಮಹಿಳೆಯರು ಸ್ವ-ಸಹಾಯ ಸಂಘಗಳಲ್ಲಿ ಯಾವ ರೀತಿ ಉಳಿತಾಯ ಮಾಡುತ್ತಿದ್ದಾರೆ ಎಂಬುದನ್ನು ತಿಳಿಯುವುದು.

೨. ಬುಡಕಟ್ಟು ಮಹಿಳೆಯರು ಸ್ವ-ಸಹಾಯ ಗುಂಪುಗಳ ಮೂಲಕ ಇವರು ಸಾಲಗಾರರ ಹಿಡಿತದಿಂದ ಹೇಗೆ ರಕ್ಷಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಯುವುದು.

೩. ಪರೋಕ್ಷವಾಗಿ ಬ್ಯಾಂಕುಗಳು ಮತ್ತು ಇತರ ಹಣಕಾಸಿನ ಸಂಸ್ಥೆಗಳಿಂದ ಹೇಗೆ ಸಾಲ-ಸೌಲಭ್ಯವನ್ನು ಪಡೆದುಕೊಳ್ಳುತ್ತಿವೆ ಎಂಬುದನ್ನು ತಿಳಿದುಕೊಳ್ಳುವುದು.

೪. ಬುಡಕಟ್ಟು ಮಹಿಳೆಯರು ಉಳಿತಾಯ ಸಾಮಾರ್ಥ್ಯವನ್ನು ಹೆಚ್ಚಿಸಿಕೊಂಡು ಸಂಘಟಿತರಾಗುವ ಮೂಲಕ ಯಾವ ರೀತಿಯ ಉದ್ಯೋಗವನ್ನು ಕೈಗೊಳ್ಳುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳುವುದು.

೫. ಬುಡಕಟ್ಟು ಮಹಿಳೆಯರು ಸಂಘಗಳ ಮೂಲಕ ತಮ್ಮ ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಯುವುದು.

೬. ಮಹಿಳೆಯರು ತಮ್ಮ ಸಂಘಗಳ ಮೂಲಕ ಸ್ಥಳೀಯ ಸಂಪನ್ಮೂಲಗಳನ್ನು ಹೇಗೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಯುವುದು.

೭. ಮಹಿಳಾ ಸಂಘಗಳಲ್ಲಿರುವ ಸದಸ್ಯರು ವ್ಯಾಪಾರ ಚಟುವಟಿಕೆಯ ಮೂಲಗಳಾದ ಹೈನುಗಾರಿಕೆ, ಕುರಿಸಾಗಾಣಿಕೆ, ಕೋಳಿಸಾಕಾಣಿಕೆ, ಜೇನುಸಾಕಾಣಿಕೆ, ಮುಂತಾದ ಚಟುವಟಿಕೆಯ ಬಗ್ಗೆ ತಿಳಿದುಕೊಳ್ಳುವುದು.

೮. ಕುಟುಂಬ ನಿರ್ವಹಣೆ, ಶಿಕ್ಷಣ, ಆರೋಗ್ಯ, ಸಮುದಾಯ ಜಾಗೃತಿ ಮುಂತಾದ ವಿಷಯಗಳಲ್ಲಿ ಆಗಿರುವ ಬದಲಾವಣೆಯ ಬಗೆಗೆ ತಿಳಿಯುವುದು.

ಅಧ್ಯಯನದ ಮಹತ್ವ

ನಮ್ಮ ದೇಶದಲ್ಲಿ ಪ್ರಸ್ತುತದಲ್ಲಿಯು ಕೂಡ ಮಹಿಳೆಯರಿಗೆ ಸರಿಯಾದ ಸ್ಥಾನಮಾನವನ್ನು ನೀಡಿಲ್ಲದಿರುವುದು ದುಃಖಕರ ಸಂಗತಿಯಾಗಿದೆ. ಮಹಿಳೆಯರು ಶಕ್ತಿಯ ಅವತಾರೆ, ಆದಿಶಕ್ತಿ ಎಂದೆಲ್ಲಾ ವರ್ಣಿಸಲಾಗುತ್ತದೆ. ಇದೇ ಮಹಿಳೆ ಅನಾದಿಕಾಲದಿಂದಲೂ ತನ್ನೆಲ್ಲಾ ಶಕ್ತಿಯನ್ನು ಬರಿದುಮಾಡಿಕೊಂಡು ಈಗ ಪುನಃ ಅದನ್ನು ತುಂಬಲು ಹೆಣಗುತ್ತಿರುವುದೇ ಕ್ರಿ.ಶ.೨೧ನೇ ಶತಮಾನದ ಐತಿಹಾಸಿಕ ಘಟನೆಯಾಗಿದೆ. ೨೧ನೇ ಶತಮಾನದಲ್ಲಿ ನಿಂತು ಕ್ರಮಿಸಿದ ಹಾದಿಯನ್ನು ಯೋಚಿಸಿದಾಗ ಈವರೆಗಿನ ಸಾಧನೆ ಸ್ವಲ್ಪಮಟ್ಟಿನ ತೃಪ್ತಿಯನ್ನು ತಂದುಕೊಟ್ಟಿದ್ದು, ಮುಂದೆ ಕ್ರಮಿಸಬೇಕಾದ ದೂರದ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತದೆ. ಮಹಿಳೆಯರಿಗೆ 'ಶಕ್ತಿಸಂಚಯ' ಈ ಶತಮಾನದ ಘೋಷಣೆಯಾಗಿದೆ. ೧೯೭೫ನೇ ಇಸ್ವಿಯನ್ನು ಅಂತರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ನಂತರದ ಹತ್ತು ವರ್ಷಗಳನ್ನು ಮಹಿಳಾ ದಶಕವನ್ನಾಗಿ ಘೋಷಿಸಿದ್ದು ಈ ಶಕ್ತಿ ಸಂಚಯಕಾರ್ಯದಲ್ಲಿ ತುರ್ತನ್ನು ತಂದಿತೆಂದೇ ಹೇಳಬಹುದು.

ಶತಮಾನಗಳಿಂದ ಹೆಣ್ಣು ಕುಟುಂಬದ ಕಣ್ಣು, ಅವಳ ಬದುಕು ನಾಲ್ಕು ಗೋಡೆಯ ನಡುವೆ ನಡೆಯಬೇಕು. ಅವಳು ಸಂಪ್ರದಾಯ ಸಂಸ್ಕೃತಿಗಳ ಆಚರಣೆಗೆ ಬದ್ಧವಾಗಿರಬೇಕು ಎನ್ನುವ ಪುರುಷ ಪ್ರಧಾನ ಸಮಾಜದ ತತ್ವಗಳನ್ನು ಪ್ರಸ್ತುತದಲ್ಲಿ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಸುಳ್ಳಾಗಿಸಿದ್ದಾರೆ. ಆಧುನಿಕ ಸಮಾಜದಲ್ಲಿ ಮಹಿಳೆ ಮಹತ್ವದ ಎಲ್ಲಾ ಕ್ಷೇತ್ರಗಳಲ್ಲಿಯು ಮತ್ತು ಮಹತ್ತರವಾದ ಸನ್ನಿವೇಶದಲ್ಲಿಯು ಸಾಧನೆಗೈಯುತ್ತಾ ಕಾರ್ಯನಿರ್ವಹಿಸುತ್ತಿರುವುದನ್ನು ನಾವು ಗಮನಿಸಿದ್ದೇವೆ. ಕೇವಲ ಪುರುಷರಿಗಾಗಿಯೇ ಮೀಸಲಾಗಿದ್ದ ಹಲವಾರು ಕ್ಷೇತ್ರಗಳಿಗೂ ಸಾಮಾನ್ಯ

ಮಹಿಳೆ ಮತ್ತು ಬುಡಕಟ್ಟು ಮಹಿಳೆಯರು ಪ್ರವೇಶಪಡೆದಿದ್ದಾರೆ. ಅವುಗಳೆಂದರೆ ಆಡಳಿತ, ಪೋಲೀಸ್, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಕ್ಷೇತ್ರ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷನಿಗೆ ಸಮಾನವಾದ ಸಾಧನೆಗೈದಿದ್ದಾರೆ.

ಭಾರತೀಯ ಸಮಾಜದಲ್ಲಿ ಸ್ತ್ರೀಯರಿಗೆ ಮಹತ್ವದ ಸ್ಥಾನವಿದೆ ನಿಜ. ಆದಾಗ್ಯೂ ಪಾಶ್ಚಾತ್ಯ ದೇಶಗಳಿಗೆ ಹೋಲಿಸಿದಾಗ ಭಾರತದಲ್ಲಿ ಸ್ತ್ರೀಯರ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲವೆಂದು ಹೇಳಬಹುದು. ಭಾರತದಲ್ಲಿ ಮಹಿಳೆಯರ ಮಹತ್ವದ ಬಗ್ಗೆ ಸ್ವಾಮಿ ವಿವೇಕಾನಂದರು ಈ ರೀತಿ ಹೇಳಿದ್ದಾರೆ. "ಯಾವ ಮನೆಯಲ್ಲೇ ಆಗಲೀ, ದೇಶದಲ್ಲೇ ಆಗಲಿ, ಸ್ತ್ರೀಯರನ್ನು ಗೌರವದಿಂದ ಕಾಣುವುದಿಲ್ಲವೋ, ಎಲ್ಲಿ ಸ್ತ್ರೀಯರು ಕೊರಗಿನ ಜೀವನವನ್ನು ಬಾಳುವರೋ ಅಲ್ಲಿಯವರೆಗೆ ಪುರುಷರಿಗೆ ಶ್ರೇಯಸ್ಸಾಗಲಾರದು" ಎಂದು ಇವರು ಸ್ತ್ರೀ ಕುಲದ ಉದ್ಧಾರದ ಅಗತ್ಯಗಳನ್ನು ಪ್ರತಿಪಾಧಿಸಿದ್ದಾರೆ. ಸ್ತ್ರೀಯರನ್ನು ಸಮಾನತೆದೃಷ್ಟಿಯಿಂದ ಕಾಣಬೇಕೆಂದು ಕರೆ ನೀಡಿದರು.

ಭಾರತದಲ್ಲಿ ಅನಾದಿಕಾಲದಿಂದಲೂ ಹಲವಾರು ಜಾತಿಗಳು, ಹಲವಾರು ಪಂಗಡಗಳು, ಹಲವಾರು ಬುಡಕಟ್ಟುಗಳೆಂಬ ವರ್ಗೀಕರಣ ಜೊತೆ ಜೊತೆಯಲ್ಲೆ ನಡೆದುಕೊಂಡು ಬರುತ್ತಿದೆ. ಸಮಾಜದಲ್ಲಿ ವಾಸಮಾಡುವ ಜನರು ಪ್ಯಾಶನ್ ಜೀವನವನ್ನು ನಡೆಸಿಕೊಂಡು ಬಂದರೇ, ಕಾಡಿನಲ್ಲಿರುವ ಬುಡಕಟ್ಟು ಜನರು ಸ್ವಾಭಾವಿಕವಾದ ಜೀವನವನ್ನು ನಡೆಸಿಕೊಂಡು ನಿಸರ್ಗದ ಜೊತೆ ಒಡನಾಟವನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಯಾರು ನಿಸರ್ಗದ ಮಡಿಲಿನ ಜೊತೆ ಹೊಂದಿಕೊಂಡಿರುವಂತ ಜನ, ಎಲ್ಲಾ ಸಮಾಜದ ಸವಲತ್ತುಗಳಿಂದ ವಂಚಿತರಾಗಿದ್ದಾರೆ. ಹಾಗೆಯೇ ಮಹಿಳೆಯರನ್ನು ಹೋಲಿಸಿ ನೋಡಿದಾಗ ಸಾಮಾನ್ಯ ಮಹಿಳೆ ಎಲ್ಲಾ ಸವಲತ್ತುಗಳನ್ನು ಪಡೆದುಕೊಳ್ಳುತ್ತಿದ್ದಾರೆ, ಬುಡಕಟ್ಟು ಮಹಿಳೆಯರು ಸಮಾಜದ ಸಂಪರ್ಕವಿಲ್ಲದೆ ತನ್ನ ನೈಸರ್ಗಿಕ ಜೀವನಕ್ಕೆ ಹೊಂದಿಕೊಂಡು ಆಧುನಿಕ ಸವಲತ್ತುಗಳಿಂದ ವಂಚಿತಳಾಗಿದ್ದಾಳೆ. ಪ್ರಸ್ತುತದಲ್ಲಿ ಬುಡಕಟ್ಟು ಮಹಿಳೆಯರು ಆಧುನಿಕ ಜಗತ್ತಿನ ಜನಜೀವನ ಪರಿಚಯವಾದ ಮೇಲೆ ನಿಧಾನವಾಗಿ ಅಪರಿಚಿತ ಹೊರ ಪ್ರಪಂಚವನ್ನು ಕಣ್ಣಿಟ್ಟು ನೋಡುತ್ತಿದ್ದಾಳೆ, ಸಮಾಜವನ್ನು ಅರಿಯಲು ಪ್ರಯತ್ನಿಸುತ್ತಿದ್ದಾಳೆ, ಒಂದೊಂದೇ ಹೆಜ್ಜೆಯೂರಿ ಸಮಾಜದ ಒಂದು ಭಾಗವಾಗಿದ್ದಾಳೆ.

ಪ್ರಸ್ತುತ ಭಾರತದಲ್ಲಿ ಬುಡಕಟ್ಟು ಮಹಿಳೆಯರಿಲ್ಲದ ಯಾವುದೊಂದು ಕ್ಷೇತ್ರವು ಸಿಗಲಾರದು. ನಾವು ನಮ್ಮ ದೇಶದ ಪ್ರತಿಯೊಂದು ಕ್ಷೇತ್ರದಲ್ಲಿಯು ಶೇ.೨೫ರಷ್ಟು ಮಹಿಳೆಯರಿದ್ದಾರೆ, ಎಂಬುದಕ್ಕೆ ಕಾರಣ ಅವರು ರಚನೆ ಮಾಡಿಕೊಂಡಿರುವ ಬುಡಕಟ್ಟು ಮಹಿಳಾ ಸ್ವ-ಸಹಾಯ ಸಂಘಗಳೇ ಕಾರಣವಾಗಿವೆ. ಈ ಸಂಘಗಳ ಮೂಲಕ ಮಹಿಳೆಯರ ಸ್ಥಾನಮಾನಗಳು ಅವಳ ಸ್ಥಿತಿಗತಿಗಳು ಮತ್ತು ಹಕ್ಕುಬಾಧ್ಯತೆಗಳನ್ನು ಕುರಿತು ಚಿಂತಿಸುವ ಮುಖ್ಯ ವೇದಿಕೆಯಾಗಿದೆ. ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಆದಿವಾಸಿ ಮಹಿಳೆಯರು ಸಮಾಜದಿಂದ ದೊರೆಯುವ ಸವಲತ್ತುಗಳನ್ನು ಪಡೆದುಕೊಂಡು

ತಾವು ಅಭಿವೃದ್ಧಿ ಹೊಂದಲು ಹೇಗೆ ಶ್ರಮಿಸುತ್ತಿದಾರೆ. ಈ ಸ್ತ್ರೀ ಶಕ್ತಿ ಗುಂಪುಗಳು ಇವರ ಬದುಕಿಗೆ ಹೇಗೆ ಸಹಾಯಕವಾಗಿವೆ. ಎಂಬುದನ್ನು ತಿಳಿಯುವುದು ಈ ಅಧ್ಯಯನದ ಮಹತ್ವದ ವಿಷಯವಾಗಿದೆ. ಹೀಗೆ ಅಭಿವೃದ್ಧಿ ಹೊಂದುತ್ತಿರುವ ಬುಡಕಟ್ಟು ಮಹಿಳೆಯರ ಬದುಕು ಹೇಗಿದೆ ಎಂಬುದನ್ನು ಅಧ್ಯಯನ ಮಾಡುವುದು ಕೂಡ ಅಷ್ಟೇ ಮಹತ್ವದ್ದಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನವು ಒಂದು ನಿರ್ದಿಷ್ಟ ಕ್ಷೇತ್ರವನ್ನು ಆಯ್ದುಕೊಂಡು ಸ್ವಸಹಾಯ ಸಂಘಗಳ ಸಹಾಯದಿಂದ ಬುಡಕಟ್ಟು ಮಹಿಳೆಯರ ಆರ್ಥಿಕ ಚಟುವಟಿಕೆಯನ್ನು ತಿಳಿಯುವ ಒಂದು ಅಧ್ಯಯನವಾಗಿದೆ. ಈ ಅಧ್ಯಯನ ಕ್ಷೇತ್ರದಲ್ಲಿ ಹೆಚ್ಚಾಗಿ ಬುಡಕಟ್ಟು ಸಮುದಾಯಗಳು ವಾಸಿಸುತ್ತಿರುವುದನ್ನು ಕಾಣಬಹುದು.

ಪ್ರಸ್ತುತ ಅಧ್ಯಯನ ವಿಷಯಕ್ಕೆ ಪೂರಕವಾಗಿ ಕೊಡಗು ಜಿಲ್ಲೆಯ ವಿರಾಜಪೇಟೆಯ ತಾಲೂಕನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಕಾರಣವೇನೆಂದರೆ ಈ ಕ್ಷೇತ್ರದಲ್ಲಿ ಪಣಿಯನ್, ಪಂಜರಿಎರವ ಬುಡಕಟ್ಟುಗಳು ಹೆಚ್ಚಾಗಿ ಕಂಡುಬರುತ್ತಾವೆ. ಬೆಟ್ಟಕುರುಬ, ಕಾಡುಕುರುಬ, ಜೇನುಕುರುಬ ಬುಡಕಟ್ಟುಗಳು ವಿರಳವಾಗಿ ಕಂಡುಬರುತ್ತಾರೆ. ತಾಲೂಕಿನಲ್ಲಿ ವಾಸಿಸುತ್ತಿರುವ ಬುಡಕಟ್ಟು ಮಹಿಳೆಯರು ಸಾಮಾನ್ಯವಾಗಿ ಭೂ ಮಾಲೀಕರ ಎಸ್ಟೇಟ್‌ಗಳಲ್ಲಿ ದಿನಗೂಲಿಗಾಗಿ ದುಡಿಯುತ್ತಿದ್ದಾರೆ. ಇಂತ ಬುಡಕಟ್ಟು ಮಹಿಳೆಯರು ಸ್ವಸಹಾಯ ಸಂಘಗಳನ್ನು ಸ್ಥಾಪಿಸಿಕೊಂಡು ಅವುಗಳ ಸಹಾಯದಿಂದ ತಮ್ಮ ಬದುಕನ್ನು ಯಾವ ರೀತಿ ಸುಧಾರಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಈ ಅಧ್ಯಯನದಿಂದ ತಿಳಿಯಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಅಧ್ಯಯನ ಕ್ಷೇತ್ರವಾದ ವೀರಾಜಪೇಟೆ ತಾಲೂಕಿಗೆ ಸಂಬಂಧಿಸಿದಂತೆ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳ ಬಗ್ಗೆ ಯಾವುದೇ ಅಧ್ಯಯನವು ನಡೆದಿರುವುದಿಲ್ಲ. ಈ ಹಿನ್ನಲೆಯಲ್ಲಿ ಅಧ್ಯಯನದ ವಿವಿಧ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಪಡೆಯಲಾಗಿದೆ. ಈ ಅಧ್ಯಯನಕ್ಕೆ ಬೇಕಾಗಿರುವ ಮಾಹಿತಿಯನ್ನು ನಿದರ್ಶನಾತ್ಮಕ ಮತ್ತು ಸೈದ್ಧಾಂತಿಕ ಹಿನ್ನಲೆಯಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವಿಧಾನಗಳು

ಇದು ಮೂಲತಃ ಕ್ಷೇತ್ರಕಾರ್ಯಾಧಾರಿತ ಅಧ್ಯಯನವಾಗಿದೆ. ಪ್ರಧಾನ ಆಕಾರವಾಗಿ ಇಲ್ಲಿ ಪರಿಗಣಿಸುವುದು. ಇಲ್ಲಿ ಬುಡಕಟ್ಟು ಮಹಿಳೆಯರ ಸ್ವಸಹಾಯ ಸಂಘಗಳ ಸಮಗ್ರ ವಿವರಗಳನ್ನು ದಾಖಲಿಸಲಾಗಿದೆ.

ಈ ಮೊದಲು ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಅವಲೋಕಿಸುವುದು ವಿಶೇಷವಾಗಿ ತಯಾರಿಸಲಾದ ಪ್ರಶ್ನಾವಳಿಯ ಮೂಲಕ ಪ್ರತಿಯೊಂದು ಸಂಘದ ಸದಸ್ಯರನ್ನು ಸಂದರ್ಶನ ಮಾಡುವುದರ ಮೂಲಕ ಪ್ರತಿಯೊಂದು ಸಂಘದ ಸದಸ್ಯರೆಲ್ಲರನ್ನು ಒಂದೆಡೆ ಸೇರಿಸಿ ಸಂಘಗಳ ಪ್ರಸ್ತುತ ಸಂದರ್ಭದ ಕಾರ್ಯಚಟುವಟಿಕೆಗಳ ಬಗ್ಗೆ ಮುಖಾಮುಖಿ ಸಂದರ್ಶನ ಮಾಡಲಾಗಿದೆ.

ಕ್ಷೇತ್ರಕಾರ್ಯಕ್ಕೆ ಹೋಗುವ ಮೊದಲು ಒಂದು ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಸ್ವಸಹಾಯ ಸಂಘಗಳಿಗೆ ಹೋಗಿ ಮಾಹಿತಿ ಪಡೆಯಲಾಗಿದೆ. ನನ್ನ ಈ ಅಧ್ಯಯನದ ಈ ಅವಧಿಯಲ್ಲಿ ಸ್ತ್ರೀಶಕ್ತಿಸಂಘಗಳಿಗೆ ಹೋಗಿ ಅವರ ಜೊತೆ ನಿಕಟಸಂಪರ್ಕ ಇಟ್ಟುಕೊಂಡು ಆ ಸಂಘಗಳ ಅನುಕೂಲ ಮತ್ತು ಅನಾನುಕೂಲಗಳನ್ನು ದಾಖಲಿಸಲಾಗಿದೆ.

ಅಧ್ಯಾಯ ೨

ಅಧ್ಯಯನ ಕ್ಷೇತ್ರದ ಭೌಗೋಳಿಕ ಹಿನ್ನಲೆ ಮತ್ತು ಬುಡಕಟ್ಟು ಸಮುದಾಯಗಳು

ಭೌಗೋಳಿಕ ವಿವರ

ಅರಣ್ಯ ಸಂಪತ್ತು

ವಾಯುಗುಣ

ಜಲಸಂಪನ್ಮೂಲಗಳು

ಖನಿಜ ನಿಕ್ಷೇಪಗಳು

ವನ್ಯಪ್ರಾಣಿ ಸಂಪತ್ತು

ಬುಡಕಟ್ಟು ಸಮುದಾಯಗಳು

ಅಧ್ಯಾಯ ೨

ಅಧ್ಯಯನ ಕ್ಷೇತ್ರದ ಭೌಗೋಳಿಕ ಹಿನ್ನಲೆ ಮತ್ತು ಬುಡಕಟ್ಟು ಸಮುದಾಯಗಳು

ಪ್ರಸ್ತುತ ಅಧ್ಯಯನ ಕ್ಷೇತ್ರದ ಜಿಲ್ಲೆಯು ವಿಸ್ತಾರದಲ್ಲಿ ರಾಜ್ಯದಲ್ಲಿ ೧೯ನೇ ಸ್ಥಾನವನ್ನು ಪಡೆದುಕೊಂಡಿದೆ. ಕೊಡಗು ಪಶ್ಚಿಮ ಘಟ್ಟದ ಮೇಲೆ ಮೈಚೆಲ್ಲಿಕೊಂಡಿರುವ ಜಿಲ್ಲೆಯಾಗಿ ತನ್ನ ನೈಸರ್ಗಿಕ ಸೌಂದರ್ಯದಿಂದಾಗಿ ಭಾರತೀಯರಿಂದ ದಕ್ಷಿಣದ ಕಾಶ್ಮೀರವೆಂದು, ಐರೋಪ್ಯರಿಂದ ಭಾರತದ ಸ್ವಿಡ್ಜರ್‌ಲ್ಯಾಂಡ್ ಎಂದು ಅಥವ ಸ್ಕಾಟ್‌ಲ್ಯಾಂಡ್ ಎಂದು ಕರೆಯಲ್ಪಟ್ಟಿದೆ. ಈ ಜಿಲ್ಲೆಗೆ ವಿಶಿಷ್ಟವಾದ ಸಾಂಸ್ಕೃತಿಕ ಹಿನ್ನೆಲೆಯಿದ್ದು ಹಲವು ಬುಡಕಟ್ಟುಗಳಿಗೆ ನೆಲೆ ಒದಗಿಸಿದೆ. ಹಾಗೆಯೇ ಭಾರತದ ಭೂಸೇನೆಯ ಮಹಾದಂಡನಾಯಕರಾದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ಕೆ.ಎಸ್.ತಿಮ್ಮಯ್ಯನವರು ಆದಿಯಾಗಿ ಅನೇಕ ಶೂರ ಸೈನಿಕರನ್ನು ಕೊಡಗು, ದೇಶಕ್ಕೆ ಕೊಟ್ಟಿದೆ. ಕೊಡವರ ಸಂಖ್ಯೆಯ ಪ್ರಮಾಣ ನೋಡಿದಾಗ ಸೇನೆಯಲ್ಲಿ (ಭೂದಳ, ವಾಯುದಳ, ಜಲದಳ) ಉಚ್ಚಾಧಿಕಾರದಲ್ಲಿರುವ ಕೊಡವರ ಸಂಖ್ಯೆ ಬಹಳ ಅಚ್ಚರಹುಟ್ಟಿಸುವಂತದ್ದು. ಬ್ರಿಟಿಷರ ಆಗಮನದ ಪೂರ್ವದಲ್ಲಿ ಅಷ್ಟೊಂದು ವಿದ್ಯಾವಂತರಾಗಿರದ ಕೊಡವರು ಶೀಘ್ರವೇ ವಿದ್ಯಾವಂತರು ಆಗಿ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸರ್ಕಾರಿ ಸೇವೆ, ಬ್ಯಾಂಕಿಂಗ್ ಸೇವೆ ಹಾಗೂ ವೈದ್ಯಕೀಯ ಸೇವೆ, ಮುಂತಾದ ಕ್ಷೇತ್ರಗಳಲ್ಲಿ ವೇಗದ ಪ್ರಗತಿಸಾಧಿಸಿದ್ದು ಉಲ್ಲೇಖನೀಯ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಒಮ್ಮೆ ಕೊಡಗು ಸಾಕ್ಷರತೆಯಲ್ಲಿ ಇಡೀ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದ್ದ ಜಿಲ್ಲೆಯಾಗಿತ್ತು. ಈಗಲೂ ಅದು ೨-ಎನೇಯ ಸ್ಥಾನವನ್ನು ಬಿಟ್ಟುಕೊಟ್ಟಿಲ್ಲ. ಸಹಕಾರ ರಂಗದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಅಪೂರ್ವ ಪ್ರಗತಿಸಾಧಿಸಿದ ಜಿಲ್ಲೆಗಳಲ್ಲಿ ಕೊಡಗು ಒಂದು. ಸಹಕಾರಿ ದವಸ ಬ್ಯಾಂಕುಗಳು ಇಂದಿಗೂ ಇರುವುದು ಕೊಡಗಿನಲ್ಲಿ ಮಾತ್ರ.

ಬೆಟ್ಟ-ಗುಡ್ಡಗಳಿಂದ ತುಂಬಿದ ಈ ಜಿಲ್ಲೆ ಭತ್ತದ ಬೆಳೆಗೆ ಬ್ರಿಟಿಷರ ಆಗಮನದ ಪೂರ್ವದಲ್ಲಿ ಪ್ರಸಿದ್ಧವಾಗಿತ್ತು. ತನಗೆ ಬೇಕಾದಷ್ಟು ಹೆಚ್ಚು ಭತ್ತ ಬೆಳೆಯುತ್ತಿತ್ತು. ಮುಂದೆ ಕಾಫಿ ತೋಟಗಳು ಬೆಳವಣಿಗೆಯಿಂದಾಗಿ ಕರ್ನಾಟಕದಲ್ಲಿ ಕಾಫಿ ಬೆಳೆಯುವ ಜಿಲ್ಲೆಗಳಲ್ಲಿ ಈಗ ಪ್ರಥಮಸ್ಥಾನ. ಏಲಕ್ಕಿ, ಮೆಣಸುಗಳ ಬೆಳೆಗೂ ಅದು ಪ್ರಸಿದ್ಧ. ಇಲ್ಲಿನ ಪರಿಸರ ಜೇನು ಕೃಷಿಗೂ ಅನುಕೂಲಕರ. ನಾಲ್ಕು ಲಕ್ಷ ಕೆ.ಜಿ. ಜೇನುತುಪ್ಪ ಕೊಡಗಿನಲ್ಲಿ ಪ್ರತಿವರ್ಷ ಉತ್ಪನ್ನವಾಗುತ್ತದೆ. ಕೊಡಗಿನ ಕಿತ್ತಳೆಕೂಡ

ಪ್ರಸಿದ್ಧವಾಗಿದ್ದರೂ, ಇತ್ತೀಚೆಗೆ ಅದರಲ್ಲೂ ಹಿಂಜರಿತವಾಗುತ್ತದೆ. ಕೊಡಗಿನಲ್ಲಿ ವಾಸವಾಗಿರುವ ವಿವಿಧ ಬುಡಕಟ್ಟುಗಳ ಜನ ಬೆತ್ತದ, ಬಿದಿರಿನ ಹಾಗೂ ಬಳ್ಳಿಗಳ ಕೆಲಸದಂಥ ವಿವಿಧ ಕರಕುಶಲ ಕೆಲಸಗಳಲ್ಲಿ ಪರಿಣಿತರು. ಸ್ವಾತಂತ್ರ್ಯನಂತರ ಹೆಚ್ಚು ಚಟುವಟಿಕೆಯನ್ನು ಹೊಂದಿರುವ ಜನರು ಹೊರಗಿನಿಂದ ಬಂದು ಕೊಡಗಿನ ಮೂಲ ನಿವಾಸಿಗಳು ತಾವು ಎಲ್ಲಿ ಅಲ್ಪಸಂಖ್ಯಾತರಾಗಿರುತ್ತವೋ ಎಂಬ ಭಯ ಕೊಡಗಿನಲ್ಲಿರುವ ಜನರಿಗೆ ಮೂಡಿದೆ. ಕೊಡಗಿನಲ್ಲಿ ಸಾಮಾಜಿಕ ಸಾಮರಸ್ಯ ಮೂಡುತ್ತಿದೆ.

ಕೊಡಗಿನಲ್ಲಿರುವ ಪ್ರವಾಸೋದ್ಯಮಕ್ಕಿರುವ ಅವಕಾಶ ವಿಫುಲ. ಇಲ್ಲಿನ ನೈಸರ್ಗಿಕ ಸೌಂದರ್ಯ, ವನ-ವನ್ಯಮೃಗಗಳು, ಅಭಯಾರಣ್ಯದ ರಮ್ಯತೆ, ಕಾವೇರಿಯ ಉಗಮಸ್ಥಾನವಾದ ತಲಕಾವೇರಿಯ ಹಾಗೂ ಆ ನದಿಯ ಉಗಮ ತಟದಲ್ಲಿರುವ ಭಾಗಮಂಡಲ, ನಂಜರಾಯಪಟ್ಟಣ, ಬಲಮುರಿ, ಸುಂಟಿಗುತ್ತಿಗಳಂತಹ ಸ್ಥಳಗಳು ರಮ್ಯವಾತಾವರಣದ ತಾಣಗಳಾಗಿವೆ. ಭಾಗಮಂಡಲದ ದೇವಾಲಯ ವಿನ್ಯಾಸ ಅಲ್ಲಿನ ಅಪೂರ್ವ ಕಾಷ್ಟಶಿಲ್ಪಗಳ ವೈಶಿಷ್ಟ್ಯತೆಗಳಿಗೆ ಸಿಗಬೇಕಾದ ಪ್ರಚಾರಸಿಕ್ಕಿಲ್ಲ. ಇಲ್ಲಿನ ಕೊಡವರ, ಗೌಡ ಜನಾಂಗದವರು, ಕುಡಿಯರು, ಎರವರು, ವಿವಿಧ ವರ್ಗಗಳ ಜಾನಪದ ಕಲೆಗಳ ವಿಶಿಷ್ಟತೆಗಳು, ಇಲ್ಲಿನ ಸ್ಥಾನಿಕ ದೇವತೆಗಳ ಜಾತ್ರೆಗಳಲ್ಲಿನ ಉತ್ಸವದ ಜಾನಪದ ಕಲೆಗಳ ಪ್ರದರ್ಶನ ವೈವಿಧ್ಯ, ವೈಶಿಷ್ಟ್ಯ ರೋಮಾಂಚಕ. ಅಬ್ಬಿ, ಅಬ್ಬಿಮಠ, ಬರಪೊಳೆ, ಇರ್ಪುಗಳಂತಹ ಜಲಪಾತಗಳ ವೀಕ್ಷಣೆಗೆ ಚೇತೋಹಾರಿ, ದುರ್ಗಮ ಬೆಟ್ಟಗಳನ್ನೇರುವ ಚಾರಣ ಸಾಹಸಿಗಳನ್ನು ಇಲ್ಲಿನ ಗಿರಿಶಿಖರಗಳು ಕೈಮಾಡಿ ಕರೆಯುತ್ತಿವೆ. ಆರ್ಥಿಕವಾಗಿ ಕೊಡಗು ಮುಂದುವರಿದ ಜಿಲ್ಲೆ. ಇಲ್ಲಿನ ತಲಾದಾಯ ರಾಜ್ಯದ ಸರಾಸರಿ ಆದಾಯಕ್ಕಿಂತ ಹೆಚ್ಚಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಬಡತನರೇಖೆಯ ಕೆಳಗಿರುವಂತಹ ಗಿರಿಜನರ ಸಂಖ್ಯೆಯು ಸಣ್ಣದಲ್ಲ. ಇದರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರು ಹೆಚ್ಚಿದ್ದಾರೆ. ಇಡೀ ರಾಜ್ಯದಲ್ಲಿ ರೈಲು ಸಂಪರ್ಕವಿಲ್ಲದ ಒಂದೇ ಒಂದು ಜಿಲ್ಲೆ ಕೊಡಗಾದರೂ ರಸ್ತೆ ಸಂಪರ್ಕ ಸುಧಾರಣೆ ಕಂಡಿದೆ. ಶಿಕ್ಷಣ, ಆರೋಗ್ಯ, ಸೇವೆಗಳ ವ್ಯವಸ್ಥೆಯಲ್ಲೂ ಸರ್ಕಾರದ ಜೊತೆ ಸ್ಪರ್ಧಿಸಿ ಶ್ರದ್ಧೆಯಿಂದ ದುಡಿಯುವ ಖಾಸಗಿ ಸಂಸ್ಥೆಗಳು ಇಲ್ಲಿವೆ. ದಲಿತರ ಮತ್ತು ಬುಡಕಟ್ಟು ಸಮುದಾಯಗಳ ಪ್ರಗತಿಗೂ ಸರ್ಕಾರ ನಡುಕಟ್ಟಿದೆ. ಅದರ ಚಿತ್ರಣ ನೀಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಜಿಲ್ಲೆಯಲ್ಲಿ ಕೈಗಾರಿಕಾ ಪ್ರಗತಿ ಅಷ್ಟಿಲ್ಲ, ಆದರೆ ಹೊಸ ಕೈಗಾರಿಕೆಗಳು ಜಿಲ್ಲೆಯ ನೈಸರ್ಗಿಕ ಸ್ವರೂಪವನ್ನು ಪರಿಸರ ಸಮತೋಲನವನ್ನು ರಕ್ಷಿಸಬಲ್ಲವೇ ಎಂಬುದು ಗಮನಿಸಬೇಕಾದ ಪ್ರಶ್ನೆ.

ಹಾಲೇರಿ ವಂಶದ ರಾಜರ ಕಾಲದಿಂದ ಕೊಡಗಿಗೆ ಒಂದು ಭೌಗೋಳಿಕ ಪ್ರತ್ಯೇಕತೆ ಇದ್ದಂತೆ, ಅಲ್ಲಿನ ಸಾಂಸ್ಕೃತಿಕ ಹಾಗೂ ಆರ್ಥಿಕ ವ್ಯವಸ್ಥೆಯಲ್ಲೂ ವೈಶಿಷ್ಟ್ಯಗಳಿವೆ. ಕೊಡಗಿನ ರಾಜರ ಕಾಲದಲ್ಲಿ ಮೂಡಿ ಬಂದ 'ಜಮ್ಮ' ಎಂಬ ಭೂವ್ಯವಸ್ಥೆ ಇಲ್ಲಿನ ಜನಜೀವನದಲ್ಲಿ ತನ್ನದೇ ಪಾತ್ರವಹಿಸಿದೆ. ಅರಸರ ಆಳ್ವಿಕೆ ಮುಗಿದ ಮೇಲೆ ವಿಸ್ತರಿಸಿದ ಶಿಕ್ಷಣ ವ್ಯವಸ್ಥೆ ಹಾಗೂ ತೋಟಗಾರಿಕೆ ಕೊಡಗಿಗೆ ತನ್ನದೇ ವಿಶಿಷ್ಟ ಛಾಪನ್ನು ನೀಡಿದೆ.

ಕೊಡಗಿನ ಭೌಗೋಳಿಕ ವಿಸ್ತೀರ್ಣ

ಈ ಪ್ರದೇಶದ ಒಟ್ಟು ವಿಸ್ತೀರ್ಣವು ೪.೧೦೨ ಚ.ಕಿ.ಮೀ, ಒಟ್ಟು ಜನಸಂಖ್ಯೆಯು ೨೦೦೧ರ ಜನಗಣತಿಯ ಪ್ರಕಾರ ಸುಮಾರು ೫೪೮೫೬೧ ಜನರು ಕೊಡಗಿನಲ್ಲಿದ್ದಾರೆ. ೧೯೫೬ರಲ್ಲಿ ಕೊಡಗಿನ ಅರ್ಧಭಾಗವು ಅರಣ್ಯದಿಂದ ಕೂಡಿತ್ತು. ಅದು ರಾಜ್ಯಮೀಸಲು ಅರಣ್ಯ ಅಥವಾ ಪೈಸಾರಿಯಾಗಿತ್ತು. ಮೀಸಲು ಅರಣ್ಯವು ೩೩೦, ೭೨೬ ಎಕರೆಗಳು ಮತ್ತು ಪೈಸಾರಿಯು ಸುಮಾರು ೧೭೭,೦೦೦ ಎಕರೆಗಳಾಗಿತ್ತು. ಕೊಡಗಿನ ಅರಣ್ಯ ರಕ್ಷಣೆಯಲ್ಲಿ ಬ್ರಿಟಿಷರು ಕ್ರಮೇಣ ಅಪಾರ ಕಾಳಜಿ ವಹಿಸಿದರು. ಆರಂಭದ ದಿನಗಳಲ್ಲಿ ಕಾಫಿ ಬೆಳೆಯನ್ನು ಜನಪ್ರಿಯಗೊಳಿಸುವ ಭರದಲ್ಲಿ ಸಾವಿರಾರು ಎಕರೆ ನಿತ್ಯಹರಿದ್ವರ್ಣ ಕಾಡುಗಳು ಪ್ಲಾಂಟರರ ಕೊಡಲಿಗೆ ಬಲಿಯಾಗಿವೆ. "೧೮೯೩ರಲ್ಲಿ ಕಾಡುಗಳ ವಿಸ್ತೀರ್ಣ ಇಂತಿದ್ದಿತು. ಮೀಸಲು ಅರಣ್ಯ ೭೩,೨೦೫ ಎಕ್ರೆ, ರಕ್ಷಿತಾ ಅರಣ್ಯ ೮೫.೮೪೭. ಘಟ್ಟದ ನಿತ್ಯಹರಿದ್ವರ್ಣ ಕಾಡುಗಳು ೧,೯೩,೩೩೮, ಹೀಗೆ ಒಟ್ಟು ೫,೪೬,೮೫೦ ಎಕರೆ ಅರಣ್ಯವಿತ್ತು. ಇದರೊಡನೆ ೭೯೯ ದೇವರಕಾಡುಗಳು ಕೂಡ ಇದ್ದು ಕಾಡುಗಳ ರಕ್ಷಣೆಯಲ್ಲಿ ಇವು ಮಹತ್ತರವಾದ ಪಾತ್ರವಹಿಸಿದವು."[೧] ಪಶ್ಚಿಮಘಟ್ಟಗಳ ಮೇಲೆ ಹಾಗೂ ಬುಡಗಳ ಪ್ರದೇಶಗಳನ್ನು 'ಮಲೆಗಳು' ಎನ್ನುತ್ತಿದ್ದು ಅವುಗಳನ್ನು ಏಲಕ್ಕಿಯನ್ನು ಬೆಳೆಯಲು ಕೆಲವು ನಿರ್ಧಿಷ್ಟ ಅವಧಿಯವರೆಗೆ ಕೊಡಗರ ಕುಟುಂಬಗಳಿಗೆ ನೀಡಲಾಗುತ್ತಿತ್ತು.

ಕೊಡಗಿನ ಜನಸಂಖ್ಯೆ

ಕೊಡಗು ಭೌಗೋಳಿಕವಾಗಿ ಚಿಕ್ಕದಾಗಿದ್ದರೂ ಜನಸಂಖ್ಯೆಯ ದೃಷ್ಠಿಯಿಂದ ನೋಡಿದಾಗ ಸುಮಾರು ಹದಿನೆಂಟು ಜಾತಿ ಪಂಗಡಗಳು ಕಂಡುಬರುತ್ತವೆ. "೧೯೭೦ರ ದಶಕದಲ್ಲಿ ಕೊಡಗಿನಲ್ಲಿದ್ದ ರೆವರೆಂಡ ರಿಕ್ಟರ್‌ನು ಅವುಗಳನ್ನು ಈ ರೀತಿಯಾಗಿ ಗುರುತಿಸಿದ್ದಾನೆ. ಬಹಳ ಪ್ರಾಚೀನವಾದ ಪಂಗಡಗಳಾದ ಕೊಡವರು ಮತ್ತು ಹೊಲೆಯರು ಇಡೀ ಜನಸಂಖ್ಯೆಯ ೧/೩ ಭಾಗವಾಗಿತ್ತು. ಕೊಡವರು, ಅಮ್ಮ ಕೊಡವರು, ಐಂಬೊಕ್ಕಲಿ ಹೆಗ್ಗಡೆಗಳು. ಐರಿಗಳು, ಮಡಿವಾಳರು, ಕಾವಾಡಿಗಳು, ನಾಯಿಂದರು, ಕೋಯಗಳು, ಕುಡಿಯರು ಮತ್ತು ಮೇದರು ವಿಶಿಷ್ಟ ಕೊಡವ ಭಾಷೆಯನ್ನು ಮಾತನಾಡುವ ಜಾತಿಪಂಗಡಗಳು. ಇತರೇ ಭಾಷೆಗಳನ್ನಾಡುವ ಜಾತಿ ಬುಡಕಟ್ಟು ಪಂಗಡಗಳೆಂದರೇ ಶಿವಚಾರಿಗಳು, ಗೌಡರು, ಪಾಲೆಯರು, ಮಲೆಯರು, ಕುರುಬರು, ಜೇನುಕುರುಬರು, ಬೆಟ್ಟಕುರುಬರು, ಅಡಿಯರು, ಎರವರು, ಕಾಪಾಳರು, ಬ್ರಾಹ್ಮಣರು, ಸೆಟ್ಟಿಗಳು, ರೋಮನ್ ಕ್ಯಾಥೋಲಿಕ್, ಕ್ರಿಶ್ಚಿಯನ್ನರು, ಪಾರ್ಸಿಗಳು, ಮುಸಲ್ಮಾನರು, ತೆಲುಗರು, ತಮಿಳರು, ಇತ್ಯಾದಿ.[೨]

ರಿಕ್ಟರನ ಪ್ರಕಾರ "೧೮೭೦ರಲ್ಲಿ ಸುಮಾರು ೨೦೦ ಯುರೋಪಿಯನ್, ೫೦ ಈಸ್ಟ್ ಇಂಡಿಯನ್ನರು ಇತಿಹಾಸ ಕಾಲದಿಂದ ಇಂದಿನವರೆಗೆ ಕೊಡಗಿನ ಜನಸಂಖ್ಯೆಯು ನಿಧಾನಗತಿಯಲ್ಲಿ ಏರುವುದನ್ನು ಕಾಣಬಹುದಾಗಿದೆ. ಅಲ್ಲದೆ ಪ್ರತಿವರ್ಷ ಸುಮಾರು ೩೦,೦೦೦-೪೦,೦೦೦ ಕಾರ್ಮಿಕರು ಕೊಡಗಿನ ಹೊರಗಡೆಯಿಂದ ಕಾಫಿ ತೋಟಗಳಲ್ಲಿ ಕೆಲಸಮಾಡಲು ಬರುತ್ತಿದ್ದಾರೆ. ಜನಸಂಖ್ಯೆಯು

ಕೊಡಗಿನಲ್ಲಿ ೧೯೦೧ರಲ್ಲಿ ೧,೮೦,೬೦೭, ೧೯೫೧ರಲ್ಲಿ ೨,೨೯,೪೦೫, ೧೯೯೧ರಲ್ಲಿ ೪,೮೫,೨೨೯, ೨೦೦೧ರ ಜನಗಣತಿಯ ಪ್ರಕಾರ ೫೪೮೫೬೧ ಜನಸಂಖ್ಯೆ ಇದ್ದಾರೆ ಎಂದು ವರದಿ ತಿಳಿಸುತ್ತದೆ."[೩]

ಅಧ್ಯಯನ ಕ್ಷೇತ್ರಕ್ಕೆ ಪ್ರವೇಶ

ಪರಿಸರ ಅಧ್ಯಯನ ಇತ್ತೀಚಿನ ದಿನಗಳಲ್ಲಿ ಪ್ರಮುಖವಾದುದು. ಹೀಗಾಗಿ ಪರಿಸರವೆಂದರೇ ಆರ್ಥಿಕ ಕ್ಷೇತ್ರಗಳ ಪಾಲುದಾರಿಕೆಯ ಅಂಶವೆಂದು ವಿಶಿಷ್ಠ ಗಮನಸೆಳೆದಿದೆ. ಮಾನವ ಜನಾಂಗದ ಮತ್ತು ಆರ್ಥಿಕತೆಯ ಅಂಗವಾಗಿ ಪರಿಸರದ ಸಂಬಂಧವನ್ನು ಅಧ್ಯಯನಿಸಬೇಕಾದ ಅಗತ್ಯತೆ ಪರಿಸರ ಆರ್ಥಿಕ ಚಟುವಟಿಕೆಗಳ ಜೊತೆಗೆ ಮಾನವನ ಕಲ್ಯಾಣದ ಮೇಲೆ ಪ್ರಭಾವ ಬೀರುತ್ತದೆ. ಪ್ರಕೃತಿಯಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳನ್ನು ಪರಿಸರದ ಒಂದು ಅಂಗವಾಗಿ ಗುರುತಿಸಬಹುದು. ಅನಾದಿಕಾಲದಿಂದಲೂ ನಿಸರ್ಗ ಮತ್ತು ಮಾನವನ ಸಂಬಂಧ ವ್ಯಾಪಕವಾಗಿ ಬೆಳೆದುಕೊಂಡು ಪರಿವರ್ತನೆಗೊಳ್ಳುತ್ತಾ ಬಂದಿದೆ.

ಪ್ರಕೃತಿಯು ಮಾನವನಿಗೆ ಅನಾದಿ ಕಾಲದಿಂದಲೂ ಸಂಬಂಧ ಇದ್ದದ್ದು ತಿಳಿದುಬರುತ್ತದೆ. ಆದಿಮ ಕಾಲದ ಮಾನವನು ತಾನು ಪ್ರಕೃತಿಯ ಒಂದು ಅಂಗವೆಂದು ತಿಳಿದು ಪ್ರಕೃತಿ ಶಕ್ತಿಯಲ್ಲಿ ಅಡಕವಾಗಿರುವವನೆಂದು ಜೀವಿಸುತ್ತಾ ಬಂದ ಉದಾಹರಣೆಗಳು ಹಲವಾರು. ಇಂಥ ಪ್ರಕೃತಿಯನ್ನು ಅಭಿವೃದ್ಧಿ ಮಾನದಂಡದಲ್ಲೂ ಅಳತೆ ಮಾಡಲಾಗಿತ್ತು. ಶ್ರಮವಿಭಜನೆಯಂತು ಪ್ರಕೃತಿಯಿಂದಲೇ ಬೆಳೆದು ಬಂದ ಶುದ್ಧ ಸರಳ ರೀತಿಯದಾಗಿತ್ತು. ಪುರುಷ ಮತ್ತು ಸ್ತ್ರೀಯರ ನಡುವೆ ಶ್ರಮ ವಿಭಜನೆಗೆ ಮೂಲ ಕಾರಣವು ಪರಿಸರ. ಪುರುಷರು ಬೇಟೆಗೆ, ಮಹಿಳೆಯರು ಆಹಾರಕ್ಕೆ ಬೇಕಾಗುವ ಕಚ್ಚಾಪದಾರ್ಥಗಳ ತಯಾರಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದಲೇ ಬುಡಕಟ್ಟು ಸಮುದಾಯದಲ್ಲಿ ಶ್ರಮವಿಭಜನೆ ಆರಂಭಗೊಂಡಿತ್ತು. ಪ್ರಾಚೀನ ಕಾಲದ ಸಮಾಜದಿಂದ ಹಿಡಿದು ಆಧುನಿಕ ಕಾಲದ ಸಂಕೀರ್ಣ ಸಮಾಜದವರೆಗೂ ಸಮುದಾಯಗಳ ಬೆಳವಣಿಗೆ ಹಂತಗಳಲ್ಲಿ ಆಹಾರದ ಸ್ವರೂಪದಲ್ಲಿನ ಬದಲಾವಣೆಗಳನ್ನು ಕಾಣಬಹುದು.

ಔದ್ಯೋಗಿಕರಣ ಮತ್ತು ನಗರೀಕರಣ ಪ್ರಭಾವದಿಂದ ಆಧುನಿಕ ಸಮಾಜದ ಮಾನವನು ಜಗತ್ತಿನ ಜೀವರಾಶಿಗಳನ್ನು ನಿಯಂತ್ರಿಸುವ ಅಗಾಧವಾದ ಸಾಮರ್ಥ್ಯ ಹೊಂದುವುದರ ಜೊತೆಗೆ ಪರಿಸರದ ಮೇಲೆ ಮಾನವ ತನ್ನ ಸಾರ್ವಭೌಮತ್ವವನ್ನು ಹೇರಲು ಪ್ರಯತ್ನಿಸುತ್ತಿದ್ದಾನೆ. ಹೀಗಾಗಿ ಸಮುದಾಯದ ಆರ್ಥಿಕಾಭಿವೃದ್ಧಿಯು ಅವ್ಯಾಹತವಾಗಿ ಸಾಗಬೇಕಾದರೆ, ಆರ್ಥಿಕ ಉತ್ಪಾದನೆಗೆ ಪರಿಸರದ ವ್ಯವಸ್ಥೆಯೇ ಆಧಾರಸ್ತಂಭ. ಪ್ರಾಕೃತಿಕ ಸಂಪನ್ಮೂಲವಾದ ಪರಿಸರ ಮಾನವನ ಪ್ರಾಥಮಿಕ ಅಗತ್ಯ ಎಂಬುದನ್ನು ಮರೆಯಬಾರದು. ಹೀಗಾಗಿ ಬುಡಕಟ್ಟು ಸಮುದಾಯಗಳು ಮತ್ತು ನಿಸರ್ಗದ ನಡುವಿನ ಸಂಬಂಧ ನಿರಂತರವಾದುದು. ಹಲವಾರು ವರ್ಷಗಳ ಹಿಂದೆ ಮುಕ್ತವಾಗಿ ದೊರೆಯುತ್ತಿದ್ದ ನೈಸರ್ಗಿಕ ಸಂಪನ್ಮೂಲಗಳು ಈಗ ಬದಲಾದ ವ್ಯವಸ್ಥೆಯ ಜಾಗತೀಕರಣ, ಖಾಸಗೀಕರಣ ನೀತಿಯ ಪ್ರಭಾವದಿಂದಾಗಿ

ವ್ಯಾಪಾರಸ್ಥರು, ಬಂಡವಾಳಶಾಹಿಗಳು, ನಿಯಂತ್ರಿಸತೊಡಗಿದ್ದಾರೆ. ಇದೇ ಪರಿಸರದಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳ ಜೀವನಮಟ್ಟ ಪರಿಸರದಿಂದಲೇ ಉತ್ತಮಮಟ್ಟದಿಂದ ಕೂಡಿತ್ತು. ಆದರೆ ಸುಧಾರಣೆಯ ನೆಪದಲ್ಲಿ ಪರಿಸರವನ್ನು ನಾಶಪಡಿಸುವುದರಲ್ಲಿ ಇಂದಿನ ಯೋಜನೆಗಳು ಮುಂದಾಗಿವೆ.

ಬುಡಕಟ್ಟುಗಳು ವಾಸವಾಗಿರುವ ವೀರಾಜಪೇಟೆ ತಾಲೂಕು ಮೈಸೂರುನಿಂದ ೭೦ ಕಿ.ಮೀ. ದೂರದಲ್ಲಿದೆ. ಪಶ್ಚಿಮ ಭಾಗದಲ್ಲಿರುವ ವೀರಾಜಪೇಟೆ ಪರಿಸರವು ಪ್ರಕೃತಿ ಸೌಂದರ್ಯದಿಂದ ಕಂಗೊಳಿಸುತ್ತಿದೆ. ಎಲ್ಲೆಲ್ಲೂ ಹಸಿರು ಅಲ್ಲಲ್ಲಿ ಬೆಟ್ಟ ಗುಡ್ಡಗಳಿಂದ ಕೂಡಿದೆ. ಬುಡಕಟ್ಟು ಸಮುದಾಯಗಳು ಮೈಸೂರಿನಿಂದ ಹುಣಸೂರು ಮಾರ್ಗವಾಗಿ ಹೋಗುವಾಗ ಕೊಡಗಿನ ಚೆಕ್‌ಪೋಸ್ಟ್‌ಗಳು ಪ್ರಾರಂಭವಾದ ನಂತರ ರಸ್ತೆಯ ಎಡಬದಿಯಲ್ಲಿ ಪಂಜರಿಯರವ ಪಣಿಯನ್ ಬುಡಕಟ್ಟು ಸಮುದಾಯಗಳ ಹಾಡಿಗಳನ್ನು ನಿರ್ಮಿಸಲಾಗಿದೆ. ಈ ಹಾಡಿಗಳು ವೀರಾಜಪೇಟೆ ತಾಲೂಕಿನ ವ್ಯಾಪ್ತಿಗೆ ಒಳಗೊಂಡಂತೆ ದಟ್ಟವಾದ ಅರಣ್ಯದಿಂದ ಆವೃತ್ತವಾಗಿದೆ. ಈ ದಟ್ಟವಾದ ಅರಣ್ಯ ಪ್ರದೇಶಗಳಲ್ಲಿ ತೇಗ, ಬಿದಿರು, ನೀಲಗಿರಿ, ಸಿಲ್ವರ್ ಅನೇಕ ಜಾತಿಯ ಮರಗಳು ಕಂಡುಬರುತ್ತವೆ. ಈ ಹಾಡಿಗಳ ಸುತ್ತಲು ಆವೃತ್ತವಾಗಿರುವ ಹಸಿರಿನಿಂದ ಕಂಗೊಳುತ್ತಿಸುತ್ತಿರುವ ಅರಣ್ಯವು ಸೌಂದರ್ಯದ ನೆಲೆಯಾಗಿ ಕಾಣುತ್ತದೆ. ಈ ಪ್ರಕೃತಿ ಸೌಂದರ್ಯ ನೆಲೆಯಲ್ಲಿ ಬುಡಕಟ್ಟು ಸಮುದಾಯಗಳು ಪ್ರತ್ಯೇಕವಾದ ಹಾಡಿಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿದ್ದಾರೆ.

ಬುಡಕಟ್ಟುಗಳು ಸುಮಾರು ೧೯೭೫ರಿಂದ ಇಲ್ಲಿಯೇ ಸ್ಥಿರವಾಗಿ ನೆಲೆನಿಂತು ಜೀವನ ಸಾಗಿಸುತ್ತಿದ್ದಾರೆ. ಹೀಗಾಗಿ ಬೆಟ್ಟ, ಗುಡ್ಡ, ಕಾಡುಗಳಿಂದ ಕೂಡಿದ ಈ ಪ್ರದೇಶವನ್ನು ಬಹುವಾಗಿ ಇಷ್ಟಪಡುವರು. ಇವರು ಮನೆಗಳನ್ನು ನಿರ್ಮಿಸಿಕೊಂಡು ಕಾಡಿನಲ್ಲಿ ದೊರೆಯುವ ಉತ್ಪನ್ನಗಳನ್ನು ಹುಡುಕಿ ಮಾರಾಟ ಮಾಡಿ ಮಾಲೀಕರ ಕಾಫಿ ತೋಟಗಳಲ್ಲಿ ದಿನಗೂಲಿ ಕಾರ್ಮಿಕರಾಗಿ ಅವರ ತೋಟಗಳಲ್ಲಿ ಆಶ್ರಯವನ್ನು ಪಡೆದುಕೊಂಡಿದ್ದರೆ ಮತ್ತೆ ಕೆಲವರು ಪ್ರತ್ಯೇಕವಾದ ಹಾಡಿಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಇವರು ವಾಸಮಾಡುವ ಹಾಡಿಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಹೊಂದಾಣಿಕೆ ಜೀವನ ಸಾಗಿಸುವ ಸಮುದಾಯಗಳು ಅಲ್ಪಸ್ವಲ್ಪ ಸೌಕರ್ಯಗಳನ್ನು ಪಡೆದುಕೊಂಡಿದ್ದರೆ, ಅರಣ್ಯದಲ್ಲಿ ವಾಸಿಸುವ ಬುಡಕಟ್ಟುಗಳು ತೊರೆಗಳಿಂದ, ಕಾಲುವೆಗಳಿಂದ, ಹಳ್ಳಗಳಿಂದ ಬರುವ ನೀರನ್ನು ಕುಡಿಯುವ ಸ್ಥಿತಿ ಇನ್ನು ತಪ್ಪಿಲ್ಲ. ಅರಣ್ಯದಲ್ಲಿ ವಾಸಮಾಡುವ ಬುಡಕಟ್ಟುಗಳಿಗೆ ಉತ್ತಮ ಸೌಕರ್ಯಗಳು ದೊರೆಯದಿದ್ದರೂ ಪರಿಸರವನ್ನು ಪ್ರೀತಿಸುವ ಹೃದಯವಂತರಾಗಿದ್ದಾರೆ.

"ಪ್ರಸ್ತುತ ಅಧ್ಯಯನಕ್ಷೇತ್ರದ ಭೌಗಳಿಕ ವಿಸ್ತೀರ್ಣ ೧,೬೫೪ ಚ.ಕಿ.ಮೀ. ಇದೆ. ಜನಸಂಖ್ಯೆಯು ೨೦೦,೬೨೮. ಒಟ್ಟು ಗ್ರಾಮಗಳು ೯೪, ಪಟ್ಟಣಗಳ ಸಂಖ್ಯೆ ಎರಡನ್ನೂ ಹೊಂದಿದ್ದು, ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುವವರು ೧೭೮,೧೪೮. ನಗರ ಪ್ರದೇಶಗಳಲ್ಲಿ ೨೨,೪೮೦ ಜನರು

ವಾಸಿಸುತ್ತಿದ್ದಾರೆ. ಇಲ್ಲಿನ ಜನಸಾಂದ್ರತೆ ೧೨೪ ಆಗಿದೆ. ಬುಡಕಟ್ಟು ಸಮುದಾಯಗಳ ೩೦,೫೨೧ರಷ್ಟು ಜನರು ಈ ಅಧ್ಯಯನ ಕ್ಷೇತ್ರದ ವ್ಯಾಪ್ತಿಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ."[೪]

ಅಧ್ಯಯನ ಕ್ಷೇತ್ರದ ಭೌಗೋಳಿಕ ಪರಿಸರ

ಅರಣ್ಯ ಸಂಪತ್ತು: ಈ ಅಧ್ಯಯನಕ್ಷೇತ್ರದ ವ್ಯಾಪ್ತಿಯಲ್ಲಿ ಅರಣ್ಯ ಸಂಪತ್ತು ಹೇರಳವಾಗಿದೆ. ಈ ಅರಣ್ಯದಲ್ಲಿ ಸಿಗುವಂತಹ ಉತ್ಪನ್ನವು ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗುತ್ತಿದೆ. ಈ ಪ್ರದೇಶದಲ್ಲಿ ಅನೇಕ ಗಿಡಮೂಲಿಕೆಗಳು ಔಷಧಿಯ ಬಗೆಗೆ ಸ್ಥಳೀಯ ಜನರಿಗೆ ಹೆಚ್ಚಿನ ಪರಿಚಯವಿದೆ. ಇಲ್ಲಿ ದೊರೆಯುವ ಆನೆದಂತ, ಜೇನುತುಪ್ಪ, ಮೇಣ, ದಾಲ್ಚಿನ್ನಿ, ಅಳಲೆಕಾಯಿ, ಸೀಗೆಕಾಯಿ, ಶ್ರೀಗಂಧ ಮುಂತಾದವುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆಯಿದೆ. ಹಲವಾರು ಬುಡಕಟ್ಟು ಜನರು ಕೂಡ ತಮ್ಮ ಜೀವನೋಪಾಯಕ್ಕೆ ಅರಣ್ಯೋತ್ಪನ್ನಗಳನ್ನೇ ಅವಲಂಬಿಸಿದ್ದಾರೆ.

ದೇವರ ಕಾಡುಗಳು: ಈ ಕಾಡುಗಳು ಅರಣ್ಯ ಮತ್ತು ಕಂದಾಯ ಇಲಾಖೆಗಳ ಮೇಲ್ವಿಚಾರಣೆಗೆ ಒಳಪಟ್ಟಿದ್ದು, ಅವುಗಳನ್ನಾ ಒಂದು ನಿರ್ದಿಷ್ಟ ದೇವರು ಅಥವಾ ದೇವಸ್ಥಾನಕ್ಕೆ ವಹಿಸಲಾಗಿರುತ್ತದೆ. ದೇವರಪೂಜೆಗೋಸ್ಕರ ಉಪಯೋಗಕ್ಕೆ ಬರುವ ಸೌದೆ, ಹೂವು, ಹಣ್ಣುಗಳು, ದೇವಸ್ಥಾನದ ನಿರ್ಮಾಣ ಮತ್ತು ದುರಸ್ಥಿಗೆ ಬೇಕಾಗುವ ಮರದ ಸಾಮಾನು ಮತ್ತು ಉತ್ಸವಗಳ ಸಮಯದಲ್ಲಿ ನೆರಳನ್ನು ಒದಗಿಸಲು ನಿರ್ಮಿಸುವ ಚಪ್ಪರದ ಸಾಮಾನುಗಳನ್ನು ದೇವರ ಕಾಡುಗಳೆಂದು ಬಳಸಲು, ಸಂಬಂಧಿಸಿದ ದೇವಸ್ಥಾನದ ಆಡಳಿತವರ್ಗಕ್ಕೆ ಅಧಿಕಾರ ನೀಡಲಾಗಿದೆ. ಅಲ್ಲದೆ ದೇವರುಕಾಡುಗಳ ಸಮೀಪವಿರುವ ಹಳ್ಳಿ ಜನರಿಗೆ ದೇವರಕಾಡಿನಲ್ಲಿ ಹಾದು ಹೋಗಲು ಮತ್ತು ನೀರನ್ನು ಉಪಯೋಗಿಸಲು ಮಾಮೂಲಿ ಹಕ್ಕನ್ನು ನೀಡಲಾಗಿದೆ. ದೇವರಿಗಾಗಿ ಮೀಸಲಿಟ್ಟಿರುವ ದೇವರಕಾಡನ್ನು ಭಯಭಕ್ತಿಯಿಂದ ಕಂಡು, ಆ ಕಾಡಿನ ಸಂಪನ್ಮೂಲಗಳನ್ನು ಸಂಬಂಧಿಸಿದ ದೇವಸ್ಥಾನಕ್ಕೆ ಮೀಸಲಾಗಿಡಲಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ದೇವರ ಕಾಡನ್ನು ಅತಿಕ್ರಮಿಸಿ ಕಾಡಿನ ಸಂಪನ್ಮೂಲಗಳನ್ನು ಬೇರೆ ಕೆಲಸಕ್ಕೆ ಉಪಯೋಗಿಸಲಾಗುತ್ತಿದೆ. ಈ ಕಾಡಿನ ಸಂಪನ್ಮೂಲಗಲನ್ನು ಉಪಯೋಗಿಸಿಕೊಳ್ಳಲು ಹಳ್ಳಿಜನರಿಗೆ ಅನುಮತಿ ನೀಡಲಾಗಿಲ್ಲ. ಕಾಡಿನಲ್ಲಿರುವ ಉಪಯೋಗಕ್ಕೆ ಬರುವ ವಾಣಿಜ್ಯ ಸಂಪತ್ತನ್ನು ಗುರುತಿಸಿ ಸರ್ಕಾರದ ಗಮನಕ್ಕೆ ತಂದು ಅವುಗಳನ್ನು ಮಾರಾಟ ಮಾಡಿ ಹಣವನ್ನು ದೇವರ ನಿಧಿಗೆ ಅರ್ಪಿಸಲಾಗುತ್ತದೆ.

ಹಳ್ಳಿ ಜನರಿಗೆ ಒಣಗಿದ ಮತ್ತು ಮರದಿಂದ ಬಿದ್ದಿದ್ದ ಕೊಂಬೆಗಳನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗಿದೆ. ಕೆಲವು ಸ್ವಲ್ಪ ಭಾಗಗಳನ್ನು ಸ್ಥಳೀಯ ಜನರು ಅತಿಕ್ರಮಿಸಿದ್ದಾರೆಂದು ತಿಳಿದುಬಂದಿದೆ. ದೇವರ ಕಾಡುಗಳು ನೀರಿನ ಮೂಲಗಳಾದ ಹೊಳೆ ಮತ್ತು ಜರಿಗಳನ್ನು ಸಂರಕ್ಷಿಸಿವಲ್ಲಿ ಪ್ರಮುಖ ಪಾತ್ರಗಳನ್ನು ವಹಿಸುತ್ತದೆ. ಸುತ್ತಮುತ್ತಲಿನ ಪ್ರದೇಶಕ್ಕೆ ಸರ್ವಕಾಲಿಕ ನೀರು ಸಿಗುವಂತೆ ಮಾಡುವಲ್ಲಿ ಸಹಾಯಕವಾಗಿದೆ. ಈ ಕಾಡಿನಲ್ಲಿ ಅಮೂಲ್ಯವಾದ ಔಷಧಿ ಸಸ್ಯಗಳಿವೆ. ಅಪರೂಪ

ಸಸ್ಯ ಪ್ರಭೇಧಗಳು ಲಭ್ಯವಿದ್ದು ಭೂಮಿಯನ್ನು ಸಾವಯುವ ಪದಾರ್ಥಗಳಿಂದ ತುಂಬುವಲ್ಲಿ ಇವು ಸಹಾಯಕವಾಗಿವೆ. ಮಳೆ ಮತ್ತು ಹವಮಾನದ ಮೇಲೂ ಅವು ಪರಿಣಾಮ ಬೀರುತ್ತವೆಂದು ಹೇಳಲಾಗಿದೆ. ಈ ಅಧ್ಯಯನ ಕ್ಷೇತ್ರದ ವ್ಯಾಪ್ತಿಯಲ್ಲಿ ಸಿಗುವಂತ ಅರಣ್ಯಸಂಪತ್ತು ವೈವಿಧ್ಯಮಯವಾಗಿದೆ. ಹಾಗೆಯೇ ಹಲವಾರು ಜಾತಿಯ ಮರಗಳು ಕಂಡುಬರುತ್ತವೆ.

ಶ್ರೀಗಂಧದ ಮರ

ಈ ಮರವು ಸುವಾಸನೆಯುಕ್ತ ಗಟ್ಟಿಮುಟ್ಟಾದ ಮರವಾಗಿದೆ. ಅದು ಸುಗಂಧ ಸೂಸುವ ಎಣ್ಣೆಯಿಂದ ಜಗತ್ತಿನದ್ಯಾಂತ ಮಹತ್ವಪಡೆದುಕೊಂಡಿದೆ. ಏಕೆಂದರೇ ಅದು ತನ್ನ ಸುವಾಸನೆ ಮತ್ತು ಔಷಧಿಯ ಗುಣ ಹೊಂದಿದೆ. ವಿದೇಶಿ ರಫ್ತುನಿಂದ ಶ್ರೀಗಂಧದ ಮರವು ಸರ್ಕಾರದ ಆಸ್ಥಿ ಎಂದು ಪರಿಗಣಿಸಲ್ಪಡುತ್ತಿತ್ತು. ಆದರೆ ಈಗ ಈ ನಿಯಮಗಳು ಸಡಿಸಲ್ಪಟ್ಟಿವೆ. ಶ್ರೀಗಂಧದ ಮರಗಳನ್ನು ಬೆಳೆಸುವವರು ಅದರ ಖರೀದಿಯ ಬೆಲೆಯ ಶೇ.೫೦ರಷ್ಟನ್ನು ಸರ್ಕಾರಕ್ಕೆ ಮಾರಾಟ ಮಾಡಿ ಪಡೆಯುತ್ತಾರೆ. ಶ್ರೀಗಂಧದ ಮರವು ನಿತ್ಯಹರಿದ್ವರ್ಣದ ಮರವಾಗಿದ್ದು, ಅದರ ಎತ್ತರವು ೮ ರಿಂದ ೧೫ ಮೀಟರ್‌ಗಳವರೆಗೆ ಬೆಳೆಯುತ್ತದೆ. ಈ ಶ್ರೀಗಂಧದ ಮರವು ಅನ್ಯವೃಕ್ಷದ ಬೇರನ್ನಾಧರಿಸಿದ ಆರ್ಥಿಕವಾಗಿ ಹೆಚ್ಚು ಆದಾಯವನ್ನು ತಂದುಕೊಡುವ ಅರಣ್ಯದ ಮರಗಳಲ್ಲಿ ಇದು ಒಂದಾಗಿದೆ.

ತೇಗದ ಮರ

ಪ್ರಪಂಚದ ಅತ್ಯುತ್ತಮ ಮರಗಳಲ್ಲಿ ಒಂದಾದ ಈ ಮರವು ಮರಗಳ ರಾಜನೆಂದು ಪ್ರಖ್ಯಾತಿಪಡೆದಿದೆ. ಹಡಗು ಕಟ್ಟಲು ನಕ್ಕಲಾ, ಮನೆ ಸಾಮಾನುಗಳನ್ನು ಮಾಡಲು, ರೈಲ್ವೆಗಾಡಿಗಳನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ. ನವೆಂಬರ್ ತಿಂಗಳಿನಿಂದ ಜನವರಿ ತಿಂಗಳಲ್ಲಿ ಈ ಮರದ ಎಲೆಗಳು ಉದುರುತ್ತವೆ. ಈ ಭಾಗದಲ್ಲಿ ತೇಗದ ಮರದ ಪ್ರಥಮ ನಡೆತೋಪು ೧೮೦೮ರಲ್ಲಿ ಬೆಳೆಸಲ್ಪಟ್ಟಿತ್ತು. ತೇಗ ಆರ್ಥಿಕ ದೃಷ್ಠಿಯಲ್ಲಿ ಮಹತ್ವದ ಒಂದು ಅರಣ್ಯ ಬೆಲೆಯಾಗಿದೆ. ಅದು ೬ನೇ ವರ್ಷದಿಂದಲೇ ಆದಾಯಕೊಡುಲು ಪ್ರಾರಂಭಿಸುತ್ತದೆ.

ಬೀಟೆಮರ

ಹಿಂದೆ ಭಾರತದ ಕಪ್ಪುಮರ, ಭಾರತದ ಗುಲಾಬಿಮರ (ರೋಸ್‌ವುಡ್) ಎಂದೆಲ್ಲಾ ಕರೆಯಲ್ಪಡುತ್ತಿದ್ದ, ಬೀಟೆ ಮರ ನಮ್ಮ ದೇಶದ ಅತ್ಯಂತ ಬೆಲೆ ಬಾಳುವ ಮರಗಳಲ್ಲೊಂದಾಗಿದೆ. ಭಾಗಶಃ ನಿತ್ಯಹರಿದ್ವರ್ಣ ಮತ್ತು ತೇವಾಂಶಭರಿತ ಉದುರೆಲೆ ಅರಣ್ಯಗಳಲ್ಲಿನ ಮಹತ್ವದ ನೆರವು ಇದಾಗಿದೆ. ಬೀಜಗಳನ್ನು ನೆಟ್ಟು ಸಸಿಗಳನ್ನು ಪಡೆದು ಅನಂತರ ಈ ಸಸಿಗಳನ್ನು ಅನುಕೂಲ ವಾತಾವರಣವಿರುವ ಕಡೆ ನೆಡುತ್ತಾರೆ. ಹತ್ತಿರದ ಎಳೆಗಳನ್ನು ಹೊಂದಿರುವ ಈ ಕಪ್ಪು ಮರಕ್ಕೆ ಚೆನ್ನಾಗಿ ಪಾಲೀಷ್ ತೆಗೆದುಕೊಳ್ಳುವ ಗುಣವಿದೆ. ಮನೆಯ ದಿನ ಬಳಕೆಯ ಕುರ್ಚಿ, ಮೇಜುಗಳನ್ನು, ಮಂಚಗಳನ್ನು, ಪೆಟ್ಟಿಗೆಗಳನ್ನು ಮಾಡಲು ಈ ಬೀಟೆಮರವನ್ನು ಉಪಯೋಗಿಸಿವುದರಿಂದ ಈ ಮರಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚು ಬೇಡಿಕೆ ಇದೆ.

ಅಜ್ಜನಪಟ್ಟೆ

ಈ ಮರವು ತಂಪಾದ ಹವೆ ಇರುವ ನಿತ್ಯಹರಿದ್ವರ್ಣದ ಅರಣ್ಯದಲ್ಲಿ ಬೆಳೆಯುತ್ತದೆ. ಈ ಮರದ ಕೊಂಬೆಗಳನ್ನು ಕಡಿದು ಚೆನ್ನಾಗಿ ನೆನಸಿ ಅನಂತರ ಕಲ್ಲಿನಮೇಲೆ ಬಡಿದು ನಾರನ್ನು ಪಡೆಯುತ್ತಾರೆ. ಈ ನಾರಿನಿಂದ ದವಸದಾನ್ಯಗಳನ್ನು ಹಾಕುವ ದೊಡ್ಡ ದೊಡ್ಡ ಚೀಲಗಳನ್ನು ತಯಾರು ಮಾಡುತ್ತಾರೆ. ಇದನ್ನು ಚಾಪೆಮಾಡಲು, ಹಗ್ಗಹೊಸೆಯಲು ಸಹ ಬಳಸುತ್ತಾರೆ. ಮರದಮುಟ್ಟುಗಳಿಗೆ ಈ ಮರ ಯೋಗ್ಯವಾದುದಲ್ಲ.

ಈ ಪ್ರದೇಶದಲ್ಲಿ ಬೆಳೆಯುವ ಇನ್ನೊಂದು ಮರ ನಂದಿಮರ. ಈ ಮರವು ಬಹುಕಾಲ ಬಾಳಿಕೆ ಬರುತ್ತದೆ. ಮಡಿಕೇರಿಯ ಅರಮನೆಯ ಛಾವಣಿಯಲ್ಲಿರುವ ದೊಡ್ಡಮರದ ತೀರುಗಳು ನಂದಿಮರದಿಂದಲೇ ಮಾಡಿದವುಗಳಾಗಿವೆ. ಜಿಲ್ಲೆಯಲ್ಲಿ ಮನೆಕಟ್ಟಲು ಈ ಮರವನ್ನೇ ಬಳಸಲು ಇಷ್ಟಪಡುವುದರಿಂದ ಈ ಮರದ ಬೇಡಿಕೆಯು ಹೆಚ್ಚಾಗಿದೆ. ದೋಣಿಗಳನ್ನು ಮತ್ತು ಹಡಗುಗಳನ್ನು ನಿರ್ಮಾಣ ಮಾಡಲು ಈ ಮರಗಳನ್ನು ಬಳಸುತ್ತಾರೆ.

ಬೆಂಕಿಪೆಟ್ಟಿಗೆ ಮತ್ತು ಪದರು ಹಲಗೆ ಮರಗಳು

ಪದರು ಹಲಗೆಯ ಜಾತಿಯ ಮರಗಳನ್ನು ಪಶ್ಚಿಮಘಟ್ಟದ ನಿತ್ಯಹರಿದ್ವರ್ಣ ಮತ್ತು ಭಾಗಶಃ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಮಾತ್ರ ಬೆಳೆಯಲಾಗುತ್ತದೆ. ಕರ್ನಾಟಕದಲ್ಲಿನ ಅನೇಕ ಬೆಂಕಿಯಕಡ್ಡಿ ಮತ್ತು ಪದರು ಹಲಗೆ ಕೈಗಾರಿಕೆಗಳು ಸ್ಥಾಪಿತವಾಗಿದ್ದು, ಇದಕ್ಕೆ ಸಂಬಂಧಿಸಿದ ಪದಾರ್ಥಗಳಿಗೆ (ನರ್ಸರಿ)ದಲ್ಲಿ ಬೆಳೆಸಲು ಮತ್ತು ತೋಪುಗಳನ್ನು ಸ್ಥಾಪಿಸಲು ಕಾರ್ಯಪ್ರವೃತ್ತವಾಗಿದೆ. ಅರಣ್ಯವನ್ನು ಶ್ರೀಮಂತಗೊಳಿಸಲು ಸ್ಥಳವಿರುವ ಕಡೆಯಲ್ಲೆಲ್ಲ ಗಿಡಗಳನ್ನು ನೆಡಸಲು ಅರಣ್ಯಾಇಲಾಖೆ ಕ್ರಮಕೈಗೊಂಡಿದೆ. ಕೈಗಾರಿಕೆಗಳಿಗೆ ಮೃದುಕಟ್ಟಿಗೆಯ ಜಾತಿಯ ಮರಗಳನ್ನು ಸಂಗ್ರಹಮಾಡಲು ಮತ್ತು ಅವುಗಳನ್ನು ಬೇರೆ ಸ್ಥಳಕ್ಕೆ ಸಾಗಿಸಲು ಪ್ರತ್ಯೇಕ ಅರಣ್ಯಕ್ಷೇತ್ರವೊಂದನ್ನು ಹಂಚಿಕೊಡಲಾಗಿದೆ. ಇತ್ತೀಚಿಗೆ ಸರ್ಕಾರವು ಇಲಾಖೆಯ ಮೂಲಕ ಅರಣ್ಯಗಳ ರಕ್ಷಣೆ ಮತ್ತು ಪಾಲನೆಯ ಹಿತದೃಷ್ಟಿಯಿಂದ ಕೈಗಾರಿಕೆಗಳಿಗೆ ಮರವನ್ನು ಸಂಗ್ರಹಿಸುವುದನ್ನು ಮತ್ತು ಪೂರೈಸುವುದನ್ನು ತಾನೇ ಕೈಗೆ ತೆಗೆದುಕೊಂಡಿದೆ. ಪೊಳ್ಳು ಮತ್ತು ಒಳ್ಳೆಯ ಸ್ಥಿತಿಯಲ್ಲಿರುವ ಕಟ್ಟಿಗೆಗಳಲ್ಲಿಯ ಶೇ. ೫೦ರಷ್ಟು ಸಣ್ಣ ಸುತ್ತಳತೆಯ ಮರದ ತುಂಡುಗಳು ಮತ್ತು ೬೦ ಸೆ.ಮಿ.ಗಳಿಂಗಿತಲೂ ಕಡಿಮೆ ಸುತ್ತಳೆತೆಯ ಸರಕನ್ನು ಬಳಸಲು ಈ ಕೈಗಾರಿಕೆಗಳು ಅನುಮತಿಯನ್ನು ಹೊಂದಿವೆ. ಇನ್ನುಳಿದ ಶೇ. ೫೦ರಷ್ಟು ಸಾಮಾಗ್ರಿಯು ಇಂಥ ಸಾಮಾನು ತಯಾರಿಸಲು ಯೋಗ್ಯವಲ್ಲದರಿಂದ ಭಾಗಗಳನ್ನು ಪೆಟ್ಟಿಗೆಗಳ ಕೈಗಾರಿಕೆಗಳ ಮತ್ತು ಬೇರೆ ಸಣ್ಣ ಪ್ರಮಾಣದ ಪ್ಲೇಟು ಮತ್ತು ಪೋಟೋಕಟ್ಟುವ ಘಟಕಗಳಿಗೆ ವಿಕ್ರಯಿಸಲ್ಪಡುವುದು. ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಉತ್ತೇಜಿಸಲು, ಮೃದುಮರವು ದೊಡ್ಡ ಪ್ರಮಾಣದಲ್ಲಿ ದೊರೆಯುವಂತೆ ಮಾಡಲಾಗಿದೆ. ಪದರು ಹಲಗೆ ಕೈಗಾರಿಕೆಗಳಿಗೆ ಹಂಚಿಕೊಡಲ್ಪಟ್ಟ ಬನಾಟ ಮರದ ಪರವಾಗಿಯು

ಹಿಂತೆಗೆದುಕೊಳ್ಳಲ್ಪಟ್ಟಿದೆ. ಅರಣ್ಯಗಳಲ್ಲಿ ದೊರೆಯುವ ಬುನಾಟಾ ಮರವು ಇಲಾಖೆಯಿಂದ ಸಂಗ್ರಹಿಸಲ್ಪಡುತ್ತದೆ. ಅದನ್ನು ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪೂರೈಸಲಾಗುತ್ತದೆ.

ಅರಣ್ಯ ಕಿರಿಯ ಉತ್ಪತ್ತಿಗಳು

ವೀರಾಜಪೇಟೆ ತಾಲೂಕಿನಲ್ಲಿ ಅರಣ್ಯದ ಕಿರಿಯ ಉತ್ಪನ್ನಗಳು ಅಳಲೆಕಾಯಿ ಇದನ್ನು ಚರ್ಮಹದಮಾಡಲು ಉಪಯೋಗಿಸುವರು. ಇದಲ್ಲದೆ ಹುಣಸೆ, ಬೇಲದ ಹಣ್ಣು, ರಾಫಲ, ಬೇವಿನಬೀಜ, ಹಿಪ್ಪೆಬೀಜ, ಮುತ್ತುಗದ ಎಲೆ, ಎಂಡುಗ, ಗೋಲುದು, ಮಾವು, ಸೊಗಟೆಬೇರು, ಧೂಪ, ಕಾಳುಮೆಣಸು, ತಂಗಡಿ, ತೊಗಟೆ, ತುಪ್ಪೆಲೆ, ಕಕ್ಕೆಕಾಯಿ, ಜೇನುತುಪ್ಪ, ಮೆಣಸು, ಕಾಡುಕೇಸರಿ, ಕೊಂಬುಗಳು ಮತ್ತು ಅನೇಕ ಔಷಧಿಯ ಸಸ್ಯಗಳು ಇದರಲ್ಲಿ ಸೇರಿವೆ.

ಅರಣ್ಯಗಳ ಮೇಲೆ ಒತ್ತಡ

ಅನೇಕ ಕಾರಣಗಳಿಂದಾಗಿ ನಮ್ಮ ಅರಣ್ಯಗಳು ನಶಿಸುತ್ತಿವೆ. ಸ್ಥಳಾಂತರ ಕೃಷಿ ಬೇಸಾಯ ಜಾನುವಾರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮೇಯಿಸುವುದು, ಅರಣ್ಯಕ್ಕೆ ಬೆಂಕಿ ತಗಲುವುದು ಹಾಗೂ ಬೇಸಾಯಕ್ಕೆಂದು ಅರಣ್ಯ ಭೂಮಿಯನ್ನು ಪರಿವರ್ತಿಸುವುದು ಮೊದಲಾದ ಕಾರಣಗಳಿಂದಾಗಿ ಅರಣ್ಯದ ವಿಸ್ತೀರ್ಣ ಕಡಿಮೆಯಾಗುತ್ತಾ ಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಕಾಡುಗಳು ಕಾಡುಗಳ್ಳರಿಗೆ ಬಲಿಯಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಸದಾಹಸುರಿನ ಅರಣ್ಯಗಳು ಬೆಂಕಿಯಿಂದ ಸ್ವಯಂರಕ್ಷಣೆ ಸಾಮಾರ್ಥ್ಯ ಪಡೆದಿದ್ದರು ಅಲ್ಲಲ್ಲಿ ಭಗ್ನವಾಗಿ ಹುಲ್ಲುಮೈದಾನಗಳಾಗಿ ಇಲ್ಲವೇ ಗಿಡಗಳೇ ಬೆಳೆಯುದ ತೆರೆದ ಪ್ರದೇಶಗಳಿಂದಾಗಿ ದುಸ್ಥಿತಿಯಲ್ಲಿವೆ.

೧೯೭೦ರ ವರೆಗಿನ ಅವಧಿಯಲ್ಲಿ ರಿಜರ್‌ಫಾರೆಸ್ಟ್‌ಗಳ ತತ್ವವೇ ಕ್ರಮೇಣ ಅರ್ಥಹೀನವಾಗ ತೊಡಗಿತು. ಮೇಯಲು ಹೋಗಿದ್ದರು ಕಾದಿಟ್ಟ ಅರಣ್ಯಗಳಿವೆ ಎಂಬ ಧೋರಣೆಯಿಂದ ಗೋಮಾಳವನ್ನು ಬೇಸಾಯಕ್ಕಾಗಿ ಬಿಡುಗಡೆ ಮಾಡಲಾಯಿತು. ಕ್ರಮೇಣ ಕಾದಿಟ್ಟ ಅರಣ್ಯಗಳನ್ನೇ ಪರಿಸರದ ಹಿತರಕ್ಷಣೆಯನ್ನು ಕಡೆಗಣಿಸಿ ಬೇಸಾಯಕ್ಕೆ ಸೂಕ್ತವೇ ಅಥವಾ ಅಲ್ಲವೆ ಎಂದು ನೋಡದೆ ಕೃಷಿಕಾರ್ಯಕ್ಕಾಗಿ ನೀಡಲಾಯಿತು. ೧೯೭೩ರಲ್ಲಿ ಸರ್ಕಾರವು ಕಾದಿಟ್ಟ ಅರಣ್ಯಗಳನ್ನು ಬಿಡುಗಡೆ ಮಾಡುವ ತನ್ನ ಕಾರ್ಯಕ್ಕೆ ತಡೆಬಿತ್ತು. ನಂತರ ೧೯೮೦ರಲ್ಲಿ ಭಾರತ ಸರ್ಕಾರವು ಅರಣ್ಯ ಸಂರಕ್ಷಣಾ ಕಾನೂನು ಜಾರಿಗೆ ತಂದಿತು.

ಕರ್ನಾಟಕ ವೃಕ್ಷಾ ಸಂರಕ್ಷಣಾ ಕಾನೂನು ೧೯೭೬

ಕಾಫಿ ಏಲಕ್ಕಿಗಳಿಗೆ ಮುಖ್ಯವಾಗಿ ನೆರಳನ್ನು ಕಲ್ಪಿಸಲು ದೊಡ್ಡ ಪ್ರಮಾಣದ ಖಾಸಗೀ ತೋಟಗಳು ಮತ್ತು ಮರಗಳು ಬೆಳೆಸಲ್ಪಡುತ್ತಿವೆ ಮತ್ತು ಮರಗಳನ್ನು ಖಾಸಗಿ ಹಿಡುವಳಿಗಳಲ್ಲಿ ಬೆಳೆಯಲಾಗುತ್ತಿತ್ತು. ಇವು ವ್ಯವಸಾಯಗಾರರಿಗೆ ಹಕ್ಕೆಂದು ನಿರ್ಧರಿಸಲ್ಪಟ್ಟಿರುವವು. ಇಂತಹ ಕ್ಷೇತ್ರದಲ್ಲಿ ಭೂಮಾಲೀಕರು ಇಂತಹ ಗಿಡಗಳನ್ನು ತಮ್ಮ ಪ್ರಾಮಾಣಿಕ ಉಪಯೋಗಗಳಾಗಿ ಬಳಸಲು

ಅರ್ಹರಿರುತ್ತಾರೆ. ಮರಗಳ ಬೆಲೆಯು ಹೆಚ್ಚಿದ ಕಾರಣದಿಂದಾಗಿ ವಿಶೇಷವಾಗಿ ಬಾಣೆಭೂಮಿ, ಕುಮರಿಭೂಮಿ, ಕಾನ್‌ಭೂಮಿ ಇತ್ಯಾದಿಗಳಲ್ಲಿ ಮರಗಳನ್ನು ಗೊತ್ತುಗುರಿಯಿಲ್ಲದೆ ಕಡಿಯಲು ಆರಂಭಿಸಿದರು. "ಅರಣ್ಯಗಳನ್ನು ರಕ್ಷಿಸುವುದರ ಮಹತ್ವವನ್ನು ಅರಿತ ಸರ್ಕಾರದವರು ೧೯೭೬ರ ಕರ್ನಾಟಕ ವೃಕ್ಷಾ ರಕ್ಷಣಾ ಕಾನೂನನ್ನು ಖಾಸಗೀ ಹಿಡುವಳಿಗಳಲ್ಲಿಯ ಮರಗಳನ್ನು ಗೊತ್ತುಗುರಿಯಿಲ್ಲದೆ ಕಡಿದು ಹಾಕುವುದನ್ನು ನಿರ್ಬಂಧಿಸಲು ಜಾರಿಮಾಡಲಾಯಿತು."[೫] ಮರಗಳು ವೈಜ್ಞಾನಿಕವಾಗಿ ಅಪ್ರಯೋಜಕವೆಂದು ಕಂಡುಬಂದರೇ ಮಾತ್ರ ಖಾಸಗೀ ಭೂ ಹಿಡುವಳಿಗಾರರು ಇಂತಹ ಮರಗಳನ್ನು ಕಡಿಯಲು ಪರವಾನಿಗೆಯನ್ನು ಪಡೆಯಬಹುದು. ಅನುಮತಿ ಪಡೆದು ಕಡಿದ ಒಂದು ಮರದ ಬದಲಿಗೆ ಐದು ಸಸಿಗಳನ್ನು ನೆಡಬೇಕೆಂಬ ನಿಯಮವಿದೆ. ಇದಕ್ಕೆ ಜಾಮೀನು ಎಂದು ಸಸಿಗಳನ್ನು ನೆಡುವ ಬಗ್ಗೆ ಠೇವಣಿಯನ್ನು ಪಡೆಯಲಾಗುವುದು. ಮಾಲೀಕರು ಸಸಿನೆಡಲು ತಪ್ಪಿದರೆ ಈ ಠೇವಣಿ ಹಣವನ್ನು ಉಪಯೋಗಿಸಿ ಅವನ ಹಿಡುವಳಿಗಳಲ್ಲಿ ಅಗತ್ಯವಿರುವ ಸಂಖ್ಯೆಯಷ್ಟು ಸಸಿಗಳನ್ನು ಸರ್ಕಾರವೇ ನೆಡಿಸುವುದು.

ಅರಣ್ಯ ರಕ್ಷಣೆ

ಅರಣ್ಯಗಳನ್ನು ರಕ್ಷಿಸಲು ಸಂಚಾರಿ ರಕ್ಷಣಾ ತುಕಡಿಗಳು ಅರಣ್ಯ ಇಲಾಖೆಯಿಂದ ನೇಮಕವಾಗಿವೆ. ಸರ್ಕಾರಿ ಭೂಮಿಗಳಿಂದ ಮತ್ತು ಮುಖ್ಯವಾಗಿ ಕಾಯ್ದಿರಿಸಿದ ಅರಣ್ಯಗಳಿಂದ ಅರಣ್ಯ ಉತ್ಪಾದನೆಯ ಕಳ್ಳಸಾಗಾಣಿಕೆಯನ್ನು ಪರಿಣಾಮಕಾರಿಯಾಗಿ ತಡೆಯುವುದೇ ತುಕಡಿಗಳ ಮುಖ್ಯ ಉದ್ದೇಶ. ಈ ಕಾರ್ಯವನ್ನು ಸಾಧಿಸಲು ಅರಣ್ಯದಲ್ಲಿ ಈ ತುಕಡಿಗಳು ರಾತ್ರಿಕಾಲದಲ್ಲಿ ಪರಿಣಾಮಕಾರಿಯಾದ ಮತ್ತು ವ್ಯಾಪಕವಾದ ಗಸ್ತುತಿರುಗುವುದು ಮತ್ತು ಮುನ್ನೆಚ್ಚರಿಕೆ ಕೊಡದೆ ದಾಳಿಗಳನ್ನು ನಡೆಸುವುದು, ಪ್ರಸ್ತುತ ಮಡಿಕೇರಿಯಲ್ಲಿ ಅರಣ್ಯ ಸಹಾಯಕ ಸಂರಕ್ಷಣಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಒಂದು ಸಂಚಾರಿ ತುಕಡಿ ಕಾರ್ಯ ನಿರ್ವಹಿಸುತ್ತಿದೆ. ಈ ಅಧಿಕಾರಿಗಳು ಆಗಿಂದದಾಗ್ಗೆ ತನಿಖೆಮಾಡುವ ಮತ್ತು ಸಾಗಾಣಿಕೆಯ ಮೇಲೆ ಕಣ್ಣಿಡುವ ಕಾರ್ಯವನ್ನು ನಿರ್ವಹಿಸಬೇಕಾಗುವುದು. ಇಲಾಖೆಯ ವಿವಿಧ ರಕ್ಷಣಾ ಸಿಬ್ಬಂಧಿಗೆ ಮುಖ್ಯವಾಗಿ ಕಳ್ಳಸಾಗಾಣಿಕೆ ಗಡಿ ಕ್ಷೇತ್ರಗಳಲ್ಲಿ ಶಸ್ತ್ರಾಸ್ತ್ರಗಳ ಹಾಗೂ ಮದ್ದುಗುಂಡುಗಳು ಒದಗಿಸಲ್ಪಟ್ಟು ಅಪರಾಧಿಗಳ ವಿಚಾರಣೆ ಮತ್ತು ಜಪ್ತಿ ಮಾಡಲ್ಪಟ್ಟ ಅರಣ್ಯ ಉತ್ಪಾದನೆಗಳ ವಿಲೇವಾರಿ ಮಾಡುವ ಜವಾಬ್ದಾರಿಯು ಆಯಾ ಪ್ರದೇಶಗಳಲ್ಲೇ ನೀಡಲ್ಪಟ್ಟಿವೆ ಮತ್ತು ಜಪ್ತಿಮಾಡಿದ ವಸ್ತುಗಳ ಮಾರಾಟ ಮತ್ತು ಪರಿಹಾರವೆಂದು ಸಂಚಯಿಸಿದ ಅದಾಯ ಇವುಗಳ ವಿವರವು ಕೊಡಲ್ಪಡುವವು. ಅರಣ್ಯ ಉತ್ಪಾದನೆಯ ಕಳ್ಳಸಾಗಾಣಿಯನ್ನು ತಡೆಗಟ್ಟುವ ಕಾರ್ಯಕ್ಕೆ ವೈರಲೆಸ್ ವಾರ್ತಾ ಸಂಗ್ರಹಕ ಜಾಲವನ್ನು ಆಚರಣೆಗೆ ತಂದಿರುವ ಪ್ರಥಮ ರಾಜ್ಯ ಕರ್ನಾಟಕವಾಗಿದೆ.

ವಾಯುಗುಣ

ಸಾಮಾನ್ಯವಾಗಿ ವೀರಾಜಪೇಟೆಯ ತಾಲೂಕಿನ ವಾಯುಗುಣ ಹಿತಕರವಾಗಿದೆ. ಹೆಚ್ಚಿನ ಆರ್ದ್ರತೆಯಿಂದ ಕೂಡಿದೆ. ಒಂದೇ ಸಮನಾಗಿರುವ ಶೀತಲ ಮತ್ತು ಆಹ್ಲಾದಕರವಾದ ವಾಯುಗುಣವು

ವಿರಾಜಪೇಟೆಯ ಹವಾಮಾನದ ವೈಶಿಷ್ಟ್ಯವಾಗಿದೆ. "ಟಿಪ್ಪುಸುಲ್ತಾನನ ಕಾಲದ ಇತಿಹಾಸಕಾರ ವೀರಾಜಪೇಟೆಯ ಹವಾಗುಣವನ್ನು ವರ್ಣಿಸಿರುವ ರೀತಿ ಹೀಗಿದೆ. "ಇಲ್ಲಿನ ಚಳಿಗಾಲವನ್ನು ವಿವರಿಸಲು ಲೇಖನಿಯನ್ನು ಹೊರತೆಗೆದರೆ ಚಳಿಗಾಲದಲ್ಲಿ ಹೆಪ್ಪುಗಟ್ಟಿದ ಸಮುದ್ರದಲ್ಲಿ ಲೇಖನಿಯನ್ನು ಅದ್ದಿದಾಗ ಪಡೆಯುವ ಹಾಗೆ ಬರೆಯಲು ಪ್ರಾರಂಭಿಸುವ ಮೊದಲು ಆಗುತ್ತದೆ."[5] ಇಲ್ಲಿಯ ಚಳಿಗಾಲವನ್ನು ವಿವರಿಸುವಾಗ ದಿಗಿಲುಬಿದ್ದ ಮತ್ತು ಅಚ್ಚರಿಗೊಂಡ, ಘನೀಭವಿಸಿದ ಮಂಜುಗಡ್ಡೆಯ ರೀತಿಯಾಗಿ ನಾಲಗೆಯು ತುಟಿಗಳಿಂದ ರಕ್ಷಣೆಗೊಂಡಿದ್ದರು ಹೊರಗೆ ಬರಲು ಅಂಜುವ ಹಾಗೆ ಅನಿಸುತ್ತದೆ. ಇಂತಹ ಸ್ಥಿತಿಯಲ್ಲಿ ಹವಾಗುಣವನ್ನು ವರ್ಣಿಸುವುದು ಕಷ್ಟಕರ. ವರ್ಷದ ಅರ್ಧಭಾಗಕ್ಕೂ ಹೆಚ್ಚಿನ ಅವಧಿಯಲ್ಲಿ ಮಳೆಯು ಸುರಿಯುತ್ತದೆ. ವಾಯುಮಂಡಲದಲ್ಲಿಯ ನೀರಿನ ಹಬೆ ಇಬ್ಬನಿಯು ಬೆಳಗಿನ ಸಮಯದಲ್ಲಿ ಹಗುರವಾದ ಮೋಡದಂತಹ ದ್ರವ್ಯವಾಗಿ ಬೆಟ್ಟ ಮತ್ತು ಕಣಿವೆಗಳನ್ನು ಸುತ್ತುವರಿದು ಶ್ವೇತಸಮುದ್ರವನ್ನು ಸೃಷ್ಟಿಸುತ್ತದೆ. ಈ ಭಾಗದಲ್ಲಿ ಬೆಟ್ಟಗಳ ಪ್ರದೇಶಗಳಲ್ಲಿ ಅತೀ ಹೆಚ್ಚು ಮಳೆಯು, ಮಧ್ಯಭಾಗದಲ್ಲಿ ಸಾಧಾರಣ ಮಳೆಯಾಗುವುದು.

ಸಾಮಾನ್ಯವಾಗಿ ನಾಲ್ಕು ಋತುಗಳಾಗಿ ವಿಭಾಗಿಸಲಾಗಿದೆ. ಅವುಗಳೆಂದರೆ ಚಳಿಗಾಲವು ಜನವರಿಯಿಂದ ಫೆಬ್ರವರಿ, ಬೇಸಿಗೆ ಕಾಲವು ಮಾರ್ಚಯಿಂದ ಮೇವರೆಗೆ, ನೈಋತ್ಯಮಾನ್ಸೂನ್ ಕಾಲ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ, ಈಶಾನ್ಯ ಮಾನ್ಸೂನ್ ಕಾಲ ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ಇರುತ್ತದೆ. ಶುಭ್ರ ಆಕಾಶ, ಕಡಿಮೆ ಆರ್ದ್ರತೆ, ಚಳಿಗಾಲದ ವಿಶಿಷ್ಟ ಲಕ್ಷಣಗಳು. ಈ ಕಾಲದಲ್ಲಿ ಮಳೆಯು ತೀರಕಡಿಮೆ. ಬೇಸಿಗೆ ಕಾಲದಲ್ಲಿ ಉಷ್ಣತೆಯು ಏರುತ್ತದೆ. ಏಪ್ರಿಲ್ ಅಥವಾ ಮೇ ತಿಂಗಳ ಆದಿಭಾಗದಲ್ಲಿ ಉಷ್ಣತೆಯು ಗರಿಷ್ಠಮಟ್ಟವನ್ನು ತಲುಪುತ್ತದೆ. ನೈಋತ್ಯ ಮಾನ್ಸೂನ್ ಕಾಲ ಜೂನ್ ತಿಂಗಳಿನಿಂದ ನಾಲ್ಕು ತಿಂಗಳುಗಳವರೆಗೆ ವ್ಯಾಪಿಸಿರುತ್ತದೆ. ಈ ಕಾಲದಲ್ಲಿ ಪಶ್ಚಿಮ ಘಟ್ಟಗಳ ಪ್ರದೇಶ ಮತ್ತು ಮಲೆನಾಡು ಪ್ರದೇಶಗಳ ಆಕಾಶವು ಮೋಡಗಳಿಂದ ಕೂಡಿ ಭಾರಿ ಮಳೆಯು ಬರುತ್ತದೆ. ಈಶಾನ್ಯ ಮಾನ್ಸೂನ್ ಕಾಲವು ಅಕ್ಟೋಬರ್ ತಿಂಗಳ ಆದಿಭಾಗದಿಂದ ಪ್ರಾರಂಭವಾಗುತ್ತದೆ. ಈ ಕಾಲದಲ್ಲಿ ಮಾರುತಗಳು ನೈಋತ್ಯ ಅಥವಾ ಪಶ್ಚಿಮದಿಂದ ಈಶಾನ್ಯದತ್ತ ಬದಲಾವಣೆಗೊಂಡು ತೇವಾಂಶ ಮತ್ತು ಮೇಘಾವರಣ ಕಡಿಮೆಯಾಗಿರುತ್ತದೆ. ಮುಖ್ಯವಾಗಿ ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ಮಳೆಯುಬರುತ್ತದೆ.

ಆರ್ದ್ರತೆ

ಪ್ರಸ್ತುತ ಅಧ್ಯಯನ ಕ್ಷೇತ್ರವು ಆರ್ದ್ರತೆಯು ವರ್ಷಪೂರ್ತಿ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಈ ಸಾಪೇಕ್ಷ ಆರ್ದ್ರತೆಯು ವಾತಾವರಣದಲ್ಲಿರುವ ನೀರ ಆವಿಯನ್ನಷ್ಟೇ ಅಲ್ಲ ಉಷ್ಣತೆಯನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಘಟ್ಟ ಪ್ರದೇಶಗಳು ಮತ್ತು ಮಲೆನಾಡು ಪ್ರದೇಶಗಳು ಬಯಲುನಾಡುಗಿಂತ ಹೆಚ್ಚು ಆರ್ದ್ರತೆವಾಗಿವೆ. ವರ್ಷದಲ್ಲಿ ಜನವರಿಯಿಂದ ಏಪ್ರಿಲ್‌ವರೆಗಿನ ಸರಾಸರಿ ಸಾಪೇಕ್ಷ ಆರ್ದ್ರತೆಯು ಕಡಿಮೆ ಇರುತ್ತದೆ. ವಿಶೇಷವಾಗಿ ನೈಋತ್ಯದ ಮಾರುತದ ಕಾಲದಲ್ಲಿ ಸರಾಸರಿ

ಹೆಚ್ಚಾಗಿರುತ್ತದೆ. ಈಶಾನ್ಯ ಮಾರುತದ ಕಾಲದಲ್ಲಿ ಸರಾಸರಿ ಸಾಪೇಕ್ಷ ಆರ್ದ್ರತೆಯು ಶೇ. ೭೫ರಷ್ಟಿರುತ್ತದೆ. ಸೆಪ್ಟೆಂಬರ್‌ನಂತರ ಆರ್ದ್ರತೆಯು ಕ್ರಮೇಣವಾಗಿ ನವೆಂಬರ್‌ವರೆಗೆ ಇಳಿದು, ನಂತರ ಇಳಿತವು ಇನ್ನೂ ತೀವ್ರವಾಗುತ್ತದೆ. ಮಾರ್ಚ್ ತಿಂಗಳಲ್ಲಿ ಅತೀ ಕಡಿಮೆ ಸಾಪೇಕ್ಷ ಆರ್ದ್ರತೆಯನ್ನು ಕಾಣಬಹುದು.

ಮುಗಿಲ ಮುಸುಕು

ನೈಋತ್ಯ ಮಾನ್ಸೂನ್ ಋತುವಿನಲ್ಲಿ ಮುಗಿಲ ಮುಸುಕು ಅತೀ ಹೆಚ್ಚಾಗಿದ್ದು ಜನವರಿ - ಮಾರ್ಚ ತಿಂಗಳಗಳ ಅವಧಿಯಲ್ಲಿ ತೀರ ಕಡಿಮೆಯಾಗಿದ್ದು ಆಕಾಶವು ಶುಭ್ರವಾಗಿರುತ್ತದೆ. ಆಗೊಮ್ಮೆ ದೊಡ್ಡ ಅಥವಾ ಮಧ್ಯಮ ಗಾತ್ರದ ಮೋಡಗಳು ತೇಲುತ್ತವೆ. ಘಟ್ಟಗಳು ಮತ್ತು ಮಲೆನಾಡು ಪ್ರದೇಶಗಳಲ್ಲಿ ಜುಲೈ-ಆಗಸ್ಟ್ ಅವಧಿಯಲ್ಲಿ ಆಕಾಶವು ಅತಿಯಾಗಿ ಮುಸುಕಿದ್ದು ಮೋಡಗಳು ತೀರ ಕೆಳಗೆ ತೇಲಾಡುತ್ತವೆ. ಈ ಅವಧಿಯಲ್ಲಿ ತಿಂಗಳ ೩೦ ದಿನಗಳಿಗಿಂತ ಹೆಚ್ಚು ಅವಧಿಯಲ್ಲಿ ಮಳೆಯು ಬೀಳುತ್ತದೆ ಮತ್ತು ಕೆಲವು ದಿನಗಳವರೆಗೂ ಸೂರ್ಯನ ದರ್ಶನವಾಗುವುದಿಲ್ಲ.

ಒತ್ತಡ ಮತ್ತು ಗಾಳಿ

ನೈಋತ್ಯ ಮಾರುತದ ಋತುವಿನ ಕಾಲದಲ್ಲಿ ಸಾಮಾನ್ಯವಾಗಿ ಗಾಳಿಯು ನೈಋತ್ಯ ಮತ್ತು ವಾಯುವ್ಯ ದಿಕ್ಕುಗಳ ನಡುವೆ ಬೀಸುತ್ತದೆ. ಈಶಾನ್ಯ ಮಾರುತದ ಕಾಲದಲ್ಲಿ ಗಾಳಿಯು ಸಾಮಾನ್ಯವಾಗಿ ಈಶಾನ್ಯದಿಂದ ಅಥವಾ ಪೂರ್ವದಿಕ್ಕಿನಿಂದ ತಮ್ಮ ಕೆಲವು ದಿನಗಳಲ್ಲಿ ಮಧ್ಯಾಹ್ನದ ಸಮಯದಲ್ಲಿ ವಾಯುವ್ಯ ದಿಕ್ಕಿನಿಂದ ಸಹ ಬೀಸುವುದನ್ನು ಕಾಣಬಹುದು. ವರ್ಷದ ಇನ್ನು ಉಳಿದ ಕಾಲದಲ್ಲಿ ಗಾಳಿಯು ಸಾಮಾನ್ಯವಾಗಿ ಉತ್ತರ ಮತ್ತು ಪೂರ್ವ ದಿಕ್ಕುಗಳ ನಡುವೆ ಮತ್ತು ಕೆಲವು ದಿನಗಳಲ್ಲಿ ನೈಋತ್ಯ ಮತ್ತು ವಾಯುವ್ಯ ದಿಕ್ಕುಗಳ ನಡುವಿನಿಂದ ಬೀಸುತ್ತದೆ. ಗಾಳಿ ಒತ್ತಡವು ಲಘುವಿನಿಂದ ಮಧ್ಯಮ ಪ್ರಮಾಣದಲ್ಲಿ ಬೀಸುತ್ತಿದ್ದು ಈಶಾನ್ಯ ಮಾರುತದ ಸಮಯದಲ್ಲಿ ವಾಯುವಿನ ಒತ್ತಡ ಹೆಚ್ಚುತ್ತದೆ ಜುಲೈ-ಆಗಸ್ಟ್ ತಿಂಗಳುಗಳಲ್ಲಿ ಗಾಳಿಯು ಬಹಳ ವೇಗದಲ್ಲಿ ಬೀಸುತ್ತದೆ.

ಹವಾಗುಣದ ವೈಶಿಷ್ಟ್ಯತೆ

ಸಿಡಿಲು, ಬಿರುಗಾಳಿ, ಆಲಿಕಲ್ಲು ಮಳೆ, ದೂಳಿನ ಬಿರುಗಾಳಿ, ಚಂಡಮಾರುತ ಮತ್ತು ಮಂಜು ಮುಸುಕಿದ ಮೋಡ ಇವು ಇತರ ಪ್ರಮುಖ ಹವಾಗುಣ ಸಂಬಂಧಿ ಸಂಗತಿಗಳು. ಸಿಡಿಲು ಬಿರುಗಾಳಿಯು ಮುಖ್ಯವಾಗಿ ಬೇಸಿಗೆಯ ತಿಂಗಳುಗಳಲ್ಲಿ ಮಾರ್ಚ್, ಏಪ್ರಿಲ್, ಮೇ ಮತ್ತು ಈಶಾನ್ಯ ಮಾರುತದ ಅವಧಿಯಲ್ಲಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಬೀಸುತ್ತದೆ. ಡಿಸೆಂಬರ್-ಮಾರ್ಚ್ ಅವಧಿಯಲ್ಲಿ ಸಿಡಿಲು ಬಿರುಗಾಳಿ ಬರುವುದು ಉಂಟು. ಆದರೆ ಇದು ತೀರ ಅಪರೂಪ. ಈಶಾನ್ಯ ಮಾರುತದ ಋತುವಿನ ನಂತರದಲ್ಲಿ ವಾಯು ಕುಸಿತಗಳು ಬಂಗಾಳಕೊಲ್ಲಿಯ ಉತ್ತರ ತುದಿಯಲ್ಲಿ ರೂಪುಗೊಂಡು ಪಶ್ಚಿಮಕ್ಕೆ ಅಥವಾ ವಾಯವ್ಯಕ್ಕೆ ಚಲಿಸುತ್ತವೆ. ಋತುವು ಮುಂದುವರಿದಂತೆ ಈ

ಕುಸಿತಗಳು ದಕ್ಷಿಣ ಭಾಗದಲ್ಲಿ ಹೆಚ್ಚಾಗಿ ರೂಪುಗೊಳ್ಳುತ್ತವೆ. ಬಂಗಾಳಕೊಲ್ಲಿಯ ದಕ್ಷಿಣದ ಭಾಗದಲ್ಲಿ ಅಕ್ಟೋಬರ್-ನವೆಂಬರ್ ಮತ್ತು ಸ್ವಲ್ಪಮಟ್ಟಿಗೆ ಡಿಸೆಂಬರ್ ತಿಂಗಳ ಪ್ರಥಮಾರ್ಧದವರೆಗೆ ಪಶ್ಚಿಮಾಭಿಮುಖವಾಗಿ ಚಲಿಸಿ ಈ ಪ್ರದೇಶದಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯಾಪಕ ಹಾಗು ಬಾರಿ ಮಳೆಗೆ ಕಾರಣವಾಗುತ್ತವೆ. ಆಲಿಕಲ್ಲು ಮಳೆ ವಿರಳ. ಮಾರ್ಚ್-ಏಪ್ರಿಲ್ ತಿಂಗಳುಗಳಲ್ಲಿ ಸಿಡಿಲು ಬಿರುಗಾಳಿಗಳೊಂದಿಗೆ ಮತ್ತು ಬಾರಿ ಮಳೆಯೊಡನೆ ಆಲಿಕಲ್ಲು ಮಳೆ ಬರುವುದುಂಟು. ಜಿಲ್ಲೆಯಲ್ಲಿ ಮಾರ್ಚ್-ಏಪ್ರಿಲ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಮಂಜು ಬೀಳುವುದು ಕಂಡುಬಂದಿದೆ. "ಈ ಪ್ರದೇಶದಲ್ಲಿ ದೂಳಿನ ಬಿರುಗಾಳಿ ಮತ್ತು ಚಂಡಮಾರುತಗಳು ಬರುವುದಿಲ್ಲ"

ಪರಿಸರವರ್ಧನೆ

ಬೆಟ್ಟಗುಡ್ಡಗಳಿಂದ ಕಿರಿದಾದ ಕಣಿವೆಗಳಿಗೆ ಮೆಕ್ಕಲು ಮಣ್ಣು ಹಾಗೂ ಪೋಷಕಾಂಶಗಳು ಸಾಗಿಬರುವುದರಿಂದ ಸಹಜವಾಗಿಯೇ ಕಣಿವೆಗಳ ಮಣ್ಣು ಫಲವತ್ತಾಗಿರುತ್ತದೆ. ಅದೇ ಈ ಪ್ರದೇಶಗಳ ಗ್ರಾಮೀಣ ಆರ್ಥಿಕ ನಿರ್ವಹಣೆಯ ಮೂಲಾದಾರವಾಗಿದೆ. ಅಲ್ಲಿನ ಕಣಿವೆ ಬೇಸಾಯ ಹಾಗೂ ತೋಟಗಾರಿಕೆ ಮುಖ್ಯವಾಗಿ ಸುತ್ತಮುತ್ತಲ ಸಸ್ಯಾವೃತ್ತ ಗುಡ್ಡದ ಬರೆಗಳನ್ನೇ ಅವಲಂಬಿಸಿವೆ. ಪಶ್ಚಿಮಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ತೃಣಧಾನ್ಯ ದ್ವಿದಳ ಧಾನ್ಯಗಳ ಆವರ್ತನ ಬೇಸಾಯ ಮೊದಲಿನಿಂದಲು ನಡೆಯುತ್ತಾ ಬಂದಿದೆ.

ಇತ್ತೀಚಿನ ದಶಕಗಳಲ್ಲಿ ಬೇಸಾಯಕ್ಕೆಂದು ಭೂಮಿಯ ಬಳಕೆ ತೀವ್ರವಾಗುತ್ತಿದ್ದು ಗುಡ್ಡಗಾಡಿನ ಇಳಿಜಾರು ಪ್ರದೇಶಗಳು ಗುದ್ದಲಿ ನೇಗಿಲುಗಳ ಒತ್ತಡಕ್ಕೆ ತುತ್ತಾಗುತ್ತಿವೆ. ಇತ್ತೀಚೆಗೆ ಮರಗೆಣಸು, ಸಿಹಿಗೆಣಸು ಮುಂತಾದವು ನೆಲದಾಳದ ಬೆಳೆಗಳನ್ನು ಗುಡ್ಡದ ಇಳಿಜಾರು ಪ್ರದೇಶಗಳನ್ನು ಬೆಳೆಯಲಾಗುತ್ತದೆ. ಗುಡ್ಡದ ಇಳಿಜಾರಿನ ಬೇಸಾಯ ಬಹಳಷ್ಟು ಮಟ್ಟಿಗೆ ಸ್ವಯಂ ಪೋಷಕವಲ್ಲ. ಇಲ್ಲಿ ಅರಣ್ಯನಾಶ ಹಾಗೂ ಭೂಸವಕಳಿ ತುಂಬಾ ಹೆಚ್ಚು; ಇಳುವರಿಯು ಕಡಿಮೆಯಾಗುತ್ತಿದೆ.

ಘಟ್ಟಪ್ರದೇಶಗಳಲ್ಲಿ ತೋಟಗಾರಿಕೆ ಪ್ರಮುಖ ಚಟುವಟಿಕೆಯಾಗಿದೆ. ಕಾಳುಮೆಣಸು ಮತ್ತು ಏಲಕ್ಕಿ, ಚಹ, ಕಾಫಿ ಗೋಡಂಬಿ ಮತ್ತು ಇತ್ತೀಚಿಗೆ ಕೋಕೋ ಬೇಸಾಯ ಹೆಚ್ಚಾಗುತ್ತದೆ.

ಜಲಸಂಪನ್ಮೂಲಗಳು

ಕೊಡಗು ಜಿಲ್ಲೆಯು ಜಲಸಂಪನ್ಮೂಲದಲ್ಲಿ ಕರ್ನಾಟಕದಲ್ಲಿ ಮೊದಲಸ್ಥಾನದಲ್ಲಿದೆ. ಆದರೆ ಬಳಕೆಯಲ್ಲಿ ಕೊನೆಯ ಸ್ಥಾನದಲ್ಲಿದೆ. ಕರ್ನಾಟಕದ ಮುಖ್ಯನದಿಗಳಲ್ಲಿ ಒಂದಾದ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ, ಹಾರಂಗಿ, ಬರಪೊಳೆ ಇವು ಜಿಲ್ಲೆಯ ಮುಖ್ಯನದಿಗಳಾಗಿವೆ. ಕನ್ನಿಕೆ, ಕಕ್ಕಬ್ಬೆ, ಕಾಡನೂರು ಹೊಳೆ, ಚಿಕ್ಕಹೊಳೆ, ಹಟ್ಟಿಹೊಳೆ ಇವೇ ಮೊದಲಾದ ನದಿಗಳು ಹರಿಯುತ್ತವೆ. ಹೇಮಾವತಿ, ಹಾರಂಗಿ, ಲಕ್ಷ್ಮಣತೀರ್ಥ ಇವು ಸಹ ಕಾವೇರಿ ನದಿಯ ಉಪನದಿಗಳಾಗಿವೆ.

ಪ್ರಸ್ತುತ ಅಧ್ಯಯನ ಕ್ಷೇತ್ರವಾದ ವೀರಾಜಪೇಟೆ ತಾಲೂಕಿನಲ್ಲಿ ಲಕ್ಷ್ಮಣತೀರ್ಥ ನದಿಯು ನೀರಾವರಿಗೆ ಸಹಾಯಕವಾಗಿದೆ. ಈ ನದಿಯು ಕೊಡಗಿನ ದಕ್ಷಿಣಭಾಗಕ್ಕಿರುವ ಬ್ರಹ್ಮಗಿರಿಯ ದೇವಾಸಿಬೆಟ್ಟದಲ್ಲಿ ಮುನಿಕಾಡು ಅರಣ್ಯ ಪ್ರದೇಶದಲ್ಲಿ ಹುಟ್ಟುತ್ತದೆ. ಇನ್ನೊಂದು ಉಪನದಿಯಾದ ರಾಮತೀರ್ಥ ಮತ್ತು ಕೆರೆಹೊಳೆ ನದಿಗಳು ವೀರಾಜಪೇಟೆಯ ಆಗ್ನೇಯ ಭಾಗಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುತ್ತವೆ.

ಈ ತಾಲೂಕಿನ ಜಲಸಂಪನ್ಮೂಲದಲ್ಲಿ ಪ್ರಮುಖ ಪಾತ್ರವಹಿಸುವ ಇನ್ನೊಂದು ಪ್ರಮುಖವಾದ ನದಿ ಬರಪೊಳೆ. "ಈ ನದಿಯು ಈ ಪ್ರದೇಶಕ್ಕೆ ಹೆಚ್ಚು ನೀರಾವರಿಯನ್ನು ಒದಗಿಸುವುದಕ್ಕೆ ಹೆಚ್ಚಾಗಿ ಈ ನದಿಗೆ ಅಡ್ಡಲಾಗಿ ವೀರಾಜಪೇಟೆಯಿಂದ ಆಗ್ನೇಯಕ್ಕೆ ೧೭ ಕಿ.ಮೀ. ದೂರದಲ್ಲಿರುವ ಪೊನ್ನಂಪೇಟೆ ನಾಡಿನ ಕುಟ್ಟಾಂಡಿ ಗ್ರಾಮದಲ್ಲಿ ಅಣೆಕಟ್ಟನ್ನು ಕಟ್ಟಲು ಯೋಜಿಸಲಾಗಿದ್ದು, ಅಣೆಕಟ್ಟಿನ ಜಲಾನಯನ ಪ್ರದೇಶ ವಿಸ್ತೀರ್ಣ ಸುಮಾರು ೬೦೮ ಚ.ಕಿ.ಮೀ. ಆಗಿರುತ್ತದೆ. ಈ ಯೋಜನೆಯಿಂದ ೧,೮೦,೦೦೦ ಕಿಲೋವ್ಯಾಟ್ ವಿದ್ಯುತ್‌ಚ್ಛಕ್ತಿ ಉತ್ಪಾದಿಸುವ ನಿರೀಕ್ಷೆಯಿದೆ."[೭] ಈ ಯೋಜನೆಯು ಇನ್ನು ಕಾರ್ಯಗತವಾಗಿಲ್ಲ. ಬರಪೊಳೆ ಎಂಬ ಹೆಸರಿನ ಉತ್ಪತ್ತಿ 'ಬರ' ಎಂದರೇ ಕಡಿದಾದ ಮತ್ತು 'ಪೊಳೆ' ಹೀಗೆ ಪ್ರಸ್ತುತ ಅಧ್ಯಯನ ಕ್ಷೇತ್ರವಾದ ವೀರಾಜಪೇಟೆ ತಾಲೂಕಿನಲ್ಲಿ ಜಲಸಂಪತ್ತು ಇದ್ದರೂ ಕೂಡ ಜನರಿಗೆ ಸರಿಯಾಗಿ ಉಪಯೋಗವಾಗುತ್ತಿಲ್ಲ. ಕಾರಣ ಇಲ್ಲಿ ಬೆಟ್ಟಗುಡ್ಡ ಅರಣ್ಯಗಳು ಹೆಚ್ಚಾಗಿರುವುದರಿಂದ ವ್ಯವಸಾಯಕ್ಕೆ ಯೋಗ್ಯವಾಗಿಲ್ಲ. ವೀರಾಜಪೇಟೆ ತಾಲೂಕಿನಲ್ಲಿ ಕೊಲ್ಲಿ ಜಲಾಶಯ ಹೆಚ್ಚಾಗಿ ಕಂಡುಬರುತ್ತದೆ. ಸಾರ್ವಜನಿಕ ಬಳಕೆಗೆ ಇರುವ ಸಣ್ಣ ಕೆರೆಗಳು ಮತ್ತು ಬಾವಿಗಳನ್ನು ಬಿಟ್ಟರೆ ದೊಡ್ಡ ಹಾಗೂ ನೀರಾವರಿ ಬಳಕೆಗೆ ಅನುಕೂಲವಾದ ಕೆರೆಗಳಿಲ್ಲ. ಕಣಿವೆಗಳಿಲ್ಲ, ನೀರಿನ ಚಿಲುಮೆಗಳು ಇದ್ದು ನೀರಾವರಿಗೆ ಸಹಾಯಕವಾಗಿವೆ.

ಖನಿಜ ನಿಕ್ಷೇಪಗಳು

ಈ ತಾಲೂಕಿನಲ್ಲಿ ಖನಿಜ ಸಂಪತ್ತು ಕಡಿಮೆ. ಹೆಚ್ಚಿನ ಪ್ರಮಾಣದಲ್ಲಿ ಖನಿಜಗಳು ದೊರೆಯುವುದಿಲ್ಲ. "ಇಲ್ಲಿನ ಮುಖ್ಯ ಖನಿಜಗಳು ಕೋರಂಡಂ, ಗ್ರಾನೈಟ್, ಮ್ಯಾಗ್ನಸೈಟ್ ಹಾಗೂ ಅಭ್ರಕ. ಕುರಂದವು ಅಲ್ಯೂಮಿನಿಯಂ ಆಕ್ಸೈಡ್ ಆಗಿದ್ದು ಷಟ್ಕೋಣಾಕೃತಿಯ ಹರಳಗಳ ಗುಂಪಿಗೆ ಸೇರಿರುವ ಖನಿಜ. ಈ ಭಾಗದಲ್ಲಿ ಚಿಕ್ಕ ಚಿಕ್ಕ ನಿಕ್ಷೇಪಗಳು ಇವೆ ಎಂದು ವರಿಯಲ್ಲಿ ತಿಳಿಸಲಾಗಿದೆ. ಕೆಲವು ಕಡೆ ಗ್ರಾನೈಟ್ ಕಣ ಸಮೂಹವಾಗಿ ದೊರೆಯುತ್ತದೆ."[೮] ಆದರೆ ಈ ರೀತಿಯ ಚಿಕ್ಕ ಕಣಗಳ ಸಮೂಹದಿಂದ ಹೆಚ್ಚು ಉಪಯೋಗವಿಲ್ಲ. ಪಾಲಿಬೆಟ್ಟದ ಹತ್ತಿರ ದೊಡ್ಡ ಅಭ್ರಕದ ಹಾಳೆಗಳು ಸಿಗುವುದೆಂದು ತಿಳಿದುಬಂದಿದೆ. ಸಿದ್ದಾಪುರದ ಬಳಿಯು ಗ್ರಾನೈಟ್ ನಿಕ್ಷೇಪಗಳಿರುವ ವರದಿಗಳಿವೆ. ಆದರೆ ಸದ್ಯ ಉಪಲಬ್ಧವಿರುವ ಖನಿಜಗಳು ಹೇರಳವಾಗಿಲ್ಲ, ಆರ್ಥಿಕವಾಗಿ ಲಾಭವಾದಯಕವಾಗಿಲ್ಲ ಮತ್ತು ಕೈಗಾರಿಕೆಗಳಲ್ಲಿ ಉಪಯೋಗವಾಗುವಂತಹ ಯಾವುದೇ ಖನಿಜಗಳು ಈ ತಾಲೂಕಿನಲ್ಲಿ ಎಲ್ಲೂ ಹೇರಳವಾಗಿ ದೊರೆಯುವುದಿಲ್ಲ.

ವನ್ಯಪ್ರಾಣಿ ಸಂಪತ್ತು

ವೀರಾಜಪೇಟೆ ತಾಲೂಕಿನಲ್ಲಿ ಸಮೃದ್ಧ ಹಾಗೂ ವರ್ಣರಂಜಿತವಾದ ವನ್ಯಜೀವಿ ಸಂಪತ್ತನ್ನು ಹೊಂದಿದೆ. ಪ್ರಾಣಿಗಳ ಸಮುದಾಯ ಅದರಲ್ಲೂ ಸ್ಥೂಲಕಾಯದ ಸಸ್ತನಿಗಳನ್ನು ಹೊಂದಿರುವುದು ವಿಶೇಷ. ಒಂದು ಪ್ರದೇಶವು ಸಸ್ಯಸಂಪತ್ತಿನ ವಿಪುಲತೆಯ ಮೇಲೆ ಅವಲಂಬಿಸಿದೆ. ಪ್ರಾಣಿಗಳು ಆಹಾರಕ್ಕಾಗಿ ಪರಾವಲಂಬಿಗಳಾಗಿರುವುದರಿಂದ ಸಸ್ಯಗಳ ಹಾಗೂ ಪ್ರಾಣಿಗಳ ವೈವಿದ್ಯವನ್ನು ಕಾಣಬಹುದು. ಈ ಭಾಗದಲ್ಲಿ ಸಾಮಾನ್ಯವಾಗಿ ಹಲವಾರು ವಿವಿಧ ರೀತಿಯ ಪ್ರಾಣಿಗಳನ್ನು ಕಾಣಬಹುದು. ಕೋತಿಗಳು, ಸೀಳುನಾಯಿ ಅಥವಾ ಕಾಡುನಾಯಿ, ಮುಂಗುಸಿಗಳು, ಚಿರತೆ, ಜಿಂಕೆ, ಕಾಡುಹಂದಿ, ಆನೆ, ಮುಳ್ಳು ಹಂದಿಗಳನ್ನು ಇನ್ನು ಮುಂತಾದ ಪ್ರಾಣಿಸಂಪತ್ತನ್ನು ಹೊಂದಿದೆ. ಇಂದಿನ ದಿನಗಳಲ್ಲಿ ಕೆಲವು ಪ್ರಾಣಿಗಳು ತಿನ್ನುವ ಬಾಯಿಗೆ ಆಹಾರವಾಗಿ ಕ್ಷೀಣಿಸುತ್ತಾ ಬರುವುದನ್ನು ಮರೆಯುವಂತಿಲ್ಲ.

ಬುಡಕಟ್ಟು ಸಮುದಾಯಗಳು

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕು ವಿಶಿಷ್ಟ ಬುಡಕಟ್ಟುಗಳು ಮನೆಮಾಡಿರುವ ಈ ತಾಲೂಕು ಹಲವಾರು ಸಂಘಸಂಸ್ಥೆಗಳು ಹಾಗೂ ಹಲವಾರು ಅಧ್ಯಯನಕಾರರ ಗಮನಸೆಳೆದಿವೆ. ಬುಡಕಟ್ಟುಗಳ ಸಂಸ್ಕೃತಿ, ಭಾಷೆ, ನಡೆ-ನುಡಿ, ಆಚರಣೆ ಮುಂತಾದವುಗಳ ಬಗ್ಗೆ ತಿಳಿದಷ್ಟು ತೀರದ ಸಮೃದ್ಧ ಸಂಸ್ಕೃತಿ ಬುಡಕಟ್ಟು ಜನರದು. ತಮ್ಮದೆಯಾದ ಸಾಮಾಜಿಕ ಉಪಭಾಷೆ, ಮೂಲಪುರುಷ, ಆದಿದೈವ ಹಾಗೂ ಮುಖಂಡರನ್ನು ಹೊಂದಿರುವ ರೂಢಿ, ನಂಬಿಕೆ, ಸಂಪ್ರದಾಯಗಳನ್ನು ಹಾಡು, ಕಥೆ, ಗಾನ, ಉಗಮ ಮುಂತಾದ ಸಾಹಿತ್ಯದ ರೂಪಗಳನ್ನು ಮನೋರಂಜಕ ಕಲೆ, ಮಾಟ, ಮಂತ್ರ ಮುಂತಾದ ವಿಶೇಷ ಜ್ಞಾನಗಳನ್ನು ತಮ್ಮದೇ ಆದ ವಿಧಿ, ನಿಷೇಧಗಳನ್ನು, ನೈಸರ್ಗಿಕ ಕಾಯಿದೆ ಕಟ್ಟಳೆಗಳು ಸುಸಂಘಟಿತ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವ ಬುಡಕಟ್ಟು ಜನರು ಒಂದು ಸಂಸ್ಕೃತಿ ಸಂಪನ್ನ ಜನಾಂಗ.

ಗಿರಿನಿವಾಸಿಗಳಾದ ಬುಡಕಟ್ಟು ಜನಾಂಗಗಳು ಮೂಲತಃ ಒಂದೆಡೆ ನೆಲೆನಿಂತು ವ್ಯವಸಾಯವನ್ನು ಮಾಡಿ ಜೀವನವನ್ನು ಸಾಗಿಸಿದವರಲ್ಲಿ ಪ್ರಮುಖರು. ಹಿಂದೆ ಯಾರ ಒಡೆತನಕ್ಕೂ ಸೇರದ ಗುಡ್ಡಬೆಟ್ಟಗಳ ಪ್ರಕೃತಿದತ್ತ ಉತ್ಪನ್ನಗಳಾದ ಗೆಡ್ಡೆಗೆಣಸು, ಹಣ್ಣುಕಾಯಿ, ಹೂವು, ಹೀಚು, ಜೇನುತುಪ್ಪ ಮುಂತಾದವುಗಳನ್ನು ಸಂಗ್ರಹಿಸಿ ಕಾಡುಪ್ರಾಣಿಗಳನ್ನು ಬೇಟೆಯಾಡಿ, ಬೇಸಾಯಕ್ಷೇತ್ರವನ್ನು ಮೇಲಿಂದ ಮೇಲೆ ಬದಲಾಯಿಸುವ, ಸಂಚಾರಿ ಇಲ್ಲದೆ ಕುಮ್ರಿ ಬೇಸಾಯವನ್ನು ಮಾಡಿ ಬದುಕುಳಿದ ಜನಾಂಗವಿದು. ವರ್ತಮಾನದ ಅಗತ್ಯಕ್ಕೆ ಮಾತ್ರ ಹೆಚ್ಚಿನ ಕಾಳಜಿ ವಹಿಸುವರು. ಇವರು ಭವಿಷ್ಯದ ಪ್ರಯೋಜನಕ್ಕಾಗಿ ಸಂಪತ್ತನ್ನು ಕೂಡಿಹಾಕುವವರಲ್ಲ. ನಂತರದ ದಿನಗಳಲ್ಲಿ ಬಂದ ಅರಣ್ಯ ಸಂರಕ್ಷಣಾ ಕಾಯ್ದೆ ಹಾಗೂ ಇನ್ನಿತರ ಆದೇಶಗಳು ಅವರ ಜೀವನವನ್ನು ಅಸ್ತವ್ಯಸ್ತಗೊಳಿಸಿದವು. ಕಾಡಿನ ಸಂಪತ್ತನ್ನು ಅನುಭೋಗಿಸುವ ಇವರ ಹಕ್ಕನ್ನು ಕಸಿದುಕೊಂಡ ಪ್ರಯುಕ್ತ ಇವರಲ್ಲಿ ಅನೇಕರು ಅನಾಥರಾದರು. ಕಾಡಿನಲ್ಲಿ ಜೀವನ ಸಾಗಿಸುವುದು ಇವರಿಗೆ ದುರ್ಬರವಾಗಿ, ಕಾಡನ್ನು ತ್ಯಜಿಸಿ ಗ್ರಾಮಗಳಲ್ಲಿ ನೆಲೆಸಿ ಇಂದಿನ ಬದಲಾದ ಸ್ಥಿತಿಗೆ ಹೊಂದಿಕೊಂಡು ಜೀವನಸಾಗಿಸ ತೊಡಗಿದರು.

ಬುಡಕಟ್ಟು ಜನಾಂಗಗಳ ಸಾಮಾಜಿಕ ಬದುಕಿನಲ್ಲಿ ಜಾನಪದ ವೈಶಿಷ್ಟ್ಯ ಕರಗಿಹೋಗುವ ಹಂತದಲ್ಲಿದೆ. ಇವರ ಸಾಮಾಜಿಕ ಬದುಕು ಹಾಗೂ ಜಾನಪದ ವಾಗಾರ್ಥಗಳಂತೆ ಅವಿನಾಭಾವಿಯಾಗಿ ಬೆರೆತಿವೆ. ಇವರ ಬೇಟೆ, ಬೇಸಾಯ ಪದ್ಧತಿ, ಕುಟುಂಬದ ಪದ್ಧತಿ, ಆಡಳಿತಪದ್ಧತಿ, ಧಾರ್ಮಿಕ ಪದ್ಧತಿ ಈ ಮುಂತಾದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾನಪದದ ಸೊಗಡು ದಟ್ಟವಾಗಿದೆ. ಜಾನಪದದ ಸೊಗಡು ಪ್ರಮುಖ ಲಕ್ಷಣವಾದ ಸಾಮೂಹಿಕ ಕ್ರಿಯೆ ಇಲ್ಲಿ ಪ್ರಧಾನ ಪಾತ್ರವಾಗುತ್ತದೆ. ಕೊಡಗಿನ ವೀರಾಜಪೇಟೆ ತಾಲೂಕಿನ ಬುಡಕಟ್ಟು ಜನಾಂಗಗಳ ಒಂದು ಸಂಕ್ಷಿಪ್ತ ವರದಿ ಇಲ್ಲಿದೆ.

ಕಾಡು ಕುರುಬರು ಮತ್ತು ಜೇನು ಕುರುಬರು

'ಕುರುಬ' ಎಂಬ ಪದವು 'ಕುರು' ಎಂಬ ಪದದಿಂದ ಬಂದು ನಿಷ್ಪನ್ನಗೊಂಡಿದೆ. 'ಕುರು' ಎಂಬ ಪದ 'ಕುರಿ' ಎಂಬ ಪ್ರಾಣಿ ಎಂಬುದನ್ನು ತಿಳಿಸುತ್ತದೆ. 'ಕುರುಬ' ಎಂದರೇ ಕುರಿ 'ಸಾಕುವವ' ಎಂಬ ಅರ್ಥಕೊಡುತ್ತದೆ. ಆದರೆ ಕಾಡು ಕುರುಬರು ಯಾವುದೇ ರೀತಿಯ ಕುರಿಸಾಕಾಣಿಕೆ ಸಂಪ್ರದಾಯವನ್ನು ಇಟ್ಟುಕೊಂಡಿಲ್ಲ. ಜೇನು ಕುರುಬರು ಮತ್ತು ಕಾಡುಕುರುಬರು ಕಪ್ಪು ಮೈಬಣ್ಣದವರಾಗಿದ್ದು ಕೆಲವರು ಗಾಢ ಕಂದು ಮೈ ಬಣ್ಣವನ್ನು ಹೊಂದಿದ್ದಾರೆ. ಮಧ್ಯಮ ಎತ್ತರ, ಗುಂಗುರು ಕೂದಲು, ಅಗಲ ಮೂಗು ಹಾಗೂ ದಪ್ಪ ತುಟಿ ಇವರ ಸಾಮಾನ್ಯ ಲಕ್ಷಣ.

ಇವರು ವಾಸಿಸುವ ಪ್ರದೇಶವನ್ನು ಹಾಡಿಗಳೆಂದು ಕರೆಯುತ್ತಾರೆ. ಒಂದೊಂದು ಹಾಡಿಯಲ್ಲಿ ೨೦-೩೦ ಕುಟುಂಬಗಳು ವಾಸಿಸುತ್ತವೆ. ಅವರು ಮನೆಕಟ್ಟಲು ಕಾಡಿನಲ್ಲಿ ದೊರೆಯುವ ಬಿದಿರು, ಹುಲ್ಲು, ಗರಿಗಳು, ಮಣ್ಣು-ನೀರು, ನಾರುಗಳನ್ನು ಬಳಸುತ್ತಾರೆ. ಹಾಡಿಕಟ್ಟುವ ಮುನ್ನ ಆ ಜಾಗದಲ್ಲಿ ಕಲ್ಲುಗಳನ್ನು ನೆಟ್ಟು ಪೂಜೆಮಾಡಿ ನಂತರದ ಕಾರ್ಯವನ್ನು ಶುರುಮಾಡುತ್ತಾರೆ. ಮಾರನೆಯ ದಿನದವರೆಗೆ ಕಲ್ಲು ಹಾಗೆ ಇದ್ದರೆ ಆ ಪ್ರದೇಶ ಗಾಳಿ, ಗರಿಗಳಿಂದ ಮುಕ್ತವಾದ ಪ್ರದೇಶವೆಂಬುದು ಅವರ ನಂಬಿಕೆ. ಕಲ್ಲುಗಳು ಉರುಳಿಬಿದ್ದರೆ ಆ ಸ್ಥಳ ಅಪಾಯಕಾರಿ ಎಂದು ಭಾವಿಸುತ್ತಾರೆ. ಕುರುಬರ ಹಾಡಿಗಳು ಚಿಕ್ಕದಾಗಿ, ಚೊಕ್ಕವಾಗಿ ಕಂಡುಬರುತ್ತವೆ. ಗುಡಿಸಲಿನ ಹೊರಭಾಗದಲ್ಲಿ ಸಾಮಾನ್ಯವಾಗಿ ಬೆಂಕಿ ಹಾಕಿರುತ್ತಾರೆ. ಗುಡಿಸಲಿನ ಇನ್ನೊಂದು ಭಾಗದಲ್ಲಿ ಅರೆಯುವ ಕಲ್ಲು, ಕೋಳಿಗೂಡು ಇರುತ್ತದೆ. ಗುಡಸಲಿನ ಮುಂಭಾಗಕ್ಕೆ ಗುಡಿಸಲು ಗೋಡೆಗೆ ಹೊಂದಿಕೊಂಡಂತೆ ಮಣ್ಣಿನಿಂದ ಮಾಡಿ ಸಾರಿಸಿದ ಜಗುಲಿಯನ್ನು ಕಾಣಬಹುದು. ಕುರುಬರು ಬಹಳ ಸರಳ ಜೀವಿಗಳು. ಅಡುಗೆಗೆ ಆಗಲಿ ಅಥವಾ ಇನ್ನು ಬೇರೆ ವಿಚಾರದಲ್ಲೇ ಆಗಲಿ ಅಗತ್ಯಕ್ಕಿಂತ ಹೆಚ್ಚುವಸ್ತುವಿನ ಬಳಕೆ ಇಲ್ಲ. ಪ್ರತಿಯೊಂದು ಕುರುಬರ ಹಾಡಿಗೆ ಒಬ್ಬ ಯಜಮಾನ ಇರುತ್ತಾನೆ. ಗುಂಪಿನ ಯಾವುದೇ ವಿಚಾರವಾಗಲಿ, ಹಾಡಿಯಲ್ಲಿನ ಪ್ರವೇಶಕ್ಕೆ ಆಗಲಿ ಈ ಯಜಮಾನ ಬಹಳ ಮುಖ್ಯ.

ಜೇನುಕುರುಬ ಮತ್ತು ಕಾಡು ಕುರುಬರು ಸಾಮಾನ್ಯವಾಗಿ ಲುಂಗಿ ಮತ್ತು ಷರ್ಟನ್ನು ಧರಿಸುತ್ತಾರೆ. ಕಾಡುಕುರುಬ ಹೆಂಗಸರಲ್ಲಿ ಕೆಲವರು ಸೀರೆಯನ್ನು ಪೂರ್ಣವಾಗಿ ಸುತ್ತುತ್ತಾರೆ. ಇನ್ನು ಕೆಲವರು ಬಲಗಡೆಯ ಭುಜದ ಮೇಲೆ ಹಾಯ್ದುಬರುವಂತೆ ಸೆರಗನ್ನು ಸೇರಿಸಿ ಸಣ್ಣಗಂಟು ಹಾಕುವುದು ಕೂಡ ರೂಢಿಯಲ್ಲಿದೆ.

ಇವರ ಆಹಾರಪದ್ಧತಿ ಅವರ ಜೀವನಕ್ಕೆ ಅನುಗುಣವಾಗಿದೆ. ಕಾಡಿನಲ್ಲಿ ದೊರೆಯುವ ಗೆಡ್ಡೆ ಗೆಣಸು ನಾರು ಬೇರು ಸೊಪ್ಪುಗಳನ್ನು ಆಹಾರವಾಗಿಯು, ಔಷಧಿಯಾಗಿಯು ಬಳಸುತ್ತಾರೆ. ಇದರ ಜೊತೆಗೆ ಇತ್ತೀಚಿಗೆ ರಾಗಿ, ಜೋಳ, ಅಕ್ಕಿ ಸಂಬಾರ ಪದಾರ್ಥಗಳ ಬಳಕೆ ರೂಢಿಯಲ್ಲಿದೆ. ಈ ವಸ್ತುಗಳನ್ನು ಆಹಾರವಾಗಿ ಬಳಸುವುದಲ್ಲದೆ, ಕೆಲವು ನಿರ್ದಿಷ್ಟ ತರಕಾರಿಗಳೊಂದಿಗೆ ಒಂದು ಭಾವನಾತ್ಮಕ ಸಂಬಂಧವನ್ನು ವ್ಯಕ್ತಪಡಿಸುವುದು ಅವರ ಕೆಲ ಕಥೆಗಳಲ್ಲಿ, ಹಾಡುಗಳಲ್ಲಿ ಅಭಿವ್ಯಕ್ತಗೊಂಡಿದೆ. ಈ ಬುಡಕಟ್ಟು ಸಮುದಾಯದವರು ಸಸ್ಯಹಾರಿ ಹಾಗೂ ಮಾಂಸಹಾರಿಗಳು ಆಗಿರುವುದರಿಂದ ಸಹಜವಾಗಿ ಚಿಕ್ಕ ಚಿಕ್ಕ ಪ್ರಾಣಿಗಳನ್ನು ಹಿಡಿದು ತಂದು ಒಣಗಿಸಿ ತಿನ್ನುತ್ತಾರೆ. ಸೊಪ್ಪುಗಳಲ್ಲಿ ಮುಳ್ಳುಗೀರೆ, ಹೊನಗನೆಸೊಪ್ಪು, ಜಿಗಟೆಸೊಪ್ಪು, ಗಣಕೆಸೊಪ್ಪು, ಕೀರೆಸೊಪ್ಪು, ಕಾಡುನುಗ್ಗೆ, ಬೊನಗೆರೆ, ಕಾಡುಸಾಸಿವೆ ಇತ್ಯಾದಿಗಳನ್ನು ಬಳಸುತ್ತಾರೆ. ತಾವು ತಿನ್ನುವ ಪ್ರತಿಯೊಂದು ಸಸ್ಯದ ಬಗ್ಗೆ ಪೂರ್ಣವಾದ ಜ್ಞಾನ ಇದ್ದು, ಸಸ್ಯದ ಸಿಹಿ, ಒಗರು, ಗುಣಗಳನ್ನು ತಿಳಿದುಕೊಂಡಿದ್ದಾರೆ. ವಯಸ್ಸಿಗೆ ತಕ್ಕದಾದ ಆಹಾರ ವಿಧಾನಗಳು ಕೂಡ ಕಂಡುಬರುತ್ತದೆ. ಈ ಬುಡಕಟ್ಟಿನ ಇನ್ನೊಂದು ವಿಶೇಷವೆಂದರೇ, 'ಬುರುಡೆ ಕರೆಯುವುದು; ಇದು ದೈವದರ್ಶನ ಮತ್ತು ದೈವದೊಡನೆ ಸಂಭಾಷಣೆ ಮಾಡುವ ಒಂದು ವಿಶಿಷ್ಟವಾದ ಆಚರಣೆ. ೧೦-೧೨ಜನ ಸೇರಿ ಬುರುಡೆ ಕರೆಯುತ್ತಾರೆ. ಜೇನು ಕುರುಬರು ಕಹಿಸೋರೆಕಾಯಿ ಗಿಡದ ಕಾಯನ್ನು ಚೆನ್ನಾಗಿ ತೊಳೆದು ಬಿಸಿಲಿನಲ್ಲಿ ಒಣಗಿಸಿ ಇಡುತ್ತಾರೆ. ಕೊಲಂಗಿ ಬೀಜವನ್ನು ಒಣಗಿಸಿ ಇದನ್ನು ಗುರುಗಂಜಿಯೆಂದು ಕರೆಯುತ್ತಾರೆ. ಈ ಗುರುಗಂಜಿಗಳನ್ನು ಆ ಬುರುಡೆ ಒಳಿಗೆ ಹಾಕಿ ಆಮೇಲೆ ಮೇಣದಿಂದ ಮುಚ್ಚುತ್ತಾರೆ. ಪ್ರತಿಯೊಬ್ಬ ಜೇನುಕುರುಬನ ಗುಡಿಸಲಲ್ಲಿ ಈ ಬುರುಡೆ ಇರುವುದು ಸಹಜ. ಬೆಟ್ಟಕುರುಬರಲ್ಲಿ ಬಿದಿರಿನಿಂದ ಮಾಡಿದ ಮೊರದ ಆಕಾರದ ಗೆಜ್ಜೆಕಟ್ಟಿದ ಸಾಧನವಿರುತ್ತದೆ.

ಕಾಡಿನ ಮಧ್ಯದಲ್ಲಿ ಇರುವ ಅಂಬಾಲಮ್ಮನ ದೇವಸ್ಥಾನಕ್ಕೆ ಹರಕೆ ರೂಪದಲ್ಲಿ ಆನೆ, ಕುದುರೆ, ದೀಪಗಳನ್ನು ನೀಡಲಾಗುತ್ತದೆ. ಹೆಣ್ಣು ಮೈ ನೆರೆಯುವುದು ಇವರಿಗೆ ಒಂದು ವಿಶೇಷ. ಜೇನುಕುರುಬರು ಈ ಸಂದರ್ಭದಲ್ಲಿ ಹುಡುಗಿಗೆ ಪ್ರತ್ಯೇಕವಾಗಿ ಒಂದು ಗುಡ್ಲು ಹಾಕುತ್ತಾರೆ. ಈ ಕೆಲಸವನ್ನು ಸೋದರಮಾವ ನೆರವೇರಿಸುತ್ತಾನೆ. ಕೆಲವು ಕಡೆ ಜಗುಲಿಯ ಮೇಲೆ ಗುಡ್ಲನು ಕಟ್ಟುತ್ತಾರೆ. ಇದನ್ನು ಮಾವು, ಹತ್ತಿ, ಹಲಸಿನ ಸೊಪ್ಪಿನಿಂದ ನಿರ್ಮಿಸುತ್ತಾರೆ. ಹೀಗೆ ಒಂಬತ್ತು ದಿವಸಗಳವರೆಗೂ ಅಥವಾ ತಿಂಗಳವರೆಗೂ ಅವಳು ಗುಡಿಸಲಲ್ಲೇ ಇರಬೇಕು. ಇದನ್ನು ಕಾಡ ಕುರುಬರು 'ಕನ್ನೆಸೂತಕ' ಎನ್ನುತ್ತಾರೆ. ಕನ್ನೆಯ ಸೂತಕ ತೆಗೆಯುವಾಗ ಅವಳನ್ನು ನೀರಿನ ಬಳಿ ಕರೆದುಕೊಂಡು ಹೋಗಿ ಒನಕೆ ದಾಟಿಸುತ್ತಾರೆ. ನೆಂಟರೆಲ್ಲರೂ ಬಂದ ಮೇಲೆ ಅಡಿಕೆ, ಕಡಲೆಬೆಲ್ಲ, ಕೊಬ್ಬರಿ, ಎಳ್ಳುಂಡೆ ಇವೆಲ್ಲವನ್ನು ಹಾಕಿ ಹರಸುತ್ತಾರೆ. ಜೇನು ಕುರುಬರು ಮತ್ತು ಕಾಡು ಕುರುಬರ ವಿವಾಹಪದ್ಧತಿ ವಿಶಿಷ್ಟವಾಗಿದೆ. ಎರಡು ಬುಡಕಟ್ಟುಗಳಲ್ಲಿ ಬೇರೆಯವರ ವಿವಾಹ ಪದ್ಧತಿಗಿಂತ ವಿಭಿನ್ನವಾಗಿದೆ. ಸಂಪ್ರದಾಯ ವಿವಾಹ ಬಂಧನಕ್ಕಿಂತ ಹುಡುಗ, ಹುಡುಗಿ, ಒಬ್ಬರಿಗೊಬ್ಬರು ಮೆಚ್ಚಿ ಪ್ರೀತಿಸಿ ಮದುವೆಯಾಗುವುದು ರೂಢಿಯಲ್ಲಿತ್ತು. ಈಗ ಈ ಸಂಪ್ರದಾಯಗಳು ಬದಲಾವಣೆಗೊಂಡಿವೆ. ಆದರೂ ಹೆಚ್ಚು ಚಾಲ್ತಿಯಲ್ಲಿರುವ ಸಂಪ್ರದಾಯ ಓಡಿಹೋಗಿ ಮದುವೆಯಾಗುವುದು. ಶೇ.೩ ಮಾತ್ರ ಧಾರೆ ಎರೆಯುತ್ತಾರೆ. ಹೆಣ್ಣು ಮತ್ತು ಗಂಡು ಆಯ್ಕೆ ಮಾಡುವಾಗ

ಸಾಲಾವಳಿಯನ್ನು ಗಮನಿಸುತ್ತಾರೆ. ಒಂದೇ ಕುಲದೈವವನ್ನು ಹೊಂದಿದವರೊಡನೆ ವಿವಾಹಸಲ್ಲದು, ವಿವಾಹನಂತರ ಹೆಣ್ಣು ಗಂಡುಮನೆತನಕ್ಕೆ ಸೇರುತ್ತಾಳೆ. ಮದುವೆಯ ಖರ್ಚನ್ನು ಎರಡು ಕಡೆಯವರು ಸಮಾನವಾಗಿ ಹಂಚಿಕೊಳ್ಳುತ್ತಾರೆ.

"ಕಾಡುಕುರುಬ ಮತ್ತು ಜೇನು ಕುರುಬರಲ್ಲಿ ಸತ್ತಮೇಲೆ ಶವವನ್ನು ಹೂಳುವುದು ಮತ್ತು ಸುಡುವ ಪದ್ಧತಿ ಎರಡು ಜಾರಿಯಲ್ಲಿದೆ. ಸತ್ತಮೇಲೆ ಕೆಲವು ದಿನಗಳನಂತರ ನೆರಳು ಎತ್ತುವ ಸಂಪ್ರದಾಯವಿದೆ. ಬೊಂಬಿನಲ್ಲಿ ಮೂಳೆಗಳನ್ನಿಟ್ಟು ಪೂಜಿಸಿ ನಂತರ ಸತ್ತವರ ಹೆಸರಿನಲ್ಲಿ ಎಡೆಹಾಕುತ್ತಾರೆ. ಯಾರಾದರು ಕಾಡುಪ್ರಾಣಿಗಳ ಆಕ್ರಮಣದಿಂದ ಆಕಾಲಮರಣಕ್ಕೆ ಈಡಾದರೆ ಅಂತಹವರನ್ನು ಸುಡುತ್ತಾರೆ."[5] ಪ್ರತಿ ಯುಗಾದಿಯ ಸಂದರ್ಭದಲ್ಲಿ ಒಂದು ಕಡೆಯಿಂದ ಇನ್ನೊಂದೆಡೆಗೆ ಕಾಡಿನಲ್ಲಿಯೇ ವಲಸೆ ಹೋಗುವ ಈ ಬುಡಕಟ್ಟು ಗುಂಪು, ತಾವು ವಾಸಿಸುವ ಸ್ಥಳದಲ್ಲಿ ಯಾರಾದರೂ ಸತ್ತರೆ ಕೂಡಲೇ ಆ ಜಾಗ ಖಾಲಿಮಾಡುತ್ತಾರೆ. ಕೊಡಗಿನಲ್ಲಿ ಕಾಫಿ ಕುಯ್ಯುವ ತಿಂಗಳುಗಳಲ್ಲಿ ಅಂದರೇ ಡಿಸೆಂಬರ್‌ನಿಂದ ಮಾರ್ಚ್‌ತಿಂಗಳವರೆಗೆ ಇವರು ಹಾಡಿಬಿಟ್ಟು ನೆಂಟರಿಷ್ಟರ ಮನೆಗೆ ಕಾಫಿ ಕೆಲಸಕ್ಕೆಂದು ಹೋಗುವುದು ಸಾಮಾನ್ಯವಾಗಿ ಕಂಡುಬರುತ್ತದೆ.

ಈ ಬುಡಕಟ್ಟುಗಳು ಇಂದಿನ ದಿನಗಳಲ್ಲಿ ಸುತ್ತಮುತ್ತಲಿನ ಪರಿಸರದಲ್ಲಿಯೇ ಇನ್ನು ಸ್ವಚ್ಛಂದ ಬದುಕನ್ನು ಸಾಗಿಸುತ್ತಿರುವ ಇವರಲ್ಲಿ ಕೆಲವರಿಗೆ ಸರ್ಕಾರದ ಯೋಜನೆಗಳು ಇನ್ನೂ ಮಾನಸಿಕ ತೃಪ್ತಿಯನ್ನು ತಂದುಕೊಟ್ಟಿಲ್ಲ. ಇವರು ಇತರ ಬುಡಕಟ್ಟುಗಳಾದ ಯರವರು, ಫಣಿಯರು ಇತರರೊಂದಿಗೆ ಸಾಮಾಜಿಕ ಸಾಮರಸ್ಯದೊಂದಿಗೆ ಬಾಳುತ್ತಿರುವುದು ಕಂಡುಬರುತ್ತದೆ.

ಯರವರು

ಯರವರು ಕೊಡಗಿನ ವೀರಾಜಪೇಟೆ ತಾಲೂಕಿನ ಒಂದು ಪ್ರಮುಖ ಆದಿವಾಸಿ ಜನಾಂಗ. ತಿತಿಮತಿ ಮತ್ತು ನೂಕ್ಯ, ಮರಪಾಲ ಪೈಸಾರಿ ದೇವರಪುರ ಮತ್ತು ಭದ್ರಗೊಳ ವ್ಯಾಪ್ತಿಯಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಯರವರು ಮೂಲತಃ ವೈನಾಡಿಗೆ ಸೇರಿದ ಅಲೆಮಾರಿ ಬುಡಕಟ್ಟು. ಅವರು ತಮ್ಮದೇ ಆದ ಭಾಷೆಯನ್ನು ಮಾತನಾಡುತ್ತಾರೆ. ಅವರು ದೈಹಿಕವಾಗಿ ಬಲಶಾಲಿಗಳಾಗಿದ್ದು ಶ್ರಮವಹಿಸಿ ದುಡಿಯವರು. ಶಾರೀರಿಕ ಲಕ್ಷಣ ಮತ್ತು ಮೈಬಣ್ಣದಲ್ಲಿ ಎರವರು ಕುರುಬರನ್ನು ಹೋಲುತ್ತಾರೆ. ಅವರಂತೆಯೇ ಬಟ್ಟೆಧರಿಸುತ್ತಾರೆ. ಮದುವೆ, ಹಬ್ಬ, ಹರಿದಿನಗಳಲ್ಲಿ ತಮ್ಮದೇ ಆದ ವಿಶೇಷ ಹಾಡುಗಳನ್ನು ಹಾಡುತ್ತಾ ಕುಣಿಯುತ್ತಾರೆ. ಇದರಲ್ಲಿ ಹೆಂಗಸರು ಭಾಗವಹಿಸುತ್ತಾರೆ. ಇವರಲ್ಲಿ ಹಲವರು ಕಾಡುಗಳಲ್ಲಿ ಬಹಳ ಬಡತನ ಸ್ಥಿತಿಯಲ್ಲಿದ್ದಾರೆ. ಇತರರು ಕಾಫಿ ತೋಟಗಳಲ್ಲಿ ಕೂಲಿ ಆಳುಗಳಾಗಿ ದುಡಿಯುತ್ತಿದ್ದಾರೆ. ಗುಂಗುರು ಕೂದಲು, ಅಗಲವಾದ ಮೂಗು, ದಪ್ಪ ತುಟಿ ಇವರ ಸ್ವರೂಪ. ಇವರಲ್ಲಿ ಪಂಜರಿ ಎರವ ಮತ್ತು ಫಣಿಯರವ ಎಂಬ ಎರಡು ಗುಂಪುಗಳಿವೆ. ಪಂಜರಿಎರವರ ಯಜಮಾನನನ್ನು 'ಕನಲಾಡಿ' ಎಂತಲು ಕರೆಯುತ್ತಾರೆ. ಅವರ ಆರಾಧ್ಯದೈವ 'ಕರುಂಗಾಳು ಅಂದರೇ ಕರಿಯಾಳಿ. ಅವರು ಹಂದಿಗಳನ್ನು ಇಲಿಗಳನ್ನು ಮತ್ತು ಕೀಟವನ್ನು ತಿನ್ನುತ್ತಾರೆ. ಅವರಲ್ಲಿ ಗೋಮಾಂಸ ನಿಷಿದ್ಧ.

ಎರವ ಎಂಬುದು ಈ ಬುಡಕಟ್ಟಿಗೆ ಕೊಡವರು ನೀಡಿರುವ ಹೆಸರು ಎಂಬ ಉಲ್ಲೇಖವಿದೆ. ಏಕೆಂದರೆ ಭೂರಹಿತವಾದ ಈ ಅಲೆಮಾರಿ ಬುಡಕಟ್ಟು ಭಾಷೆಯಲ್ಲಿ 'ಎರ' ಎಂದರೆ 'ಭಿಕ್ಷೆ' ಎರವ ಎಂದರೆ ಭಿಕ್ಷುಕ. ಹಾಗಾಗಿ ಈ ಹೆಸರು ಬಂದಿರಬೇಕು ಎಂದು ಊಹಿಸಲಾಗಿದೆ."೧೦

ಇವರು ತಮ್ಮ ಮೂಲದ ಬಗ್ಗೆ ಹೇಳಿಕೊಳ್ಳುವ ಸಂದರ್ಭದಲ್ಲಿ 'ಇರಾವುಳೇರ್' ಅಥವಾ 'ರಾವುಳೇರ್' ಎಂಬುದಾಗಿ ಗುರುತಿಸಿಕೊಳ್ಳುವರು, ಇವರ ಮೂಲವನ್ನು ಕುರಿತಂತೆ ಎರಡು ಐತಿಹ್ಯಗಳಿವೆ. ಇವರು ಬ್ರಾಹ್ಮಣ ಕನ್ಯೆಯೊಡನೆ ಪ್ರತಿಲೋಮ ವಿವಾಹವಾಗಿ ಶಿವದ್ವಜ ಬ್ರಾಹ್ಮಣನ ಪೀಳಿಗೆಯವರು ಎಂಬುದು. ಮತ್ತೊಂದು ಕಥೆಯ ಪ್ರಕಾರ ಶಿವನಿಗೆ ಇಟ್ಟ ಎಡೆಯನ್ನು ಬ್ರಾಹ್ಮಣನೊಬ್ಬ ಸೇವಿಸಿ ಅನಾಚಾರವೆಸಗಿದ. ಹೀಗೆ ಅನಾಚಾರವೆಸಗಿದ ಬ್ರಾಹ್ಮಣನ ಸಂತಾನವೇ ಇವರು ಎಂದು ಹೇಳಲಾಗಿದೆ. ತಮ್ಮ ಪೂರ್ವಜರು ಭದ್ರಕಾಳಿ ದೇವಾಲಯದಲ್ಲಿ ಅರ್ಚಕರಾಗಿದ್ದರೆಂದು ಎರವರು ಹೇಳಿಕೊಳ್ಳುವರು. ಇವರ ಕುಲದೈವಗಳಲ್ಲಿ ಒಂದಾದ 'ಪೊಕರಿಮೆಗೆ ಕರಿಯಪ್ಪೆ' ಎಂಬ ದೇವರುನ್ನು ಪೂಜಿಸುವಾಗ ಪೂಜೆ ಮಾಡುವ ವ್ಯಕ್ತಿ ಜನಿವಾರವನ್ನು ಧರಿಸುವ ಸಂಪ್ರದಾಯವಿದೆ.

ಇವರ ಜೀವನ ವಿಧಾನ ಸರಳ. ಜೀವನ ನಿರ್ವಹಣೆ ಪ್ರಕೃತಿಯ ಜೊತೆಗಿನ ಸೆಣಸಾಟದಿಂದ ಕೂಡಿದೆ. ಇವರು ಅರಣ್ಯ ಪ್ರದೇಶದ ಇಳಿಜಾರಿನಲ್ಲಿ ನೆಲೆಮಾಡಿಕೊಂಡಿದ್ದಾರೆ. ಮಲೆನಾಡಿನ ಪರಿಸರಕ್ಕೆ ಹೊಂದಿಕೊಂಡಂತೆ ದೂರ ದೂರಕ್ಕೆ ಒಂದೊಂದು ಗುಡಿಸಲು ಅಥವಾ ಮನೆ. ಅವರು ಹೆಚ್ಚಾಗಿ ಮತ್ತಿಗೊಡು, ಮಜ್ಜಿಗೆ ಹಳ್ಳ, ಮರೂರು, ಕಾರೆ ಕಿಂಡಿ, ಮಾಲ್ದಾರೆ, ಆನೆ ಚಾಕೂರ್, ಚೇಬುಕೊಲ್ಲಿ, ಅಸ್ತಾನ್ ಮುಂತಾದ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಕಾಫಿ ಮಾಲೀಕರು ಪ್ರತ್ಯೇಕವಾಗಿ ನಿರ್ಮಿಸಿರುವ ಲೈನ್ ಮನೆಗಳಲ್ಲಿಯು ಹಲವಾರು ಕುಟುಂಬಗಳು ವಾಸವಾಗಿವೆ. ತಮ್ಮ ನೆಲೆದಾಣಗಳನ್ನು 'ಕುಂಜು' ಎಂದು ಕರೆಯುತ್ತಾರೆ. ವಾಸದ ಮನೆಗೆ ಹೊಂದಿಕೊಂಡಂತೆ ಪ್ರತ್ಯೇಕವಾದ 'ಕುಳಿಗುಡ್ಡ' ಸ್ನಾನದ ಮನೆ ಮತ್ತು ಕೊಟ್ಟಿಗೆ ಇರುತ್ತದೆ. ಹಂದಿ ಮತ್ತು ಕೋಳಿ ಸಾಕಾಣಿಕೆಗೆ ಬೇರೆ ಬೇರೆ ಗೂಡುಗಳನ್ನು ಮಾಡಿರುತ್ತಾರೆ. ವಾಸದ ಮನೆಯ ಮುಂಭಾಗದ ಅಂಗಳವನ್ನು ಸಮಮಾಡಿ, ಅದನ್ನು ಸಗಣಿ ಬಗ್ಗಡದಿಂದ ಸಾರಿಸಿ ಅದರ ನಡುಮಧ್ಯೆ ಒಂದು ಬಿದಿರಿನ ಕಂಬವನ್ನು ನೆಟ್ಟಿರುತ್ತಾರೆ. ಇದು ಎರವರ ವಾಸಸ್ಥಾನದ ಸಂಕೇತ. ಅಲೆಮಾರಿಗಳಾಗಿದ್ದ ಇವರು ಒಂದೆಡೆ ನೆಲೆಸಲು ನಿಶ್ಚಯಿಸಿದ ಮೇಲೆ ವಾಸಸ್ಥಾನಕ್ಕೆ ಯೋಗ್ಯವಾದ ಸ್ಥಳದಲ್ಲಿ ಯಾರು ಮೊದಲು ನೆಲವನ್ನು ಗುಡಿಸಿ, ಕಸವನ್ನು ತೆಗೆದು ಮನೆಮಾಡಿ ಅದರ ಮೇಲೆ ಮೇಟಿಕಂಬವನು ನೆಟ್ಟು ನೆಲೆ ನಿಲ್ಲುತ್ತಾನೆಯೋ ಅವನನ್ನು 'ಕುಂಜುಕಾರ' 'ಊರಿನ ಯಜಮಾನ' ಎಂದು ಕರೆಯವರು. ಸುತ್ತಮುತ್ತ ಬಂದು ನೆಲೆಸುವ ಎರವರೆಲ್ಲರೂ ಇವನ ನಿಯಂತ್ರಣದಲ್ಲಿರುತ್ತಾರೆ. ಎಲ್ಲರೂ ಇವನ ಸೂಚನೆಗಳನ್ನು ಸಲಹೆಗಳನ್ನು ಪಾಲಿಸಬೇಕಾದುದ್ದು ಕಡ್ಡಾಯ. ಕುಂಜುಕಾರ ನೆರೆಹೊರೆಯ ತನ್ನ ಜನರ ದುಃಖ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುತ್ತಾನೆ. ಆದ್ದರಿಂದ ಅವನು ಮತ್ತು ಅವನ ಮಡದಿ ಊರಿನ ಜನರ ಗೌರವಕ್ಕೆ ಪಾತ್ರರಾಗುತ್ತಾರೆ. ಎರವರು ತಮ್ಮ ಕುಲಪುರೋಹಿತನನ್ನು 'ಕನ್ನಲಾಡಿ' ಎಂಬ ಹೆಸರಿನಿಂದ ಕರೆಯುವರು. ಇವನೇ ಪುರೋಹಿತ, ವೈದ್ಯ, ನ್ಯಾಯಪರಿಪಾಲಕ ಹಾಗೂ ನರ್ತನಗಾರ, ಮದುವೆ, ಋತುಮತಿ, ಪಿತೃ ಪೂಜೆ, ಶವಸಂಸ್ಕಾರ ಹಾಗೂ ಉತ್ತರ ಕ್ರಿಯೆ ಮುಂತಾದ ಸಂದರ್ಭಗಳು

ಇವನ ಮುಂದಾಳತ್ವದಲ್ಲಿ ನಡೆಯುತ್ತವೆ. ವಿವಿಧ ಪೂಜೆಗೆ ಸಂಬಂಧಿಸಿದ ಮಂತ್ರಗಳು ಮತ್ತು ಹಾಡುಗಳು ಇವನಿಗೆ ಕಂತಪಾತ, ಮಾಯಮಂತ್ರ, ಭೂತಪ್ರೇತಗಳ ತೊಂದರೆಗೆ ನಿವಾರಣೆಯ ಮಂತ್ರಗಳನ್ನು ಬಲ್ಲವನಾಗಿರುತ್ತಾನೆ. ಈ ವಿದ್ಯೆ ಸೋದರಮಾವ ಅಥವಾ ತಂದೆಯಿಂದ ತಲೆಮಾರಿನಿಂದ ತಲೆಮಾರಿಗೆ ವಂಶಪಾರಂಪರ್ಯವಾಗಿ ಮೌಖಿಕವಾಗಿ ನಡೆದುಕೊಂಡು ಬರುತ್ತದೆ.

'ಕರ್ಮಿ' ಎರವ ಸಮಾಜದ ಮತ್ತೊಬ್ಬ ಮುಂದಾಳು. ತನ್ನ ಸಮಾಜದ ಸೇವಕನಂತೆ ಕಾರ್ಯನಿರ್ವಹಿಸುತ್ತಾನೆ. ಕರ್ಮಿಯಾಗುವಂತ ವ್ಯಕ್ತಿ ನಾಲಪಾಡಿ ಚಿಮ್ಮದವನೆ ಆಗಿರಬೇಕೆಂಬ ನಿಯಮವಿದೆ. ತನ್ನ ಸಮಾಜದಲ್ಲಿ ಸಂಭವಿಸುವ ಹುಟ್ಟು, ಸಾವು ಮುಂತಾದ ಸೂತಕ ಸಂಬಂಧ ಸುದ್ದಿಯನ್ನು ತಂದು ಬಳಗದವರಿಗೆ ತಿಳಿಸುವುದು ಇವನ ಪಾಲಿನ ಕೆಲಸ.

ಪಂಜರಿ ಎರವರು ಅನುಸರಿಸುವ ಪೂಜೆ ಪುನಸ್ಕಾರಗಳು, ಹಬ್ಬ ಆಚರಣೆಗಳು ಎಲ್ಲಾ ಆದಿವಾಸಿ ಸಮಾಜಗಳಲ್ಲಿ ಕಂಡುಬರುವಂತೆಯೇ ಇವರಲ್ಲಿಯು ಸಹ ದೇವರು ಮತ್ತು ಧಾರ್ಮಿಕ ಆಚರಣೆಗಳು ಕಂಡುಬರುತ್ತವೆ. ಸಾವಿಗೆ ಸಂಬಂಧಪಟ್ಟ ಕ್ರಿಯೆಗಳಲ್ಲಿ ಬಹಳ ಕಟ್ಟುನಿಟ್ಟಾಗಿ ನಡೆದುಕೊಳ್ಳುತ್ತಾರೆ. ಇವರ ಉತ್ತರಕ್ರಿಯಾದಿ ಸಂಬಂಧದ ಸಮಾರಂಭಗಳಲ್ಲಿ ಹಾಡುವ ಹಾಡುಗಳಲ್ಲಿ ಸಂಭಾಷಿಸುವ ಮಾತುಗಳಲ್ಲಿ ಮೇಲಿಂದ ಮೇಲೆ ತಮ್ಮ ಮೂಲವಂಶದ ದಂಪತಿಗಳನ್ನು ಕಾಲವಶರಾದ ಪೂರ್ವಜರನ್ನು ಸ್ಮರಿಸಿಕೊಳ್ಳುತ್ತಾ ಇತಿಹಾಸದ ಬಗ್ಗೆ ಹೊಗಳಿ ಕೊಂಡಾಡಿಕೊಳ್ಳುತ್ತಾರೆ. ೧೧ನೇ ದಿನ ಪದಿಮುಂಜೆ ಎಂಬ ಆಚರಣೆ ನಂತರ ಕೂಟ ಎಂದು ಕರೆಯಲ್ಪಡುವ ಸಾಮೂಹಿಕ ಉತ್ತರಕ್ರಿಯೆ ನಡೆಯುತ್ತದೆ.

ಎರವರು ಬಹುಭಾಷೆಯನ್ನು ಬಲ್ಲವರಾಗಿದ್ದರೂ ಕೂಡ ತಮ್ಮ ಬುಡಕಟ್ಟಿನವರೊಂದಿಗೆ ಮಾತ್ರ ಎರವ ಭಾಷೆಯನ್ನೇ ಬಳಸುತ್ತಾರೆ. ಕೊಡವರೊಂದಿಗೆ ಮಾತನಾಡುವಾಗ ಕೊಡವ ಭಾಷೆಯನ್ನು ಬಳಸುತ್ತಾರೆ. ಎರವ ಮೂಲ ಪದಗಳಿಗೆ ಕೊಡವ ಪ್ರತ್ಯಯಗಳನ್ನು ಸೇರಿಸಿ ಮಾತನಾಡುವುದು ಸಾಮಾನ್ಯ. ಎರವರ ಜಾನಪದ ಸಾಹಿತ್ಯವು ಗಾದೆ, ಒಗಟು, ಕಥೆಗಳನ್ನು ಒಳಗೊಂಡಿದೆ. ಇವರ ಜಾನಪದ ಸಾಹಿತ್ಯ ಅವರು ಸ್ವತಂತ್ರವಾಗಿ ಬಾಳಿ ಬದುಕಿದ್ದನ್ನು, ನೀತಿ ನಿಯಮಗಳನ್ನು, ಸಮಾಜಿಕ ವ್ಯವಸ್ಥೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಈ ಜಾನಪದ ಹಾಡುಗಳು ಇವರ ಸಂಸ್ಕಾರಗಳಿಗೆ ಸಂಬಂಧಿಸಿದ ಆಚರಣೆಗಳ ಅವಿಭಾಜ್ಯ ಅಂಗಗಳಾಗಿವೆ. ಸ್ತುತಿಸುವ ಪದಬಂಧ ಒಂದೇ ಆಗಿದ್ದರೂ ಆಯಾಯ ಸಂಸ್ಕಾರಗಳಿಗೆ ಸಂಬಂಧಿಸಿದ ಸನ್ನಿವೇಶಕ್ಕೆ ತಕ್ಕಂತೆ ಹಾಡುಗಳನ್ನು ಬೇರೆ ಬೇರೆ ಧಾಟಿಗಳಲ್ಲಿ ದುಡಿವಾದ್ಯದೊಂದಿಗೆ ಹಾಡುವರು. ಇವರ ಹಾಡುಗಳಲ್ಲಿ ಮುಖ್ಯವಾದವುಗಳೆಂದರೆ 'ಓಲ್‌ಪಾಟ್', 'ಸೋಬಾನೆಪಾಟ್' ಮತ್ತು 'ಪೆಯಿಪಾಟು'. ಮದುವೆಯ ಸಮಯದಲ್ಲಿ ಓಲ್‌ಪಾಟನ್ನು ಹಾಡುವರು. ಹೆಣ್ಣು ಮೈನೆರೆದಾಗ ಅವಳಿಗೆ 'ಸೋಬಾನೆಪಾಟ್' ಸಂಬಂಧಿಸಿದ ಆಚರಣೆಗಳನ್ನು ಮಾಡುವಾಗ ಹಾಡುವರು.

ಫಣಿಯ

ಕೊಡಗು ಜಿಲ್ಲೆಯ ವೀರಾಜಪೇಟೆ ತಾಲೂಕು ಸುತ್ತಮುತ್ತಲಿನ ಪ್ರದೇಶಗಳಾದ ಕುಟ್ಟ, ಗೋಣಿಕೊಪ್ಪ, ಬೆಟ್ಟಂಗಾಲ, ಹಾರೂರು, ತಿತಿಮತಿ, ಮಾಯಮುಡಿ ಅರವತ್ತೊಕ್ಲು, ಶ್ರೀಮಂಗಲ,

ಶೆಟ್ಟಿಕೆರೆ, ಮರೆನಾಡು, ಕೊಗಲಾಡಿಪನ್ನೇಯ ಚಂದನಕೆರೆ ಮೊದಲಾದ ಭಾಗಗಳಲ್ಲಿ ಫಣಿಯರು ವಾಸವಾಗಿದ್ದಾರೆ. ಇವರು ಮೂಲತಃ ಕೇರಳದಿಂದ ಬಂದವರು. ಇಪ್ಪಿಮಲೈನ ಅಂಜಲಕಾವು ಎಂಬ ಪ್ರದೇಶದವರು. ಮೂಲವ್ಯಕ್ತಿಗಳು ಅಂಜಲತಪ್ಪೆ ಮತ್ತು ಅಂಜಲತಮ್ಮೆ. ಪಣೆ ಎಂದರೇ ಬೆಟ್ಟದ ತಪ್ಪಲು ಎಂದರ್ಥ. ಅಂದರೇ ಬೆಟ್ಟದ ತಪ್ಪಲು ಪ್ರದೇಶದಲ್ಲಿ ವಾಸಮಾಡುವವರು ಎಂಬರ್ಥ ಕೊಡುತ್ತದೆ.

ಫಣಿಯರು ಕೃಷಿ ಕೂಲಿಕಾರ್ಮಿಕರಾಗಿ ಬದುಕುತ್ತಿದ್ದಾರೆ. ದೊಡ್ಡ ದೊಡ್ಡ ಶ್ರೀಮಂತ ಎಸ್ಟೇಟ್ ಮಾಲೀಕರಾದ ಕೊಡವರು ಅವರನ್ನು ದಿನಗೂಲಿ ಕೆಲಸಗಾರರನ್ನಾಗಿ ನೇಮಿಸಿಕೊಂಡಿದ್ದಾರೆ. ಕೂಲಿ ಸಿಗದಿದ್ದಾಗ ಗೆಡ್ಡೆಗೆಣಸು ಅಗೆದು ಮೀನು, ನಳ್ಳಿಹಿಡಿದು ತಂದು ಉದರಪೋಷಣೆ ಮಾಡಿಕೊಳ್ಳುತ್ತಿದ್ದಾರೆ. ಫಣಿಯರಲ್ಲಿ ಮೂರು ವರ್ಗಗಳಿವೆ. ಪಣಿಯ, ಪಂಜರಿಫಣಿಯ ಮತ್ತು ಕಾಕಫಣಿಯ. ಈ ಪೈಕಿ ಪಂಜರಿ ಫಣಿಯರು ಶ್ರೇಷ್ಠರು ಎನ್ನುತ್ತಾರೆ. ಅನಂತರದ ಸ್ಥಾನ ಫಣಿಯ ಮತ್ತು ಕಾಕಪಣಿಯರಿಗೆ. ಮೊದಲಿಗೆ ಪಂಜರಿ ಫಣಿಯರಿಗೂ ಮತ್ತು ಫಣಿಯರ ನಡುವೆ ವಿವಾಹ ಸಂಬಂಧವಿರಲಿಲ್ಲ. ಈಗ ಗಂಡು ಹೆಣ್ಣುಗಳ ಅಸಮಾನತೆಯಿಂದಾಗಿ ಹೆಣ್ಣುಕೊಟ್ಟು ತರುವುದು ಸಾಧ್ಯವಾಗುತ್ತಿದೆ.

"ಇವರ ಭಾಷೆಯಲ್ಲಿ ವ್ಯತ್ಯಾಸವುಂಟು. ಫಣಿಯರ ಭಾಷೆ ಕೊಡುವ ಭಾಷೆಯನ್ನು ಹೆಚ್ಚು ಹೋಲುತ್ತದೆ. ಪಂಜರಿ ಪಣಿಯರದ್ದು ಕನ್ನಡವನ್ನು ಹೆಚ್ಚು ಹೋಲುತ್ತದೆ. ಕಾಕಪಣಿಯರ ಭಾಷೆಯಲ್ಲಿ ಮಲಯಾಳಂ ಭಾಷೆಯ ಪ್ರಭಾವ ಅಧಿಕವಾಗಿದೆ."[10]

ಫಣಿಯರ ಹೆಸರುಗಳು ಸಾಮಾನ್ಯವಾಗಿ ಪ್ರಕೃತಿಯೊಂದಿಗೆ ಸಂಬಂಧ ಹೊಂದಿದೆ. ಮರಗಿಡ ಬಳ್ಳಿ ಬೇರು ಸೊಪ್ಪುಸೆದೆಗಳನ್ನು ಪ್ರಾಣಿಪಕ್ಷಿಗಳನ್ನು ಪ್ರತಿನಿಧಿಸುವ ಹೆಸರುಗಳಾಗಿದ್ದವು. ಬೇರೆ, ನೊಂಜಾ, ಎಲಿಕೆ, ಮೀನೆ, ನಂಡೆ,ಹಂಡೆ, ಬತ್ತಿ ಇವೆಲ್ಲ ಗಂಡಸರ ಹೆಸರುಗಳಾದರೆ ಸಾಚೆ, ಬೋಳಿ, ಚುಂಡೆ, ಕರ್ಪಿ, ಬೇರೆ ಇವು ಹೆಂಗಸರ ಹೆಸರುಗಳು, ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ಹೆಸರುಗಳನ್ನು ಇಟ್ಟುಕೊಳ್ಳುತ್ತಿದ್ದಾರೆ.

ಶತಮಾನಗಳಿಂದ ಹುಟ್ಟಿ ಬೆಳೆದು ಕಾಡನ್ನೇ ಅವಲಂಬಿಸಿಕೊಂಡಿರುವ ಬುಡಕಟ್ಟುಗಳಾದ ಪಂಜರಿ ಎರವ, ಪಣಿಯ, ಕಾಡುಕುರುಬ, ಜೇನುಕುರುಬರು ಇತ್ತೀಚಿನ ದಿನಗಳಲ್ಲಿ ಸರ್ಕಾರದ ಕಟ್ಟುಪಾಡುಗಳಿಗೆ ಮಣಿದು ಕಾಡನ್ನು ತೊರೆದು ಊರುಗಳಲ್ಲಿ ವಾಸಿಸತೊಡಗಿದ್ದಾರೆ. ಶತಮಾನಗಳಿಂದ ಕಾಡಿನಲ್ಲಿಯೇ ವಾಸಿಸುತ್ತಿದ್ದ ಆದಿವಾಸಿಗಳನ್ನು ಅರಣ್ಯ ಸಂರಕ್ಷಣಾಕಾಯ್ದೆ, ವನ್ಯಜೀವಿ ರಕ್ಷಣಾಕಾಯ್ದೆ, ಭೂಸ್ವಾದೀನ ಕಾಯ್ದೆಗಳ ಹೆಸರಿನಲ್ಲಿ ಹೊರಕ್ಕೆ ಹಾಕಲಾಗಿದೆ. ಕಾಡನ್ನು ರಕ್ಷಿಸಿಕೊಂಡು ಬಂದಿದ್ದ ಆದಿವಾಸಿಗಳನ್ನು ಕಾಡಿನಿಂದ ಹೊರಕ್ಕೆ ಕಳುಹಿಸಿ ಪುನರ್ವಸತಿ ಕಲ್ಪಿಸಿದರು. ಅವರ ಜೀವಾಳವಾಗಿದ್ದ ಕಾಡಿನ ವ್ಯಾಮೋಹ ಅವರಿಗೆ ಆರಾಮ ಬದುಕು ನೀಡಲಿಲ್ಲ. ಇದರಿಂದಾಗಿ ನಲುಗಿದ ಕುಟುಂಬಗಳು ಸಹಸ್ರಾರು. ಹಲವಾರು ಸಂಘ ಸಂಸ್ಥೆಗಳ ಸಹಾಯದಿಂದ ತಮ್ಮ ಅರಣ್ಯದ ಸಾಂಪ್ರದಾಯಕ ಹಕ್ಕುಗಳಿಗೆ ಅವರು ಹೋರಾಟ ನಡೆಸುತ್ತಲೆ ಬಂದಿದ್ದಾರೆ.

ಸರ್ಕಾರವು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಲವಾರು ಕಾರ್ಯಗಳನ್ನು ಹಾಕಿಕೊಂಡು ಅವರ ಜೀವನ ಸುಧಾರಣೆಗೆ ಅಪಾರವಾಗಿ ಶ್ರಮಿಸುತ್ತಿವೆ. ಅರಣ್ಯಗಳು ನಾಶವಾಗುತ್ತಿರುವುದರಿಂದ ಬುಡಕಟ್ಟು ಸಮುದಾಯಗಳು ತಮ್ಮ ಬದುಕಿನ ಕ್ರಮವನ್ನು ಬದಲಾಯಿಸಿಕೊಳ್ಳುವುದು ಅನಿವಾರ್ಯವಾಗಿದೆ. ಅವರ ಆರ್ಥಿಕ, ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗಳಲ್ಲಿ ಮಾರ್ಪಾಡುಗಳು ಕಾಣಿಸಿಕೊಂಡಿವೆ. ಹೀಗಾಗಿ ಅವರು ತಮ್ಮ ಕಸುಬುಗಳನ್ನು ಬದಲಾಯಿಸಿಕೊಳ್ಳುತ್ತಿದ್ದಾರೆ.

ಆಧುನಿಕತೆಯ ಕಡೆಗೆ ಮುಖಮಾಡಿರುವ ಬುಡಕಟ್ಟು ಸಮುದಾಯಗಳು ಬಹುಬೇಗ ಬದಲಾಗುತ್ತಿವೆ ಎಂಬುದು ನಿಜ. ಆದರೆ ಈ ಬುಡಕಟ್ಟುಗಳಲ್ಲಿ ಯಾವ ಅಂಶಗಳು ಯಾವ ವಿಚಾರಗಳು ಇವರಲ್ಲಿ ಬದಲಾವಣೆಯಾಗುವಂತೆ ಮಾಡುತ್ತಿವೆ ಎಂಬುದು ಮುಖ್ಯ. ಹೀಗೆ ಬದಲಾಗುವುದಕ್ಕೆ ಪ್ರಮುಖ ಕಾರಣವೇನು? ಮುಂತಾದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗಿದೆ.

ಬುಡಕಟ್ಟು ಜನರಿಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳು ಅವರಿಗೆ ಸಿಗಬೇಕಾದ ಸೌಲಭ್ಯ ಸವಲತ್ತುಗಳು ಸರಿಯಾಗಿ ಅವರಿಗೆ ತಲುಪುತ್ತಿಲ್ಲ. ಈ ಸೌಲಭ್ಯಗಳು ಮಧ್ಯವರ್ತಿಗಳ ಒಡಲನ್ನು ಸೇರುತ್ತಿವೆ. ಬುಡಕಟ್ಟುಗಳ ಕತ್ತಲೆಯ ಜೀವನವನ್ನು ಅಂತಿಮಗೊಳಿಸಿ ಒಂದು ಮಾದರಿಯ ಜೀವನವನ್ನು ನಡೆಸಬೇಕಾದರೆ ಸಮಾಜದಲ್ಲಿರುವ ಸಂಘ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು, ರಾಜಕಾರಣಿಗಳು, ಸಮಾಜ ಸುಧಾರಕರು ಪ್ರಮುಖ ಪಾತ್ರ ವಹಿಸಬೇಕಾದುದು ಬಹುಮುಖ್ಯವಾಗಿದೆ.

ಟಿಪ್ಪಣಿಗಳು

೧. ಕೆ.ಅನಂತರಾವ್, ಸುವರ್ಣ ಕರ್ನಾಟಕ ದರ್ಶನ, ವಿದ್ಯಾಪಬ್ಲಿಷಿಂಗ್ ಹೌಸ್ 'ಶ್ರೀನಿಲಯ', ಮಂಗಳೂರು (೨೦೦೬), ಪುಟ.೨೫೪

೨. ಅದೇ, ಪುಟ-೨೫೪

೩. ಅದೇ, ಪುಟ-೨೫೪

೪. Census 2001, Kodagu District Population Booklet Directorate of Census Operation Karnataka (2005), Page-1

೫. ಸೂರ್ಯನಾಥ ಯು.ಕಾಮತ್, ಕರ್ನಾಟಕ ಗೆಜೆಟಿಯರ್, ಲನೇ ಮಹಡಿ, ಕಾವೇರಿ ಭವನ, ಬೆಂಗಳೂರು. ೧೯೯೨ ಪುಟ.೪೬

೬. ಅದೇ, ಪುಟ-೪೭

೭. ಅದೇ, ಪುಟ-೧೫

೮. ಅದೇ, ಪುಟ-೧೮

೯. ಬಾಮಿನಿರಾಘುವಯ್ಯ, ಕೊಡಗಿನ ಬುಡಕಟ್ಟುಗಳು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೨೦೦೭, ಪುಟ.೨೧

೧೦. ಅದೇ, ಪುಟ-೩೩

೧೧. ಅದೇ, ಪುಟ-೩೨

ಅಧ್ಯಾಯ ೩

ಬುಡಕಟ್ಟು ಮಹಿಳೆಯರ ಆರ್ಥಿಕ ಸಂಘಟನೆ

ಆದಿಮ ಕಾಲದ ಬುಡಕಟ್ಟು ಮಹಿಳೆಯರ ಆರ್ಥಿಕ ಸಂರಚನೆ

ಪರಿವರ್ತನೆಯನ್ನು ಹೊಂದುತ್ತಿರುವ ಬುಡಕಟ್ಟು ಮಹಿಳೆಯರ ಆರ್ಥಿಕ ಚಟುವಟಿಕೆಗಳು

ಕುಟುಂಬ ಸಂಬಂಧಿ ಆರ್ಥಿಕ ಚಟುವಟಿಕೆಯಲ್ಲಿ ಬುಡಕಟ್ಟು ಮಹಿಳೆಯರು

ಅಸಂಘಟಿತ ಮತ್ತು ಸಂಘಟಿತ ವಲಯದಲ್ಲಿ ಬುಡಕಟ್ಟು ಮಹಿಳೆಯರ ಆರ್ಥಿಕ ಚಟುವಟಿಕೆಗಳು

ಅಸಂಘಟಿತ ವಲಯದಲ್ಲಿ ಬುಡಕಟ್ಟು ಮಹಿಳಾ ಕಾರ್ಮಿಕರ ಸಮಸ್ಯೆಗಳು

ಅಧ್ಯಾಯ ೩

ಬುಡಕಟ್ಟು ಮಹಿಳೆಯರ ಆರ್ಥಿಕ ಸಂಘಟನೆ

ಬುಡಕಟ್ಟು ಮಹಿಳೆ ಇತಿಹಾಸದುದ್ದಕ್ಕೂ ಅನಿವಾರ್ಯವಾಗಿ ದ್ವಿತೀಯ ದರ್ಜೆಯ ಜೀವಿಯಾಗಿ ನಲುಗುತ್ತ ದಟ್ಟಬೆಳಕಿನಲ್ಲೂ ಕಣ್ಣಿಗೆ ಬಲವಂತದ ಕತ್ತಲೆಯ ಪಟ್ಟಿಯನ್ನು ಕಟ್ಟಿಕೊಂಡೆ ಬದುಕುತ್ತಾ ಬಂದಿದ್ದಾಳೆ. ಒಂದು ಕಡೆ ದಾಸಿಯ, ಇನ್ನೊಂದು ಕಡೆ ಮಾತೆಯ, ಮತ್ತೊಂದು ಕಡೆ ಮಹಾಮಾತೆಯ ವಿಭಿನ್ನ ಸ್ಥರಗಳನ್ನು ಆಕೆಯ ಜೀವನದಲ್ಲಿ ಸೃಷ್ಟಿಸಿ ಅಜ್ಞಾನದ ನರಕದಲ್ಲಿ ಆಕೆಯನ್ನು ದೂಡಲಾಗಿದೆ. ಈ ಸಮಾಜ ಬುಡಕಟ್ಟು ಮಹಿಳೆಯರ ಬಗ್ಗೆ ತೋರುವ ಕರುಣೆ ಪ್ರೀತಿ ಪ್ರೇಮಗಳೆಲ್ಲಾ ಸಮಾಜದ ಸ್ವಾರ್ಥದ ಸಂಚಿನ ರೇಷ್ಮೆರೂಪಗಳಾಗಿ ಕಾಣಿಸಿಕೊಳ್ಳುತ್ತಾ ಬಂದಿದ್ದಾಳೆ. ವಿಶ್ವದಲ್ಲಿ ಇತಿಹಾಸದುದ್ದಕ್ಕೂ ಬುಡಕಟ್ಟು ಮಹಿಳೆ ಸಾಮಾನ್ಯ ಮಹಿಳೆಯಂತೆ ಬೆಳಕು ಮುಖವಾಗದೆ ಅಂಧಮುಖಿವಾಗಿಯೇ ಉಳಿದು ಬಂದು ಗುಪ್ತಗಾಮಿನಿಯಾಗಿದ್ದಾಳೆ. ಆಕೆಯ ಅಪರಿಮಿತ ಅಂತಸತ್ವ, ಬುದ್ಧಿಶೀಲತೆ, ಸೂಕ್ಷ್ಮ ಅನುಭವ ಭಾವಶೀಲತೆ ಮತ್ತು ಕ್ರಿಯಾಶೀಲತೆಗಳು ಬೇಸಿಗೆಯ ತೊರೆಯಾಗಿಬಿಟ್ಟಿವೆ. ಹೀಗೆ ಹತ್ತು ಹಲವು ಕಾರಣದಿಂದಾಗಿ ಶತಶತಮಾನಗಳಿಂದಲು ಬುಡಕಟ್ಟು ಮಹಿಳೆ ಸಮಾಜದಲ್ಲಿ ವಿಜೃಂಭಿಸಲು ಸಾಧ್ಯವಾಗಿಲ್ಲ.

ಬುಡಕಟ್ಟು ಮಹಿಳೆ ಸಾವಿರಾರು ವರ್ಷಗಳ ಈ ಸದೃಡ ಸಂಕೋಲೆಗಳನ್ನು ನಿಧಾನವಾಗಿಯಾದರು ಕಳಚಿ ಆಧುನಿಕ ಸಮಾಜಕ್ಕೆ ಸಮಾನವಾದ ಧೀಶಕ್ತಿ, ಮನೋಸಕ್ತಿ, ಕಾರ್ಯಶಕ್ತಿ ಮತ್ತು ಸಾಧನಶಕ್ತಿಗಳನ್ನು ಕಂಡುಕೊಂಡು ಈ ಸಮಾಜಕ್ಕೆ ಹೊಂದಿಕೊಂಡಂತೆ ಜೀವನ ನಡೆಸುತ್ತಿದ್ದಾಳೆ. ಪತಿಸೇವೆಯೇ ಪರಮಾತ್ಮನ ಸೇವೆ, ಗೃಹವೇ ಗೃಹಿಣಿಯ ದೇಗುಲ ವಿದೇಯತೆಯೇ ಸೌಶೀಲ್ಯದ ಕುರುಹು, ಪ್ರಶ್ನಾತೀತವಾದ ಪತಿಭಕ್ತಿಯೇ ಮೋಕ್ಷದ ಹೆಬ್ಬಾಗಿಲು ಎಂಬ ಮಹಾಭ್ರಮೆಗಳನ್ನು ಬಿರುದು ಬಾವಲಿಗಳನ್ನು ಮತ್ತು ಸಂಪ್ರದಾಯ, ಸಂಸ್ಕೃತಿ, ಮೂಢನಂಬಿಕೆ, ಆಚಾರ ವಿಚಾರಗಳನ್ನು, ಸಮುದಾಯದ ಕಟ್ಟುಕಟ್ಟಲೆಗಳನ್ನು ಸಡಿಲಿಸಿ ಧೈರ್ಯವಾಗಿ ಮುನ್ನುಗ್ಗಿ ಆರ್ಥಿಕ ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡು ತಮ್ಮ ಬದುಕನ್ನು ಮುನ್ನಡೆಸುತ್ತಿದ್ದಾಳೆ ಎಂದರೇ ಹೆಮ್ಮೆಯ ಸಂಗತಿಯಾಗಿದೆ.

ಪ್ರಾಚೀನ ಕಾಲದಿಂದಲೂ ಬುಡಕಟ್ಟು ಮಹಿಳೆಯರು ಒಂದಿಲ್ಲೊಂದು ಸಮಾಜದ ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಾ ಬಂದಿದ್ದಾಳೆ. ಪ್ರಾಚೀನ ಕಾಲದಿಂದಲೂ ಬುಡಕಟ್ಟು ಮಹಿಳೆಯರು ಕೃಷಿಯ ಜೊತೆಗೆ ಬೇಟೆ, ಪಶುಪಾಲನೆ, ಆಹಾರ ಸಂಗ್ರಹಣೆ, ಮನೆಕೆಲಸವನ್ನು ನಿಬಾಯಿಸಿಕೊಂಡು

ಬರುತ್ತಿದ್ದಾರೆ. ಇದರಿಂದಾಗಿ ಸಮಾಜದಲ್ಲಿ ಬುಡಕಟ್ಟು ಮಹಿಳೆಯ ಮಾನವೀಯ ಸಂಬಂಧಗಳು ಹತ್ತಿರವಾದವು. ಇಂದಿನ ಚಾರಿತ್ರಿಕ ಯುಗದಲ್ಲಿ ಬುಡಕಟ್ಟು ಮಹಿಳೆ ಕುಟುಂಬದ ನಿರ್ವಹಣೆಯ ಜೊತೆಗೆ ಜೀವನ ಸಾಗಿಸುವ ಉತ್ಪಾದನ ಚಟುವಟಿಕೆಯನ್ನು ನಿರ್ವಹಿಸಿಕೊಂಡು ಎಲ್ಲಾ ಕ್ಷೇತ್ರದಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ. ಹೀಗೆ ಜೀವನಾವಶ್ಯಕಗಳನ್ನು ಪೂರೈಸುವುದರ ಜೊತೆಗೆ ಸಾಂಪ್ರದಾಯಿಕ ಆರ್ಥಿಕ ಬೆಳವಣಿಗೆಯನ್ನು ಬಲಪಡಿಸಿದಳು. ಇದರಿಂದಾಗಿ ಬುಡಕಟ್ಟು ಮಹಿಳೆಯ ಸಾಮಾಜಿಕ ಸ್ಥಾನಮಾನಗಳು ಹೆಚ್ಚಾದವು.

ಭಾರತದಲ್ಲಿ ಸಾಂಪ್ರದಾಯಿಕ ಗ್ರಾಮೀಣ ಸಮುದಾಯಗಳು ಕೃಷಿ ಜೀವನದ ಜೊತೆಗೆ ಕರಕುಶಲಕೆಲಸಕ್ಕೂ ತಮ್ಮ ಸೇವೆಯನ್ನು ಮೀಸಲಾಗಿಟ್ಟಿವೆ. "ಬುಡಕಟ್ಟು ಮಹಿಳೆ ಇಂತಹ ಪ್ರತಿವರ್ಗ ಹಾಗೂ ಪ್ರತಿಹಂತದಲ್ಲಿಯು ಕುಟುಂಬದ ಜೀವನಾವಶ್ಯಕ ದುಡಿಮೆಯ ಜೊತೆಗೆ ಉತ್ಪಾದನ ಹಾಗೂ ಕರಕುಶಲ ಕ್ಷೇತ್ರದಲ್ಲಿ ಸಮಾನವಾಗಿ ದುಡಿಯುತ್ತಿದ್ದಾಳೆ. ಇದಕ್ಕೆ ಪೂರಕವಾಗಿ ಸ್ಥಳೀಯ ಪ್ರದೇಶಗಳಲ್ಲಿರುವ ಮಾರುಕಟ್ಟೆಗಳು ಇದಕ್ಕೆ ಸಹಾಯಕವಾಗಿ ನಿಂತಿವೆ. ಹೀಗೆ ಕೇವಲ ಸಾಂಪ್ರದಾಯಿಕ ಗ್ರಾಹಕರನ್ನು ಒಳಗೊಂಡ ಆರ್ಥಿಕ ಕ್ಷೇತ್ರಗಳಲ್ಲಿ ಹೆಚ್ಚು ಸ್ಥಾನಗಳಿಸಿಕೊಂಡು ಅದರಲ್ಲಿ ಮುಖ್ಯವಾಗಿ ಕೃಷಿ ಮನೆಗೆಲಸ ತೋಟಗಳಲ್ಲಿ ಕೂಲಿಕಾರ್ಮಿಕರಾಗಿ ಕರಕುಶವವಸ್ತುಗಳ ತಯಾರಿಕೆ ಪಶುಸಂಗೋಪನೆಗಳ ಜೊತೆಗೆ ಖಾದಿಉದ್ಯಮ ನೂಲುತೆಗೆಯುವುದು ಇನ್ನು ಸಣ್ಣಪುಟ್ಟ ಕೆಲಸಗಳನ್ನು ಆಯ್ಕೆ ಮಾಡಿಕೊಂಡ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಪರಿಣಾಮ ಅನೇಕ ಬದಲಾವಣೆಗಳನ್ನು ತಮ್ಮಲ್ಲಿ ಕಂಡುಕೊಂಡರು".[7] ಭಾರತೀಯ ಸಮಾಜದಲ್ಲಿ ಬುಡಕಟ್ಟು ಮಹಿಳೆಯರು ಆರ್ಥಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಪುರುಷನಷ್ಟೇ ಮಹಿಳೆಯರು ಎತ್ತಿಹಿಡಿದಿದ್ದಾರೆ. ಅಲ್ಲದೆ ಉತ್ಪಾಧನಾ ಘಟಕದಲ್ಲಿ ತಮ್ಮ ಸ್ವಾಯತ್ತತೆಯನ್ನು ಸ್ಥಾಪಿಸಿ, ಸಾಮಾಜಿಕ ಹಾಗು ಆರ್ಥಿಕ ಕ್ಷೇತ್ರಗಳಲ್ಲಿ ಪುರುಷರಷ್ಟೇ ಪ್ರಧಾನಪಾತ್ರ ನಿರ್ವಹಿಸತೊಡಗಿದ್ದಾರೆ.

ಆದಿಮ ಕಾಲದಲ್ಲಿ ಬುಡಕಟ್ಟು ಮಹಿಳೆಯರ ಆರ್ಥಿಕ ಸಂರಚನೆ

ಆದಿಮ ಕಾಲದಲ್ಲಿನ ಬುಡಕಟ್ಟು ಮಹಿಳೆಯರು ತಮಗರಿವಿಲ್ಲದಂತೆಯೇ ಹಲವಾರು ರೀತಿಯ ಆರ್ಥಿಕ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಈ ಬಗೆಯ ಚಟುವಟಿಕೆಗಳು ತಮ್ಮ ಕುಟುಂಬಕ್ಕೆ ಸಂಬಂಧಿಸಿದ ಚಟುವಟಿಕೆಯಾಗಿರುತ್ತವೆ. ಹಾಗಾಗಿ ಇವುಗಳೇ ಮಹಿಳೆಯರನ್ನು ಒಂದಿಲ್ಲೊಂದು ಆರ್ಥಿಕ ಚಟುವಟಿಕೆಯಲ್ಲಿ ತೊಡಗುವಂತೆ ಮಾಡಿವೆ.

ಆದಿಮಕಾಲದ ಮಹಿಳೆಯರು ಹಲವಾರು ಚಟುವಟಿಕೆಗಳಲ್ಲಿ ಗಂಡಸಿನೊಂದಿಗೆ ಭಾಗವಹಿಸಿ ತಮಗೆ ಅರಿವಿಲ್ಲದಂತೆಯೇ ಬೇಟೆ, ಪಶುಪಾಲನೆ, ಆಹಾರ ಸಂಗ್ರಹಣೆ ಕುಮರಿ ಬೇಸಾದಯದ ಹಂತದಿಂದಲು ಆರ್ಥಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಾ ಬಂದಿರುವುದನ್ನು ನಾವು ಕಾಣಬಹುದು.

೧. ಆಹಾರ ಸಂಗ್ರಹಣೆ

"ಅನಾದಿ ಕಾಲದಿಂದಲೂ ಮಾನವ ಆಹಾರಕ್ಕಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅಲೆದಾಡುತ್ತಾ, ಸಿಕ್ಕಿದಂತಹ ಗೆಡ್ಡೆ ಗೆಣಸುಗಳನ್ನು ತಿಂದು ತನ್ನ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದನು. ಪ್ರಾರಂಭದಲ್ಲಿ ತನ್ನ ಕೈ ಬೆರಳುಗಳ ಸಹಾಯದಿಂದ ಗೆಡ್ಡೆ ಗೆಣಸುಗಳನ್ನು ಅಗೆದು ಅನಂತರ ಚೂಪಾದ ಕಲ್ಲುಗಳ ಸಹಾಯದಿಂದ ದೊಣ್ಣೆಗಳಿಂದ[೨] ಅಗೆದು ತಂದು ಜೀವನ ಮಾಡುತ್ತಿದ್ದನು. ಅಗೆದು ತಂದ ಗೆಡ್ಡೆಗೆಣಸುಗಳನ್ನು ಮಹಿಳೆಯು ಆಹಾರವಾಗಿ ಕುಟುಂಬದವರಿಗೆ ನೀಡಿ ಸಹಕರಿಸುತ್ತಿದ್ದಳು. ತಮಗೆ ಕೊರತೆಯಲ್ಲಿರುವ ವಸ್ತುಗಳನ್ನು ಬೇರೆಯವರಿಂದ ಪಡೆದು ಪ್ರತಿಯಾಗಿ ತಮ್ಮಲ್ಲಿರುವ ವಸ್ತುವನ್ನು ಬೇರೆಯವರಿಗೆ ನೀಡುತ್ತಿದ್ದರು. ಅಂದರೆ ವಸ್ತುವಿನಿಮಯ ಪದ್ಧತಿಯು ರೂಢಿಯಲ್ಲಿತ್ತು. ಮುಂದೆ ಇದೇ ಸಾಟಿವಿನಿಮಯ ಪದ್ಧತಿಯಾಗಿ ಇಂದು ಆರ್ಥಿಕ ಚಟುವಟಿಕೆಯಾಗಿ ರೂಪಾಂತರವಾಗಿದೆ. ಹೀಗೆ ಅನಾದಿ ಕಾಲದಿಂದಲೂ ಮಹಿಳೆಯು ಆರ್ಥಿಕ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಳು ಎನ್ನುವುದಕ್ಕೆ ಇದು ನಿದರ್ಶನವಾಗಿದೆ.

೨. ಬೇಟೆ

"ಅನಾದಿ ಕಾಲದಲ್ಲಿ ಆದಿಮಾನವರು ಮತ್ತು ಮಹಿಳೆಯರು ತಮ್ಮ ಆಹಾರಕ್ಕಾಗಿ ಅಶಕ್ತ ಹಾಗೂ ಅನಾರೋಗ್ಯದಿಂದ ಬಳಲುತ್ತಿದ್ದ ಪ್ರಾಣಿಗಳು ಮತ್ತು ಪಕ್ಷಿಗಳನ್ನು ಬೇಟೆಯಾಡಿ ಆಹಾರವಾಗಿ ಸೇವಿಸುತ್ತಿದ್ದರು."[೩] ಈ ಬೇಟೆಗೆ ಮೂಲ ಪ್ರೇರಣೆ ಮಹಿಳೆ ಎಂದರೇ ತಪ್ಪಾಗಲಾರದು. ಹೇಗೆಂದರೇ ಪುರುಷರು ಬೇಟೆಗೆ ಹೋಗುವಾಗ ಅವನಿಗೆ ಬೆಂಬಲಿಗಳಾಗಿ ಇರುತ್ತಿದ್ದಳು. ಪುರುಷನ ಬೇಟೆಗೆ ಅವಶ್ಯಕವಾದ ಸಲಕರಣೆಗಳನ್ನು ಒದಗಿಸಿಕೊಡುತ್ತಿದ್ದಳು. ಅನಂತರ ಬೇಟೆಯಾಡಿ ತಂದ ಪ್ರಾಣಿ, ಪಕ್ಷಿಗಳನ್ನು ಪೂಜೆ, ಪುರಸ್ಕಾರಗಳನ್ನು ಮಾಡಿ ಅವುಗಳನ್ನು ಸೇವಿಸುತ್ತಿದ್ದರು. ಹೆಚ್ಚಾದ ಆಹಾರವನ್ನು ತಮ್ಮ ಗುಂಪಿನ ಅಕ್ಕಪಕ್ಕದ ಜನರಿಗೆ ನೀಡುತ್ತಿದ್ದರು. ಹೀಗೆ ಬೆಳೆಯುತ್ತಾ ಬಂದ ಸಂಬಂಧ ಇಂದಿನ ದಿನಗಳಲ್ಲಿ ಪರಸ್ಪರ ಸಹಕಾರವಾಗಿ ರೂಪಾಂತರವಾಗಿದೆ.

ಪಶುಪಾಲನೆ

ಪುರಾತನ ಕಾಲದಲ್ಲಿ ಬುಡಕಟ್ಟು ಸಮುದಾಯದ ಮತ್ತು ಮಹಿಳೆಯರು ತಾವು ವಾಸಮಾಡುವಂತ ಪ್ರದೇಶದ ಸುತ್ತಮುತ್ತಲಿನ ಪರಿಸರದಲ್ಲಿ ಪ್ರಾಣಿಗಳ ನಡುವಿನ ಒಡನಾಟದಿಂದ ಅವರು ಕಾಡುಪ್ರಾಣಿಗಳ ಹತ್ತಿರವಾಗುತ್ತಾರೆ. ನಂತರ ಅವುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಅವುಗಳ ಸಹಾಯದಿಂದ ಹಲವಾರು ಪ್ರಯೋಜನಗಳನ್ನು ಪಡೆದುಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಪ್ರಸ್ತುತದಲ್ಲಿ ಮಹಿಳೆಯು ಸಾಕುಪ್ರಾಣಿಗಳಾದ ಹಸು, ಎಮ್ಮೆಗಳಿಂದ ಹಾಲನ್ನು ಹಿಂಡಿ ಮಾರಾಟ ಮಾಡಿ ಅದರಿಂದ ತಮ್ಮ ಆರ್ಥಿಕ ಚಟುವಟಿಕೆಯಲ್ಲಿ ನಿರತಳಾಗಿದ್ದಾಳೆ. ಹಾಗೆಯೇ ಇನ್ನು ಮುಂತಾದ ಪ್ರಾಣಿಗಳಿಂದ ಹಲವಾರು ರೀತಿಯಾದ ಸವಲತ್ತುಗಳನ್ನು ಪಡೆಯುತ್ತಿರುವುದನ್ನು ನೋಡಬಹುದಾಗಿದೆ.

ಕೃಷಿ

ಆದಿಮ ಕಾಲದ ಬುಡಕಟ್ಟು ಸಮುದಾಯದ ಮಹಿಳೆಯರು ಹಲವಾರು ಹಂತಗಳಲ್ಲಿ ತಮ್ಮದೆಯಾದ ಆರ್ಥಿಕ ಚಟುವಟಿಕೆಯನ್ನು ಕೈಗೊಂಡನಂತರ ಈ ಮಹಿಳೆಯು ಕೃಷಿಯ ಹಂತದಲ್ಲಿಯು ಕೂಡ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾಳೆ. ಹೇಗೆಂದರೆ ಪುರಾತನ ಕಾಲದಲ್ಲಿದ್ದಂತಹ ಕುಮರಿ ಬೇಸಾಯವನ್ನು ಪುರುಷರು ಮಾಡುವಾಗ ಅವರಿಗೆ ಮಹಿಳೆಯು ಸಹಕಾರಿಯಾಗಿ ನಿಲ್ಲುತ್ತಿದ್ದಳು. ಹೆಚ್ಚು ಫಲವತ್ತಾದ ಭೂಮಿಯನ್ನು ಆಯ್ಕೆಮಾಡಿಕೊಂಡು ಆ ಭೂಮಿಯನ್ನು ಹಸನುಮಾಡಿ ತಾವು ತಯಾರಿಸಿಕೊಂಡಂತಂಹ ಆಯುಧಗಳಾದ ಗುದ್ದಲಿಗಳ ಸಹಾಯದಿಂದ ಬೇಸಾಯ ಮಾಡುತ್ತಿದ್ದರು. ಅಂತಹ ಸಮಯದಲ್ಲಿ ಭೂಮಿಗೆ ಮೊದಲು ಪೂಜೆ ಪುರಸ್ಕಾರಮಾಡಿ ಬೀಜಗಳನ್ನು ಬಿತ್ತುತ್ತಿದ್ದಳು. ಆ ಪ್ರದೇಶದಲ್ಲಿ ಕಳೆಗಳನ್ನು ತೆಗೆಯುವುದು, ಆ ಬೆಳೆಗಳನ್ನು ಸಂರಕ್ಷಿಸುವ ಸಂಪೂರ್ಣವಾದ ಜವಾಬ್ದಾರಿ ಬುಡಕಟ್ಟು ಮಹಿಳೆಯು ನಿರ್ವಹಿಸುತ್ತಿದ್ದಳು. ಹಾಗೂ ಬೆಳೆದ ಬೆಳೆಗಳನ್ನು ಸಂಗ್ರಹಣೆ ಮಾಡುವುದು ಇನ್ನು ಹತ್ತು ಹಲವಾರು ಕೆಲಸ ಕಾರ್ಯಗಳಲ್ಲಿ ಗಂಡನಿಗೆ ಮಹಿಳೆಯು ಸಹಕಾರಿಯಾಗುತ್ತಿದ್ದಳು. ಹೀಗೆ ಮಹಿಳೆಯು ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಳು ಎಂದು ಹೇಳಬಹುದಾಗಿದೆ.

ಪರಿವರ್ತನೆ ಹೊಂದುತ್ತಿರುವ ಬುಡಕಟ್ಟು ಮಹಿಳೆಯ ಆರ್ಥಿಕ ಚಟುವಟಿಕೆಗಳು

“ಅನಾದಿ ಕಾಲದಿಂದಲೂ ಕಾಡೇ ನಮ್ಮ ಸ್ವರ್ಗ, ಕಾಡೇ ನಮ್ಮ ದೇವರು, ಕಾಡೇ ನಮ್ಮ ಸಕಲ ಸಂಪತ್ತು, ಕಾಡೇ ನಮ್ಮ ಪ್ರಪಂಚ ಎಂದು ಕಾಡನ್ನೇ ಅಪ್ಪಿಕೊಂಡು ಜೀವನಸಾಗಿಸುತ್ತಿದ್ದ ಬುಡಕಟ್ಟು ಸಮುದಾಯಗಳು ಹಲವಾರು ಶತಮಾನಗಳು ಕಳೆದನಂತರ ಎರಡು ಭಾಗಗಳಾಗಿ ವಿಂಗಡಣೆಯಾದವು. ಅವುಗಳೆಂದರೆ.

೧. ಅರಣ್ಯವಾಸಿ ಬುಡಕಟ್ಟು

೨. ಬಯಲು ಸೀಮೆಯ ಬುಡಕಟ್ಟು

೧. ಅರಣ್ಯವಾಸಿ ಬುಡಕಟ್ಟು:

ಈ ಬುಡಕಟ್ಟುಗಳು ಅನಾದಿಕಾಲದಿಂದಲು ಆಚರಣೆ ಮಾಡಿಕೊಂಡು ಬಂದಿರುವ ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ, ಕಟ್ಟುಕಟ್ಟಳೆಗಳನ್ನು ಇಂದಿಗೂ ಪಾಲಿಸಿಕೊಂಡು ಸಹ್ಯಾದ್ರಿಯ ಆಜುಬಾಜಿನಲ್ಲಿ, ದಟ್ಟ ಅರಣ್ಯಗಳಲ್ಲಿ ನದಿ ಕಣಿವೆಗಳಲ್ಲಿ ವಾಸಮಾಡಿಕೊಂಡು ಬರುತ್ತಿರುವ ಬುಡಕಟ್ಟುಗಳೇ ಅರಣ್ಯವಾಸಿ ಬುಡಕಟ್ಟುಗಳು

೨. ಬಯಲು ಸೀಮೆಯ ಬುಡಕಟ್ಟು:

ಕೆಲವು ಬುಡಕಟ್ಟು ಸಮುದಾಯಗಳು ಕೆಲವು ಕಾರಣಗಳಿಂದ ಅರಣ್ಯವನ್ನು ತೊರೆದು ಬೇರೆ ಬೇರೆ ಪ್ರದೇಶಗಳಲ್ಲಿಗೆ ವಲಸೆ ಬಂದು ಆಧುನಿಕ ಸಮಾಜದೊಂದಿಗೆ ಮುಖಾಮುಖಿಯಾಗಿ ಇಂದಿಗೂ

ತಮ್ಮ ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರಗಳನ್ನು ಉಳಿಸಿಕೊಂಡು ಬದುಕುತಿರುವ ಬುಡಕಟ್ಟುಗಳೇ ಬಯಲು ಸೀಮೆಯ ಬುಡಕಟ್ಟುಗಳು. ಈ ಎರಡು ಬುಡಕಟ್ಟು ಸಮುದಾಯಗಳು ಅನುಸರಿಸುತ್ತಿರುವ ಆರ್ಥಿಕ ಚಟುವಟಿಕೆಯಲ್ಲಿ ಹಲವಾರು ಭಿನ್ನತೆಯನ್ನು ಕಾಣಬಹುದು. ಅವುಗಳೆಂದರೆ:

೧. ಸಾಮಾಜಿಕ ಬದಲಾವಣೆ.

೨. ಆರ್ಥಿಕ ಬದಲಾವಣೆ.

ಸಾಮಾಜಿಕ ಬದಲಾವಣೆಯು ಸಾಮಾನ್ಯವಾಗಿ ಸಮಾಜ ಮತ್ತು ಕುಟುಂಬಕ್ಕೆ ಹೊಂದಿಕೊಂಡಂತೆ ಆಗುವ ಕೆಲವು ಬದಲಾವಣೆಯನ್ನು ಸಾಮಾಜಿಕ ಬದಲಾವಣೆ ಎನ್ನಲಾಗುತ್ತದೆ".[೪] ಆರ್ಥಿಕ ಬದಲಾವಣೆ ಅಂದರೆ ಅವರು ಹಣಕಾಸಿನಲ್ಲಾಗುವ ಬದಲಾವಣೆ. ಅಂದರೆ ಸೇವಿಸುವ ಆಹಾರ, ವಾಸಿಸುವ ಮನೆ, ಧರಿಸುವ ಬಟ್ಟೆ, ಒಟ್ಟಾರೆಯಾಗಿ ಅವರ ಬದುಕಿನಲ್ಲಾಗುವ ಬದಲಾವಣೆಗೆ ನೇರ ಕಾರಣ ಆರ್ಥಿಕ ಬದಲಾವಣೆಯಾಗಿರುತ್ತದೆ.

ಬುಡಕಟ್ಟು ಮಹಿಳೆಯರು ಪ್ರಸ್ತುತದ ದಿನಗಳಲ್ಲಿ ಹಲವಾರು ಸಂಘಸಂಸ್ಥೆಗಳ ಮೂಲಕ ಸಹಕಾರ ಸಂಘಗಳ ಮೂಲಕ ಮತ್ತು ಸರ್ಕಾರದ ಯೋಜನೆಗಳ ಮುಖಾಂತರ ಯಾವ ರೀತಿಯಾದ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದಾರೆ ಎಂಬುದನ್ನು ಹಲವಾರು ಅಂಶಗಳ ಸಹಾಯದಿಂದ ತಿಳಿಯಬಹುದು.

ಸ್ವ-ಸಹಾಯ ಸಂಘಗಳು

ಪ್ರಸ್ತುತದಲ್ಲಿ ಬುಡಕಟ್ಟು ಮಹಿಳೆಯರು ೧೦-೨೦ ಜನರೊಂದಿಗೆ ಪರಸ್ಪರ ಹಿತಾಶಕ್ತಿಗಳನ್ನು ಈಡೇರಿಸಿಕೊಳ್ಳುವ ಉದ್ದೇಶದಿಂದ ಸ್ವಯಂ ಪ್ರೇರಿತರಾಗಿ ಸಾಮಾನ್ಯ ಮಹಿಳೆಯರೊಂದಿಗೆ ಸೇರಿಕೊಂಡು ರಚಿಸಿಕೊಂಡಿರುವ ಸಂಘಗಳೇ ಸ್ವ-ಸಹಾಯ ಸಂಘಗಳು. ಈ ಸಂಘಗಳ ಮೂಲಕ ಬುಡಕಟ್ಟು ಮಹಿಳೆಯರು ಹಲವಾರು ರೀತಿಯ ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳುತ್ತಿದ್ದಾರೆ. ಈ ಸಂಘಗಳಲ್ಲಿರುವ ಹಣವನ್ನು ಒಂದು ನಿರ್ಧಿಷ್ಟ ಬಡ್ಡಿದರದಲ್ಲಿ ತೆಗೆದುಕೊಂಡು ಈ ಸಂಘದಲ್ಲಿರುವ ಸದಸ್ಯರು, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಚಿಲ್ಲರೆ ಅಂಗಡಿಗಳನ್ನು ತೆರೆಯುವುದು, ಹಸುಗಳನ್ನು ಸಾಕಾಣಿಕೆ ಮತ್ತು ವ್ಯವಸಾಯ ಮಾಡಲು, ಬುಟ್ಟಿಗಳನ್ನು ಹೆಣೆಯಲು, ಜೇನುಸಾಕಾಣಿಕೆ ಇನ್ನೂ ಮುಂತಾದ ಹಲವಾರು ಆರ್ಥಿಕ ಚಟುವಟಿಕೆಯನ್ನು ಬುಡಕಟ್ಟು ಮಹಿಳೆಯರು ಕೈಗೊಳ್ಳುತ್ತಿದ್ದಾರೆ.

ಲ್ಯಾಂಪ್ಸ್ ಸಹಕಾರ ಸಂಘಗಳು

ಬುಡಕಟ್ಟು ಮಹಿಳೆಯರು ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಲು ಲ್ಯಾಂಪ್ಸ್ ಸಹಕಾರ ಸಂಘಗಳು ಕೂಡ ಸಹಕಾರಿಯಾಗಿವೆ. ಬುಡಕಟ್ಟು ಮಹಿಳೆಯರು ಕಾಡಿನಲ್ಲಿ ಸಂಗ್ರಹಿಸಿದ ಕಿರುಉತ್ಪನ್ನಗಳಾದ ಪಾಚಿ, ಮೇಣ, ಬುರುಗದಹೂವು, ಗೊಡಂಬಿ ಮುಂತಾದ ವಸ್ತುಗಳನ್ನು

ಮಾರಾಟಮಾಡಲು ಮಾರುಕಟ್ಟೆಗೆ ತಂದಾಗ ಅಲ್ಲಿ ಮದ್ಯವರ್ತಿಗಳು ಕಡಿಮೆ ಬೆಲೆಗೆ ಕೊಂಡು ವಂಚಿಸುತ್ತಿದ್ದರು. ಈ ಮದ್ಯಸ್ಥಗಾರರ ಹಾವಳಿಯನ್ನು ನಿರ್ಮೂಲನೆ ಮಾಡಿ ಬುಡಕಟ್ಟು ಮಹಿಳೆ ಮತ್ತು ಸಮುದಾಯದ ಜನರು ಶೇಖರಿಸಿದ ವಸ್ತುಗಳಿಗೆ ಬೆಂಬಲ ಬೆಲೆಯನ್ನು ನೀಡಲು ಈ ಲ್ಯಾಂಪ್ಸ್ ಸಹಕಾರಿ ಸಂಘಗಳನ್ನು ಸರ್ಕಾರ ಸ್ಥಾಪಿಸಿದೆ. ಈ ಸಂಘಗಳು ಕಿರುಉತ್ಪನ್ನಗಳನ್ನು ಕೊಂಡುಕೊಳ್ಳುವುದಲ್ಲದೆ, ಮಹಿಳೆಯರು ತಮ್ಮ ಕೈಯಿಂದ ಹೆಣೆದ ಬುಟ್ಟಿಗಳನ್ನು, ಬಿದಿರು ಬೆತ್ತದ ಸಾಮಾಗ್ರಿಗಳನ್ನು ಕೊಂಡುಕೊಳ್ಳುತ್ತದೆ. ಅಲ್ಲದೆ ಬುಡಕಟ್ಟು ಸಮುದಾಯಗಳಿಗೆ ಅಲ್ಪಾವಧಿ ಸಾಲಸೌಲಭ್ಯವನ್ನು ಕಡಿಮೆ ಬಡ್ಡಿದರದಲ್ಲಿ ನೀಡಲಾಗಿದೆ".[೬] ಇದರಿಂದಾಗಿ ಲೇವಾದೇವಿಗಾರರಿಂದ ಶೋಷಣೆಗೆ ಒಳಗಾಗುತ್ತಿದ್ದ ಬುಡಕಟ್ಟು ಸಮುದಾಯಗಳನ್ನು ಸಂಕೋಲೆಯಿಂದ ತಪ್ಪಿಸಿದಂತಾಗಿದೆ. ಈ ಎಲ್ಲಾ ಕಾರಣದಿಂದಾಗಿ ಕರ್ನಾಟಕ ರಾಜ್ಯದಲ್ಲಿ ೨೧ ಗಿರಿಜನರ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಗಿದೆ.

ಹೀಗೆ ಬುಡಕಟ್ಟು ಮಹಿಳೆಯರು ಈ ಲ್ಯಾಂಪ್ಸ್ ಸಹಕಾರ ಸಂಘಗಳ ಸಹಕಾರದಿಂದಲೂ ಕೂಡ ಆರ್ಥಿಕ ಚಟುವಟಿಕೆಯನ್ನು ಕೈಗೊಂಡಿದ್ದಾರೆ ಎಂದು ಹೇಳಬಹುದಾಗಿದೆ.

ಕೃಷಿ ಮತ್ತು ಮಹಿಳೆ

ಬುಡಕಟ್ಟು ಮಹಿಳೆಯರು ಪ್ರಸ್ತುತದಲ್ಲಿ ಕೃಷಿವಲಯದಲ್ಲಿಯು ಕೂಡ ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳುತ್ತಿದ್ದಾರೆ. ತಮ್ಮಲ್ಲಿರುವ ಅಲ್ಪಸ್ವಲ್ಪ ಭೂಮಿಯಲ್ಲಿ ವಾಣಿಜ್ಯ ಬೆಳೆಗಳಾದ ಶುಂಠಿ, ಸುವರ್ಣಗೆಡ್ಡೆ, ಮುಸುಕಿನ ಜೋಳ, ಕಾಫಿಬೆಳೆ ಮತ್ತು ಆಹಾರ ಧಾನ್ಯಗಳಾದ ಭತ್ತ, ರಾಗಿ, ಇನ್ನು ಮುಂತಾದ ಬೆಳೆಗಳನ್ನು ಬೆಳೆಯಲಾರಂಭಿಸಿದ್ದಾರೆ. ಜೊತೆಗೆ ಭೂಮಾಲೀಕರ ಕಾಫಿತೋಟಗಳಲ್ಲಿ, ಹೊಲಗದ್ದೆಗಳಲ್ಲಿ ನಾಟಿ ಮಾಡುವುದು, ದವಸ-ದಾನ್ಯ ಸಂಗ್ರಹಣೆಯಲ್ಲಿ ಕೂಲಿಕಾರ್ಮಿಕರಾಗಿ ದುಡಿಮೆ ಮಾಡಿ ಬಂದಂತಹ ಹಣದಿಂದ ಕುಟುಂಬವನ್ನು ಮುನ್ನಡೆಸುತ್ತಿದ್ದಾರೆ.

ಪಶುಪಾಲನೆ ಮತ್ತು ಮಹಿಳೆ

ಪಶುಪಾಲನೆಯಂತ ಆರ್ಥಿಕ ಚಟುವಟಿಕೆಯಲ್ಲಿ ಬುಡಕಟ್ಟು ಮಹಿಳೆಯರು ಇಂದಿನ ದಿನಗಳಲ್ಲಿ ತೊಡಗಿದ್ದಾರೆ. ಅಂದರೇ ಮಿಶ್ರತಳಿಯ ಹಸು, ಎಮ್ಮೆಗಳನ್ನು ಸಾಕುವುದರಿಂದ ಅವುಗಳಿಂದ ಹಾಲನ್ನು ಹಿಂಡಿ ಮರಾಟಮಾಡುತ್ತಿದ್ದಾರೆ. ಕುರಿಸಾಕಾಣಿಕೆ, ಕೋಳಿಸಾಕಾಣಿಕೆ, ಹಂದಿಸಾಕಣಿಕೆ, ಮೇಕೆಗಳ ಸಾಕಾಣಿಕೆ ಮಾಡುತ್ತಿದ್ದಾರೆ. ಈ ಪ್ರಾಣಿಗಳನ್ನು ಮಾರಾಟಮಾಡಿ ತಮ್ಮ ಮನೆಯ ಕಷ್ಟಕಾರ್ಪಣ್ಯಗಳನ್ನು ನೀಗಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಮಕ್ಕಳ ವಿದ್ಯಾಭ್ಯಾಸ, ಕುಟುಂಬದ ಆರೋಗ್ಯ, ಹೆಣ್ಣುಮಕ್ಕಳ ಮದುವೆ, ಆಕಸ್ಮಿಕ ಘಟನೆಗಳನ್ನು ನಿವಾರಿಸಿಕೊಳ್ಳಲು ಪಶುಪಾಲನೆಯು ಬಹಳ ಸಹಕಾರಿಯಾಗಿದೆ. ಈ ರೀತಿಯಲ್ಲಿ ಬುಡಕಟ್ಟು ಮಹಿಳೆಯರು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿರುವುದನ್ನು ಕಾಣಬಹುದು.

ಕರಕುಶಲ ವಸ್ತುಗಳ ತಯಾರಿಕೆ

ಕರಕುಶಲ ವಸ್ತುಗಳನ್ನು ತಯಾರಿಸುವ ವೃತ್ತಿಯನ್ನು ಬುಡಕಟ್ಟು ಮಹಿಳೆಯರು ಅನುಸರಿಸಿದ್ದಾರೆ. ಈ ಮಹಿಳೆಯರು ಯಾರು ಹೊಲಗದ್ದೆ ಹೊಂದಿಲ್ಲದಿರುವವರು ತಾವು ಜೀವನವನ್ನು ಸಾಗಿಸಲು ಅನ್ಯಮಾರ್ಗವಿಲ್ಲದೆ ಹಲವಾರು ಉಪಕಸುಬುಗಳನ್ನು ಮಾಡಿಕೊಂಡುಬರುತ್ತಿದ್ದಾರೆ. ಗೊಂಬೆಗಳನ್ನು ತಯಾರಿಸುವುದು, ಷೋಕೇಶ್ ಹೂ, ಪಿಂಗಾಣಿ ವಸ್ತುಗಳು ಮತ್ತು ಮನೆಯ ಅಲಂಕಾರಕೆ ಚಿಕ್ಕ ಪುಟ್ಟ ವಸ್ತುಗಳನ್ನು ತಯಾರುಮಾಡಿ ಅವುಗಳನ್ನು ಮಾರಾಟಮಾಡಿ ಮಾರಾಟದಿಂದ ಬಂದ ಹಣದಿಂದ ಜೀವನಸಾಗಿಸುತ್ತಿದ್ದಾರೆ. ಈ ವೃತ್ತಿಯಿಂದ ಎಷ್ಟೋ ಬುಡಕಟ್ಟು ಮಹಿಳೆಯರು ಹಸಿವಿನಿಂದ ಪಾರಾಗುತ್ತಿದ್ದಾರೆ. ಜೊತೆಗೆ ತಮ್ಮ ಜೀವನಮಟ್ಟವನ್ನು ಉತ್ತಮಪಡಿಸಿಕೊಳ್ಳುತ್ತಿದ್ದಾರೆ.

ಇತರೇ ಉಪಕಸುಬುಗಳು

ಬುಡಕಟ್ಟು ಮಹಿಳೆಯರು ಕಾಡಿನಲ್ಲಿ ಸಿಗುವಂತಹ ಸಸ್ಯ, ಬೇರು, ಗೆಡ್ಡೆಗಳನ್ನು ತಂದು ಆಯುರ್ವೇದಿಕ್ ಔಷಧಿಯಾಗಿ ಸಿದ್ಧಪಡಿಸಿ ಮಾರುಕಟ್ಟೆಯಲ್ಲಿ ಮಾರಾಟಮಾಡುತ್ತಿದ್ದಾರೆ. ಕೆಲವು ಬುಡಕಟ್ಟು ಮಹಿಳೆಯರು (ಭವಿಷ್ಯ) ಶಾಸ್ತ್ರಗಳನ್ನು ಹೇಳುವುದು ಇನ್ನಿತರ ಹಲವಾರು ವೃತ್ತಿಗಳನ್ನು ಕೈಗೊಂಡು ಜೀವನವನ್ನು ಸಾಗಿಸುತ್ತಿದ್ದಾರೆ.

ಕುಟುಂಬ ಸಂಬಂಧಿ ಆರ್ಥಿಕ ಚಟುವಟಿಕೆಯಲ್ಲಿ ಬುಡಕಟ್ಟು ಮಹಿಳೆ

ಬುಡಕಟ್ಟು ಮಹಿಳೆಯರು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದ್ದಾರೆ ಎಂಬುದರ ಬಗ್ಗೆ ಅನುಮಾನವಿಲ್ಲ. “ಆದರೆ ಅವಳ ಆರ್ಥಿಕ ಚಟುವಟಿಕೆಗಳಲ್ಲಿನ ಸಹಭಾಗಿತ್ವವು, ಅವಳ ಆರ್ಥಿಕ ದುಡಿಮೆಯು ಪ್ರಧಾನವಾದುದಲ್ಲವೆಂದು, ಅದು ಕೇವಲ ಅನುಷಂಗಿಕವೆಂದು ಹೇಳಲಾಗುತ್ತಿದೆ. ಕುಟುಂಬವು ಮಹಿಳೆಯ ಪ್ರಧಾನವಾದ ಕಾರ್ಯಕ್ಷೇತ್ರ. ಆರ್ಥಿಕತೆಯಲ್ಲಿ ಅವಳಪಾತ್ರ ಅಪ್ರಧಾನವಾದುದು ಮತ್ತು ಪ್ರಾಸಂಗಿಕವಾದುದು. ಆರ್ಥಿಕತೆಯಲ್ಲಿ ಪುರಷರಿಗೆ ಸಮಾನ ಸ್ಥಾನಮಾನ, ಮಹಿಳೆಯರಿಗೂ ಇದೆ. ಆದರೆ ಆರ್ಥಿಕ ಸಿದ್ಧಾಂತಗಳು ಮಹಿಳೆಯರನ್ನು ಕೇವಲ ‘ಜನಸಂಖ್ಯಾವಾಚಿ’ ಘಟಕ ಎಂದು ಭಾವಿಸಿರುವುದರಿಂದ ಅವುಗಳಿಗೆ ಅವಳು ಮುಖ್ಯವಾಗುವುದಿಲ್ಲ”.[೭] ಈ ಕಾರಣಕ್ಕೆ ಅರ್ಥಶಾಸ್ತ್ರವು ತನ್ನ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಮಹಿಳೆಯರು ಮತ್ತು ಪುರುಷರು ಎಂಬ ವರ್ಗೀಕರಣವನ್ನು ಒಪ್ಪಿಕೊಳ್ಳುವುದಿಲ್ಲ. “ಆರ್ಥಿಕ ಚಟುವಟಿಕೆಗೆ ಸಂಬಂಧಿಸಿದಂತೆ ಮಹಿಳೆಯರನ್ನು ಅನುಷಂಗಿಕರನ್ನಾಗಿ, ಪ್ರಾಸಂಗಿಕರನ್ನಾಗಿ ಮತ್ತು ಅಧೀನರನ್ನಾಗಿ ಮಾಡಿಕೊಂಡಿರುವುದರಿಂದಾಗಿ ಅರ್ಥಶಾಸ್ತ್ರವು ‘ಏಕಲಿಂಗ ಜ್ಞಾನಶಿಸ್ತಾಗಿದೆ. ಸಂತಾನೋತ್ಪತ್ತಿಯಲ್ಲಿ ಮಹಿಳೆಯ ಸ್ಥಾನಮಾನವು ಎಷ್ಟು ಮಹತ್ವವಾದುದೋ ಅಷ್ಟೇ ಮಹತ್ವದ ಪಾತ್ರವನ್ನು ಆರ್ಥಿಕೋತ್ಪಾದನೆಯಲ್ಲಿಯೂ ಮಹಿಳೆಯು ನಿರ್ವಹಿಸುತ್ತಿದ್ದಾಳೆ ಎಂಬ ವಾಸ್ತವಿಕ ಸಂಗತಿಯನ್ನು ತಿಳಿಯಬಹುದಾಗಿದೆ”.[೮]

ಮಹಿಳೆಯ ಆರ್ಥಿಕತೆಯೆಂಬುದು ಉತ್ಪಾದನೆಗೆ ಸಂಬಂಧಿಸಿದ ಕಾರ್ಯವ್ಯವಸ್ಥೆಗೆ ಅನ್ವಯವಾಗುವ ಒಂದು ಸಂಗತಿಯಾಗಿದೆ. ಅದ್ದರಿಂದ ಆರ್ಥಿಕತೆ ಎಂಬುದು ಸಮಾಜದ ಒಂದು ಭಾಗವಾಗಿದೆ. ಆರ್ಥಿಕತೆಯೇ ಸಮಾಜವಲ್ಲ ಆರ್ಥಿಕತೆಯ ಗಡಿಯನ್ನು ಮೀರಿ ದುಡಿಮೆಯ ಚಟುವಟಿಕೆಗಳು ನಡೆಯುತ್ತಿರುತ್ತವೆ. ಸಮಾಜ ಮತ್ತು ಆರ್ಥಿಕತೆಗಳ ನಡುವಿನ ಭಿನ್ನತೆಯು ಮಹಿಳೆ ಮತ್ತು ಲಿಂಗ ಸಂಬಂಧಗಳ ದೃಷ್ಟಿಯಿಂದ ಬಹಳ ಮುಖ್ಯವಾಗಿದೆ. ಆರ್ಥಿಕತೆಯ ಗಡಿಯ ಆಚೆಗೆ ಅನೇಕ ಬಗೆಯ ಚಟುವಟಿಕೆಗಳು ನಡೆಯುತ್ತಿರುತ್ತವೆ. ಹೀಗೆ ಆರ್ಥಿಕತೆಯ ಗಡಿಯಾಚೆ ನಡೆಯುವ ದುಡಿಮೆಯಲ್ಲಿ ಬಹುಪಾಲು ಮಹಿಳೆಯರು ತೊಡಗಿಸಿಕೊಂಡಿದ್ದಾರೆ. ಆರ್ಥಿಕತೆಯ ಗಡಿಯ ಆಚೆಯಲ್ಲಿ ನಡೆಯುವ ದುಡಿಮೆ ಅಥವಾ ಚಟುವಟಿಕೆಯನ್ನು ಜೈವಿಕವೆಂದು, ಪ್ರಾಕೃತಿಕವೆಂದು ಅವುಗಳು ಕೇವಲ ಉಪಯೋಗಿ ಮಹತ್ವ ಹೊಂದಿರುತ್ತವೆಂದು ಹೇಳಲಾಗಿದೆ. ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ದುಡಿಮೆಯನ್ನು ಆರ್ಥಿಕೋತ್ಪಾಧನೆ ಎಂದು ಪರಿಗಣಿಸಿದರೆ ಆರ್ಥಿಕತೆಯ ಗಡಿಯ ಆಚೆಯಲ್ಲಿ ನಡೆಯುವ ಚಟುವಟಿಕೆಗಳನ್ನು ಸಂತಾನೋತ್ಪತ್ತಿ ಚಟುವಟಿಕೆ ಎಂದು ಪರಿಗಣಿಸಲಾಗಿದೆ. ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ಚಟುವಟಿಕೆಗಳು ಮಾತ್ರ ಸಂಪತ್ತನ್ನು ಉತ್ಪಾದಿಸಬಲ್ಲವು ಎಂಬ ನಂಬಿಕೆ ಇಲ್ಲದೆ, ಆರ್ಥಿಕತೆಯ ಚಟುವಟಿಕೆಯ ಚೌಕಟ್ಟಿನೊಳಗೆ ನಡೆಯುವ ಚಟುವಟಿಕೆಗಳಿಗೆ ಸಮಾಜವು ಮನ್ನಣೆ ನೀಡುತ್ತದೆ. ಆರ್ಥಿಕತೆಯ ಚೌಕಟ್ಟಿನ ಹೊರಗೆ ನಡೆಯುವ ಚಟುವಟಿಕೆಗಳು ಸಂಪತ್ತನ್ನು ಉತ್ಪಾಧಿಸಲು ಸಾಧ್ಯವಿಲ್ಲ ಆದ್ದರಿಂದ ಅವುಗಳಿಗೆ ಸಾಮಾಜಿಕ ಮಹತ್ವವಿರುವುದಿಲ್ಲ.

ಆರ್ಥಿಕತೆಯ ಚೌಕಟ್ಟಿನಲ್ಲಿ ನಡೆಯುವ ಉತ್ಪಾದನೆ ಚಟುವಟಿಕೆಗಳಲ್ಲಿ ಪುರುಷರ ಪಾಲು ಅಧಿಕವಾಗುತ್ತಿದೆ. ಆರ್ಥಿಕ ಚೌಕಟ್ಟಿನಿಂದ ಆಚೆಗೆ ನಡೆಯುವ ಚಟುವಟಿಕೆಗಳು ಬಹಳಷ್ಟು ಮಟ್ಟಿಗೆ ಮಹಿಳೆಯರಿಗೆ ಮೀಸಲಾಗಿದೆ. ಸಾಮಾಜಿಕವಾಗಿ ಮನ್ನಣೆಯಿಲ್ಲದ ಕೇವಲ ಉಪಯೋಗಿ ಮಹತ್ವವುಳ್ಳ ಚಟುವಟಿಕೆಗಳನ್ನೆಲ್ಲಾ ಮಹಿಳೆಯರಿಗೆ ಮುಡುಪಾಗಿಡಲಾಗಿದೆ.

ಆರ್ಥಿಕತೆ ಎಂಬುದು, 'ಪುರುಷ ಪ್ರಪಂಚವಾಗಿ' ರೂಪುಗೊಂಡಿದೆ. ಆರ್ಥಿಕತೆ ಚೌಕಟ್ಟಿನೊಳಗೆ ಆರ್ಥಿಕೋತ್ಪಾದನೆಯಲ್ಲಿ ಮಹಿಳೆಯರು ಇರುತ್ತಾರೆ. ಆದರೆ ಅವರ ಆರ್ಥಿಕೋತ್ಪಾದನೆಯಲ್ಲಿ ತೊಡಗಿದ್ದರೂ, ಅವರ ಚಟುವಟಿಕೆಗಳಿಂದ ಉತ್ಪಾದಿಸುವ ಸರಕು-ಸೇವೆಗಳಿಗೆ 'ಉಪಯೋಗಿ ಮಹತ್ವ'ವಿರುತ್ತದೆ. ವಿನಾ ವಿನಿಮಯ ಮಹತ್ವವಿರುವುದಿಲ್ಲ. ಸಮಾಜ ವಿಜ್ಞಾನಗಳು ಸಂಪಾದನೆಯನ್ನು ಪುರುಷವರ್ಗಕ್ಕೆ ಮೀಸಲಿಟ್ಟು 'ಸಂಗೋಪನೆ'ಯನ್ನು ಮಹಿಳೆಯರಿಗೆ ಮೀಸಲಿಟ್ಟಿವೆ, ಉದಾ: ಗೃಹಿಣಿಯು ಅಡಿಗೆ ಮಾಡಿದರೆ ಅದು 'ಸಂಗೋಪನೆ' ಕಾರ್ಯವೇ ವಿನಾ ಸಂಪಾದನೆ ಕಾರ್ಯವಲ್ಲ. ಸಂಪಾದನೆಗಳನ್ನು ಮಹಿಳೆಯರ ಜವಾಬ್ದಾರಿಯನ್ನಾಗಿಯು ಆರ್ಥಿಕೋತ್ಪಾದನೆ ಮತ್ತು ಸಂಪಾದನೆಗಳನ್ನು ಪುರುಷರ ಜವಾಬ್ದಾರಿಯನ್ನಾಗಿಯು ಮಾಡಲಾಗಿದೆ. ಏಕೆಂದರೆ ಮಹಿಳೆಯರ ಕಾರ್ಯಾಕ್ಷೇತ್ರವು ಕುಟುಂಬವೆಂದು, ಮನೆಯ ಒಳಗಿನ ಜಗತ್ತು ಎಂದು ನಂಬಲಾಗಿದೆ. ಪುರುಷರ ಕಾರ್ಯಕ್ಷೇತ್ರವು ಮನೆಯ ಹೊರಗಿನ ಜಗತ್ತು ಎಂದೂ, ಸಮಾಜ ಎಂದೂ, ಪ್ರತಿಪಾಧಿಸುತ್ತಾ ಬರಲಾಗಿದೆ.

ಅರ್ಥಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ಸಮಾಜವಿಜ್ಞಾನಗಳು ಮಹಿಳೆಯರನ್ನು ಕೇವಲ 'ಜನಸಂಖ್ಯಾವಾಚಿ ಘಟಕ'ವೆಂದು ಪರಿಭಾವಿಸಿಕೊಂಡಿದೆ. ಅದ್ದರಿಂದ ಮಹಿಳೆಯರಿಗೆ ಅವರ ಕಾರ್ಯಚಟುವಟಿಕೆಗಳಿಗೆ ಸಾಮಾಜಿಕ ಅಸ್ತಿತ್ವವಿಲ್ಲದಂತಾಗಿದೆ. ಆರ್ಥಿಕತೆಯಲ್ಲಿ ಮಹಿಳೆಯರು ಅಧೀನಸ್ಥಾನ ಹೊಂದಿದ್ದಾರೆ. ಪುರುಷರ ಅಧೀನದಲ್ಲಿ ಅವರ ಬದುಕು ನಡೆಸಬೇಕಾದ ಸ್ಥಿತಿ ಇದೆ. ಹೀಗೆ ಆರ್ಥಿಕತೆ ಎಂಬುದು ಪುರುಷಶಾಹಿಯ ಸಾಮ್ರಾಜ್ಯವಾಗಿದೆ.

ಉತ್ಪಾದನೆ ಮತ್ತು ಅನುಭೋಗ ಇವುಗಳ ನಡುವೆ ಸ್ಪಷ್ಟವಾದ ಅಂತರವಿದೆ. ಉತ್ಪಾದನೆ ಎಂಬುದು ಮಾರುಕಟ್ಟೆಯಲ್ಲಿ ನಡೆಯುವ ಚಟುವಟಿಕೆಯೆಂದು, ಅನುಭೋಗ ಎನ್ನುವುದು ಮನೆಯಲ್ಲಿ ನಡೆಯುವ ಚಟುವಟಿಕೆ ಎಂದು ವರ್ಗೀಕರಿಸಲಾಗಿದೆ. ಕುಟುಂಬವನ್ನು ಕೇವಲ ಅನುಭೋಗಿ ಘಟಕಗಳೆಂದು ವರ್ಗೀಕರಿಸಲಾಗಿದೆ. ಸಮಾಜ ವಿಜ್ಞಾನಿಗಳು ಕುಟುಂಬವನ್ನು ಉತ್ಪಾದನಾ ಘಟಕವೆಂದು ಪರಿಗಣಿಸಲು ಸಿದ್ದರಿಲ್ಲ.

ಕುಟುಂಬವನ್ನು ಅನುಭೋಗಿ ಘಟಕಗಳೆಂದು ಮತ್ತು ಸಂತಾನೋತ್ಪತ್ತಿ ಘಟಕಗಳೆಂದು ಪರಿಗಣಿಸಲಾಗಿದೆ. ಸಂತಾನೋತ್ಪತ್ತಿಯ ಎರಡು ಸಂಗತಿಗಳನ್ನು ಒಳಗೊಂಡಿದೆ. ಮೊದಲನೆಯದಾಗಿ ಅದು ಜೈವಿಕ ಚಟುವಟಿಕೆಯೆಂದು, ಸಂತಾನವನ್ನು ಮುಂದುವರಿಸುವ ಕ್ರಿಯೆಯೆಂದು ಹಾಗೂ ಎರಡನೆಯದಾಗಿ ಕುಟುಂಬವನ್ನು ಸಂಬಾಳಿಸಿಕೊಂಡು ಹೋಗುವ ಪ್ರಕ್ರಿಯೆಯೆಂದು ಪರಿಗಣಿಸಲಾಗಿದೆ. ಒಟ್ಟಾರೆ ಕುಟುಂಬವನ್ನು ಅನುಭೋಗಿ ಘಟಕವೆಂದು ಸಂತಾನೋತ್ಪತ್ತಿ ಘಟಕವೆಂದು ನಿರ್ಧಿಷ್ಟಪಡಿಸಲಾಗಿದೆ. ಉತ್ಪಾದನೆ ಮತ್ತು ಮಾರುಕಟ್ಟೆ ಇವುಗಳು ಸಮಾಜ ವಿಜ್ಞಾನಗಳ ದೃಷ್ಟಿಯಿಂದ ಪರಸ್ಪರ ಸಂವಾದಿಗಳಾಗಿದ್ದರೆ ಅನುಭೋಗ ಕುಟುಂಬಗಳು ಪರಸ್ಪರ ಸಂವಾದಿಗಳಾಗಿವೆ.

"ಪ್ರಸ್ತುತದಲ್ಲಿ ಬುಡಕಟ್ಟು ಮಹಿಳೆಯರು ಮತ್ತು ಸಾಮಾನ್ಯ ಮಹಿಳೆಯರು ಮಾಡುವಂತಹ ಚಟುವಟಿಕೆಗಳನ್ನು ಆರ್ಥಿಕ ಚಟುವಟಿಕೆ ಎಂದು ಭಾವಿಸದೆ ಅವುಗಳನ್ನು ಅನುತ್ಪಾದಕ ಚಟುವಟಿಕೆ ಎಂದು ಪರಿಭಾವಿಸಲಾಗಿದೆ. "ಈ ಮಹಿಳೆಯರು ಮಾಡುವ ಚಟುವಟಿಕೆ ಮಾರುಕಟ್ಟೆಯನ್ನು ಪ್ರವೇಶಿಸದೆ ಕ್ರಯಪಟ್ಟಿಯಲ್ಲಿ ಸೇರದಿರುವ ಅನೇಕ ಬಗೆಯ ಚಟುವಟಿಕೆಗಳಿವೆ. ಮನೆಯಲ್ಲಿ ಮನೆಯೊಡತಿಮಾಡುವ ಅಡುಗೆ ಕಾರ್ಯವನ್ನು ನೋಡಬಹುದು. ಈ ದುಡಿಮೆಯಲ್ಲಿ ಕ್ರಮವನ್ನು ತೊಡಗಿಸಬೇಕಾಗುತ್ತದೆ. ಬಂಡವಾಳ ವಿನಿಯೋಗವಾಗುತ್ತದೆ. ಇದು ನಿಜವಾಗಿಯು ಉತ್ಪಾದನೆ, ಆದರೆ ಸಮಾಜ ಇದನ್ನು ಉತ್ಪಾದನೆ ಎಂದು ಪರಿಗಣಿಸುವುದಿಲ್ಲ. ಇಂತಹ ನೂರಾರು ಚಟುವಟಿಕೆಗಳನ್ನು ಹೆಸರಿಸಬಹುದು. ಬಟ್ಟೆ, ಕಸ, ಮುಸುರೆ, ಅಡುಗೆ, ಕಾಳುಗಳ, ಒಪ್ಪ-ಓರಣ, ನೀರಿನ ಸಂಗ್ರಹ, ಉರುವಲು ಸಂಗ್ರಹ, ಮಕ್ಕಳ ಪೋಷಣೆ, ಉಪ್ಪಿನಕಾಯಿ, ಹಪ್ಪಳ ತಯಾರಿಕೆ ಮನೆಯಶೃಂಗಾರ, ಪೂಜೆ-ವ್ರತ, ಪುರಸ್ಕಾರ, ಸ್ವಂತ ಹೊಲಗದ್ದೆಗಳಲ್ಲಿ ದುಡಿಮೆ, ದನಕರುಗಳ ಪಾಲನೆ, ಹಾಲು ಹಿಂಡುವುದು, ಮೇವು, ಸೊಪ್ಪು, ಸೌದೆ ಮುಂತಾದವು ಮಾರುಕಟ್ಟೆ ಪ್ರವೇಶಿಸದೆ, ವಿನಿಮಯ ಮಹತ್ವವಿಲ್ಲದಿರುವ ಹಲವಾರು

ಚಟುವಟಿಕೆಗಳು ಮಾರುಕಟ್ಟೆಯ ಮೌಲ್ಯವಾಗದೆ ಸಂತಾನೋತ್ಪತ್ತಿ ಚಟುವಟಿಕೆಗಳಾಗಿ."[೮] ಸಂಗೋಪನಾ ಚಟುವಟಿಕೆಗಳಾಗಿವೆ. ಇಲ್ಲಿ ಈ ಎಲ್ಲಾ ಚಟುವಟಿಕೆಗಳು ಉತ್ಪಾದನೆ-ಆರ್ಥಿಕೋತ್ಪಾದನೆ ಪರದಿಯಲ್ಲಿ ಬರುವುದಿಲ್ಲ. ಹೀಗೆ ಬುಡಕಟ್ಟು ಮಹಿಳೆಯರು ಮಾಡುವ ಚಟುವಟಿಕೆಗಳು ಆರ್ಥಿಕ ಚಟುವಟಿಕೆಗಳಾಗದೆ, ಸಂಗೋಪನಾ ಚಟುವಟಿಕೆಯಲ್ಲಿ ಸೇರುತ್ತವೆ. ಇವರು ಮಾಡುವ ಚಟುವಟಿಕೆಗಳು ವಿದಿಲಿಖಿತ, ಜೈವಿಕ ನೀತಿ ಎಂದು ಹೇಳಲಾಗುತ್ತಿದೆ.

ಅಸಂಘಟಿತ ಮತ್ತು ಸಂಘಟಿತವಲಯದಲ್ಲಿ ಬುಡಕಟ್ಟು ಮಹಿಳೆಯ ಆರ್ಥಿಕ ಚಟುವಟಿಕೆ

ಸಾಮಾನ್ಯ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಎಷ್ಟೋ ಶತಮಾನಗಳಿಂದ ಅರಣ್ಯದೊಳಗೆ ಬುಡಕಟ್ಟು ಮಹಿಳೆ, ನಾಲ್ಕು ಗೋಡೆಯ ಒಳಗೆ ಸಾಮಾನ್ಯ ಮಹಿಳೆ, ಬಂದಿತಳಾಗಿ ಉಳಿದುಬಂದಿದ್ದಾಳೆ. ಪಿತೃ ಪ್ರಧಾನ ಕುಟುಂಬದಲ್ಲಿ ಮಹಿಳೆಯ ಕಾರ್ಯ ಮಕ್ಕಳನ್ನು ಹೆರುವ ಪೋಷಣೆ ಮಾಡುವ ತಾಂತ್ರಿಕ ಜೀವನದ ಜೊತೆಗೆ ಗಂಡಂದಿರ ಬೇಕು ಬೇಡಗಳನ್ನು ಪೂರೈಸುವುದಾಗಿತ್ತು. ಕುಟುಂಬದ ಕೆಲಸಗಳಿಗೆ ಸೀಮಿತವಾದ ಮಹಿಳೆ, ಹಗಲಿರುಳು ಗಂಡನ ಸೇವೆಗಾಗಿ ಸದಾಸಿದ್ಧಳಾಗಿರುತ್ತಿದ್ದಳು. ಹೀಗಿದ್ದರೂ ಕೂಡ ಅವಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪುರುಷರನ್ನೇ ಅವಲಂಬಿಸ ಬೇಕಾಗುತ್ತದೆ. ಹೀಗಾಗಿ ಅವಳು ಎಲ್ಲಾ ವಿಷಯಗಳಲ್ಲಿ ಪರಾವಲಂಬಿಯಾಗಿದ್ದಾಳೆ.

ಪ್ರಸ್ತುತದಲ್ಲಿ ಮಹಿಳೆ ಮತ್ತು ಬುಡಕಟ್ಟು ಮಹಿಳೆಯರು ತಮ್ಮ ವ್ಯಕ್ತಿತ್ವ ವೈಶಿಷ್ಟ್ಯತೆಯಿಂದ ಮುಂದೆ ಬರುತ್ತಿದ್ದಾರೆ. ಆರ್ಥಿಕವಾಗಿ ಸ್ವಾತಂತ್ರ್ಯಳಾದ ಅವಳು ಸರಿಸಮಾನತೆಯನ್ನು ಬಯಸುತ್ತಿದ್ದಾಳೆ. ಅದಕ್ಕೆ ಕಾರಣವೆಂದರೇ ಅವರು ಕೈಗೊಂಡಿರುವ ದುಡಿಮೆ ಅಥವಾ ಚಟುವಟಿಕೆಗಳು.

ಬುಡಕಟ್ಟು ಮಹಿಳೆಯರು ಕೈಗೊಂಡಿರುವ ಆರ್ಥಿಕ ಚಟುವಟಿಕೆಯನ್ನು ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ. ಅವುಗಳೆಂದರೆ.

೧. ಸಂಘಟಿತ ವಲಯ

೨. ಅಸಂಘಟಿತ ವಲಯ

ಬುಡಕಟ್ಟು ಮಹಿಳೆಯರು ತಮ್ಮ ಜೀವನ್ನು ಉತ್ತಮವಾಗಿರಿಸಿಕೊಳ್ಳಲು ಹಲವು ಚಟುವಟಿಕೆಯನ್ನು ಕೈಗೊಂಡಿದ್ದಾರೆ. ಅವುಗಳಲ್ಲಿ ಅಸಂಘಟಿತವಲಯ ಮತ್ತು ಸಂಘಟಿತವಲಯ. ಸಂಘಟಿತ ವಲಯದಲ್ಲಿ ಬರುವ ಉದ್ಯಮಗಳೆಂದರೇ ಸರ್ಕಾರಿ ಸ್ವಾಮ್ಯದ ಉದ್ಯಮಗಳಾದ ಪೆಟ್ರೋಲಿಯಂ ತೈಲ ಉದ್ಯಮ, ರೈಲ್ವೆ ಇಲಾಖೆ, ದೂರವಾಣಿ ಇಲಾಖೆ, ಸರ್ಕಾರಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಅಂಚೆ ಇಲಾಖೆ, ದೂರವಾಣಿ ಇಲಾಖೆ, ವೈಮಾನಿಕ ಕ್ಷೇತ್ರ. ರಕ್ಷಣಾವಲಯ, ಬ್ಯಾಂಕ್‌ಕ್ಷೇತ್ರ ಇತ್ಯಾದಿ. ಖಾಸಗಿಯಾಗಿದ್ದರು ಸರ್ಕಾರದ ನಿಯಂತ್ರಣದಲ್ಲಿರುವ ಸಂಸ್ಥೆಗಳು ಎಲ್.ಐ.ಸಿ.

ಔಷಧಿ ಕಾರ್ಖಾನೆಗಳು, ಸಹಕಾರ ಸೊಸೈಟಿಗಳು, ಖಾಸಗಿ ಶಿಕ್ಷಣಸಂಸ್ಥೆಗಳು, ಆಧುನಿಕಯಂತ್ರೋಪಕರಣಗಳನ್ನು ಉತ್ಪಾದಿಸುವ ಕಂಪನಿಗಳು ಇತ್ಯಾದಿಗಳನ್ನು ತೆಗೆದುಕೊಳ್ಳಬಹುದು.

ಅಸಂಘಟಿತ ವಲಯದಲ್ಲಿ ವೈವಿಧ್ಯಮಯವಾದ ಚಟುವಟಿಕೆಗಳು ನಡೆಯುತ್ತವೆ. ಇಲ್ಲಿ ಕೃಷಿವಲಯ, ಕಟ್ಟಡ, ರಸ್ತೆನಿರ್ಮಾಣ, ಗೃಹಕೈಗಾರಿಕೆ, ಸಣ್ಣಸಣ್ಣ ಸ್ವಯಂ ಉದ್ಯೋಗ, ಹಣ್ಣು ತರಕಾರಿಗಳನ್ನು ಮಾರಾಟ ಮಾಡುವುದು, ಬುಟ್ಟಿ ಚಾಪೆ ಹೆಣೆಯುವುದು, ಬಟ್ಟೆ ಹೊಲಿಯುವುದು, ಮನೆ ಕೆಲಸ, ನೂಲು ತೆಗೆಯುವುದು, ಬಟ್ಟೆನೇಯುವುದು, ಮೀನುಗಾರಿಕೆ, ಪಶುಸಂಗೋಪನೆ, ತೋಟಗಾರಿಕೆ, ಬೀಡಿ ಕಟ್ಟುವುದು, ಊದುಬತ್ತಿ ತಯಾರಿಸುವುದು, ಆಹಾರ ಸಂಸ್ಕರಣೆ ಮತ್ತು ಇತರೇ ಉತ್ಪನ್ನಗಳನ್ನು ತಯಾರಿಸುವ ಘಟಕಗಳಲ್ಲಿ ದುಡಿಯುವುದು ಮುಂತಾದ ಹತ್ತು ಹಲವು ಕೆಲಸಗಳು ಕಂಡುಬರುತ್ತವೆ.

ಈ ಅಸಂಘಟಿತ ವಲಯದಲ್ಲಿ ಹೆಚ್ಚು ಕಾರ್ಮಿಕರನ್ನು ಕಡಿಮೆ ಕೂಲಿಗೆ ನೇಮಿಸಿಕೊಳ್ಳಲಾಗುತ್ತದೆ. ಇಲ್ಲಿ ಜಾತಿವರ್ಗದ ಆಧಾರದ ಮೇಲೆ ವೇತನ ತಾರತಮ್ಯವಿರುತ್ತದೆ. ಇಲ್ಲಿ ಯಾವುದೇ ಬಗೆ ಔದ್ಯೋಗಿಕ ಸೇವಾ ಸೌಲಭ್ಯಗಳು ಇರುವುದಿಲ್ಲ. ಯಾವುದೇ ಕಾಯಿದೆ ಕಾನೂನಿನ ಚೌಕಟ್ಟಿಗೆ ಒಳಪಡದೆ ಕೆಳಮಟ್ಟದ ತಂತ್ರಜ್ಞಾನವಿರುತ್ತದೆ. ಹಾಗೂ ಕಾರ್ಮಿಕರು ಸಂಘಟನೆಗೊಂಡಿರುವುದಿಲ್ಲ. ಭಾರತವು ಸೇರಿದಂತೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜನರು ಸಂಘಟಿತ ವಲಯಕ್ಕಿಂತ ಅಸಂಘಟಿತ ವಲಯದಲ್ಲಿ ಹೆಚ್ಚಾಗಿ ದುಡಿಯುತ್ತಿದ್ದಾರೆ. ಹೀಗೆ ದುಡಿಯುವವರಲ್ಲಿ ಸಾಮಾನ್ಯವಾಗಿ ಬುಡಕಟ್ಟು ಮಹಿಳೆ ಮತ್ತು ಮಧ್ಯಮವರ್ಗದ ಮಹಿಳೆಯರ ಪ್ರಮಾಣವು ಅಧಿಕವಾಗಿರುತ್ತದೆ.

ಕೋಷ್ಟಕ.೧ ಭಾರತದ ಅಸಂಘಟಿತ ವಲಯದಲ್ಲಿ ಮಹಿಳಾ ದುಡಿಮೆಗಾರರು ೧೯೯೯-೨೦೦೦

ದುಡಿಮೆಯ ಸಹಭಾಗಿತ್ವ	ಸಂಘಟಿತ ವಲಯ			ಅಸಂಘಟಿತ ವಲಯ		
	ಪು	ಸ್ತ್ರೀ	ಒಟ್ಟು	ಪು	ಸ್ತ್ರೀ	ಒಟ್ಟು
ಗ್ರಾಮೀಣ	೬.೩೯	೩.೧೧	೫.೨೩	೯೩.೬೦	೯೬.೮೯	೯೪.೭೭
ನಗರ	೨೪.೨೩	೧೯.೫೭	೧೯.೫೭	೭೫.೭೭	೮೦.೪೩	೭೬.೭೦
ಒಟ್ಟು ಭಾರತದಲ್ಲಿ	೧೦.೯೧	೫.೨೮	೯.೧೦	೮೯.೦೭	೯೪.೬೭	೯೦.೮೭

ಮೂಲ: ಎನ್.ಎಸ್.ಎಸ್. ೧೯೯೯-೨೦೦೦ EPN ಮೇ ೨೭, ೨೦೦೬

ಭಾರತದಲ್ಲಿ ಶೇ. ಹತ್ತಕ್ಕಿಂತ ಕಡಿಮೆ ಮಹಿಳೆಯರು ಸಂಘಟಿತವಲಯದಲ್ಲಿ ದುಡಿಯುತ್ತಿದ್ದರೆ ಶೇ. ತೊಂಬತ್ತಕ್ಕಿಂತ ಹೆಚ್ಚು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. "ಇಲ್ಲಿ ಮಹಿಳೆಯರ ಕೆಲಸದ ಸ್ವರೂಪ, ಸ್ಥಿತಿಗತಿ ಹಾಗೂ ಸಮಸ್ಯೆಗಳನ್ನು ಮೊದಲು ಬೆಳಕಿಗೆ ತಂದಿದ್ದು ೧೯೭೪ರಲ್ಲಿ 'ನ್ಯಾಷನಲ್ ಕಮಿಟಿ ಆನ್ ಸ್ಟೇಟಸ್ ಆಫ್ ವುಮನ್'ನ ವರದಿಯನ್ನು ಸಲ್ಲಿಸಲಾಯಿತು.'

ಇದು ಟುವರ್ಡ್ಸ್ ಈಕ್ವಾಲಿಟಿಯಾಗಿದ್ದು' ಸರ್ಕಾರದ, ನೀತಿ ನಿರೂಪಕರ ಹಾಗೂ ಅರ್ಥಶಾಸ್ತ್ರಜ್ಞರ ಗಮನಸೆಳೆಯಿತು. ನಂತರ ಅಸಂಘಟಿತ ವಲಯದ ಮಹಿಳೆ ದುಡಿಮೆಗಾರರ ಕಡೆ ಹೆಚ್ಚಿನ ಗಮನ ಹರಿಯಲು ಪ್ರಾರಂಭವಾಯಿತು. "ಇದಲ್ಲದೆ ೧೯೮೮ರಲ್ಲಿ 'ದಿ ನ್ಯಾಷನಲ್ ಕಮಿಟಿ ಆನ್ ವುಮನ್ ಇನ್ ಸೆಲ್ಫ್ ಎಂಪ್ಲಾಯ್‌ಮೆಂಟ್ ಆಂಡ್ ಇನ್ ಫಾರ್ಮಲ್ ಸೆಕ್ಟರ್" ವರದಿ 'ಶ್ರಮಶಕ್ತಿ'ಯು ಈ ವಲಯದ ಮಹಿಳೆಯರ ಬಗ್ಗೆ ಮತ್ತಷ್ಟು ಅಂಕಿ ಅಂಶಗಳನ್ನು ಬೆಳಕಿಗೆ ತಂದು ಅವುಗಳ ವಿಶ್ಲೇಷಣೆ ನೀಡಿ ಸರ್ಕಾರವು ನಿರ್ದಿಷ್ಟ ಕ್ರಮಕೈಗೊಳ್ಳುವಂತೆ ಶಿಫಾರಸ್ಸು ಮಾಡಿತು."[೧೦] ಅದರ ಫಲವಾಗಿ ೧೯೯೧ರ ಜನಗಣತಿಯಲ್ಲಿ ಮೊದಲಬಾರಿಗೆ ಅಸಂಘಟಿತ ವಲಯದ ಮಹಿಳಾ ದುಡಿಮೆಗಾರರನ್ನು ಸೇರಿಸಲಾಯಿತು. ಇದರಿಂದ ಮಹಿಳೆಯರ ದುಡಿಮೆ ಸಹಭಾಗಿತ್ವವು ಹೆಚ್ಚಾದುದು ಕಂಡುಬರುತ್ತದೆ. ಅಲ್ಲಿಯವರೆಗೆ ಸರ್ಕಾರವಾಗಲಿ, ಜ್ಞಾನಶಾಸ್ತ್ರವಾಗಲಿ, ವಿಷಯತಜ್ಞರಾಗಲಿ ಅಸಂಘಟಿತ ವಲಯದ ಮಹಿಳೆಯರನ್ನು ದುಡಿಮೆಗಾರರೆಂದು ಪರಿಗಣಿಸುತ್ತಲೇ ಇರಲಿಲ್ಲ. ಇತ್ತೀಚಿಗೆ ಬಹಳ ನಿಧಾನವಾಗಿ ಗಮನ ನೀಡುತ್ತಿರುವುದು ಕಂಡುಬರುತ್ತದೆ. ಸರ್ಕಾರ ತನ್ನ ರಾಜಕೀಯ ಪ್ರಸ್ತಾಪನೆಯಡಿ ಅಸಂಘಟಿತ ವಲಯದ ದುಡಿಮೆಗಾರರಿಗೆ ಜೀವವಿಮೆ, ಆರೋಗ್ಯ ವಿಮೆ ಹಾಗೂ ಇತರ ಸಾಮಾಜಿಕ ಭದ್ರತೆಯನ್ನು ನೀಡುವುದಾಗಿ ಹೇಳುತ್ತವೆ. ಅವುಗಳು ಜಾರಿಗೊಂಡ ಪರಿಣಾಮ ಮಹಿಳೆಯರು ಲಾಭ ಪಡೆದುಕೊಂಡಿದ್ದಾರೆ. ಬುಡಕಟ್ಟು ಅಸಂಘಟಿತ ಕ್ಷೇತ್ರದಲ್ಲಿ ತಮ್ಮ ಆರ್ಥಿಕ ಚಟುವಟಿಕೆಯನ್ನು ಕೇಂದ್ರೀಕರಿಸಲು ಅನೇಕ ಕಾರಣಗಳಿವೆ. ಅವುಗಳೆಂದರೆ.

೧. ಸಾಮಾನ್ಯವಾಗಿ ಬುಡಕಟ್ಟು ಸಮುದಾಯದ ಹೆಣ್ಣುಮಕ್ಕಳು ವಾಸಿಸುವ ಸ್ಥಳಗಳಿಂದ ಹೊರತುಪಡಿಸಿ ಬೇರೆ ಸ್ಥಳಗಳಿಗೆ ಕೆಲಸ ಮಾಡಲು ಕಳುಹಿಸುವುದಿಲ್ಲ. ಅವರ ಚಲನೆಯ ಮೇಲಿರುವ ನಿರ್ಬಂಧವು ಅವರು ತಾವು ವಾಸಿಸುವ ಸ್ಥಳದಲ್ಲೇ ಸಿಗುವಂತಹ ಕಡಿಮೆ ಕೂಲಿ, ಕಡಿಮೆ ಕೌಸಲ್ಯದ ಋತುಮಾನಕ್ಕನುಗುಣವಾದ, ನಿರಂತರ ದುಡಿಮೆ ನಿರೀಕ್ಷಿಸಿದ ಕೆಲಸಗಳಲ್ಲಿ ತೊಡಗುತ್ತಾರೆ.

೨. ದುಡಿಯುವ ಮಹಿಳೆಯರು ಮನೆಯಲ್ಲಿ ಗಂಡ-ಮಕ್ಕಳ ಪೋಷಣೆ ಹಾಗೂ ಕುಟುಂಬದ ಜವಾಬ್ದಾರಿ ಅವರನ್ನು ಹೊರಗಡೆ ನಿರಂತರ ನಿಯಮಿತ ಕೆಲಸಗಳಲ್ಲಿ ತೊಡಗಲು ಬಿಡುವುದಿಲ್ಲ. ತಮ್ಮ ಅನುಕೂಲಕ್ಕೆ ತಕ್ಕಂತೆ ಲಭ್ಯವಿರುವ ಅಸಂಘಟಿತ ಕ್ಷೇತ್ರದಲ್ಲಿ ದುಡಿಯಲು ತೊಡಗುತ್ತಾರೆ.

೩. ಬುಡಕಟ್ಟು ಮಹಿಳೆಯರ ಅನಕ್ಷರತೆ, ಶಿಕ್ಷಣ, ತರಬೇತಿ ಹಾಗೂ ಕೌಶಲ್ಯದ ಕೊರತೆಯಿಂದಾಗಿ ಸಂಘಟಿತ ಕ್ಷೇತ್ರದಲ್ಲಿರುವ ಸ್ಪರ್ಧಾತ್ಮಕ ಕೆಲಸಗಳನ್ನು ಪಡೆಯುವುದು ಕಷ್ಟವಾಗಿದೆ.

೪. ಸಂಘಟಿತ ಕ್ಷೇತ್ರವನ್ನು ಪ್ರವೇಶಿಸಲಾಗದೆ ಅಂದರೆ ಅಲ್ಲಿ ಕಡ್ಡಾಯ ಮತ್ತು ಅಪೇಕ್ಷಣೀಯ ಪೂರೈಕೆಗಳನ್ನು, ಸಾಕ್ಷರತೆ, ಕನಿಷ್ಟ ವಿದ್ಯಾರ್ಹತೆ, ಅನುಭವ, ಕಾರ್ಯಕ್ಷಮತೆ ಕೌಶಲ್ಯ ತರಬೇತಿಗಳನ್ನು ಪೂರೈಸಲಾಗದೆ ಅಸಂಘಟಿತ ವಲಯಕ್ಕೆ ಹೋಗುತ್ತಾರೆ.

೫. ಸಾಮಾನ್ಯವಾಗಿ ಪ್ರಸ್ತುತದ ಸನ್ನಿವೇಶದಲ್ಲಿ ಬೇಡಿಕೆ ಮತ್ತು ಪೂರೈಕೆಯನ್ನು ತೆಗೆದುಕೊಂಡರೆ ಪೂರೈಕೆ ಅಧಿಕವಾಗಿರುವುದರಿಂದ ಬೇಡಿಕೆ ಕಡಿಮೆಯಾಗುತ್ತದೆ. ಬೇಡಿಕೆ ಕಡಿಮೆಯಾದಾಗ ಅವರ 'ಚೌಕಾಶಿ ಶಕ್ತಿ'ಯು ಕಡಿಮೆಯಾಗಿ ಕೌಶಲ್ಯರಹಿತ ಕೆಲಸಗಳಲ್ಲಿ ಬಾಗಿಯಾಗುವುದರಿಂದ ಬುಡಕಟ್ಟು ಮಹಿಳೆಯರು ಕೌಶಲ್ಯರಹಿತ ಕೆಲಸಗಳಲ್ಲಿ ಕಡಿಮೆ ಕೂಲಿಗೆ ದುಡಿಯುತ್ತಿದ್ದಾರೆ.

೬. ಸರ್ಕಾರದ ಕೃಷಿ ನೀತಿ, ಭೂಕಾಯ್ದೆ, ಅರಣ್ಯಕಾಯ್ದೆ, ಆರ್ಥಿಕ ಅಭಿವೃದ್ಧಿ ಕಾರ್ಯನೀತಿ ವಿಫಲತೆ, ಮುಂತಾದವುಗಳಿಂದ ಬುಡಕಟ್ಟು ಸಮುದಾಯಗಳು ಸ್ಥಳಾಂತರಗೊಳಿಸುತ್ತದೆ. ನಿರುದ್ಯೋಗಿಗಳನ್ನಾಗಿ ಬಡತನಕ್ಕೆ ತಳ್ಳುತ್ತದೆ. ಇದರಿಂದ ಸಂಕಷ್ಟಕ್ಕೆ ಒಳಗಾದ ಮಹಿಳೆಯರು ಅನಿವಾರ್ಯವಾಗಿ ತಕ್ಷಣಕ್ಕೆ ಸಿಗುವ ಯಾವುದೇ ಆರ್ಥಿಕ ಚಟುವಟಿಕೆಗೆ ಮುಂದಾಗುತ್ತಾರೆ.

೭. ಪ್ರಸ್ತುತ ದಿನಗಳಲ್ಲಿ ತಂತ್ರಜ್ಞಾನ ಬೆಳವಣಿಗೆ, ಆಧುನೀಕರಣ, ಹೊಸ ಆರ್ಥಿಕನೀತಿ, ಜಾಗತೀಕರಣ ಮಹಿಳೆಯರನ್ನು ಅಸಂಘಟಿತ ಕ್ಷೇತ್ರಕ್ಕೆ ತಳ್ಳುತ್ತಿವೆ.

ಇಂದಿನ ದಿನಗಳಲ್ಲಿ ಅರಣ್ಯ ಕಿರುಉತ್ಪನ್ನಗಳು ಬಂಡವಾಳಶಾಹಿಗಳ ಒಡೆತನಕ್ಕೆ ಸೇರಿ ಹೋಗಿವೆ. ರಾಷ್ಟ್ರೀಯ ಉದ್ಯಾನವನಗಳ ಹೆಸರಿನಲ್ಲಿ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸುತ್ತಿರುವುದು. ಅವರು ಮಾಡುತ್ತಿದ್ದಂತಹ ಕುಮರಿ ಬೇಸಾಯ ಭೂಮಾಲೀಕರ ಎಸ್ಟೇಟ್‌ಗಳಾಗಿ ಪರಿವರ್ತನೆಯಾಗಿರುವುದು ಮತ್ತು ಬೃಹತ್ ಅಣೆಕಟ್ಟು ಯೋಜನೆಗಳ ನೆಪದಿಂದ ಸ್ಥಳಾಂತರ ಮುಂತಾದ ಹಲವಾರು ಕಾರಣದಿಂದ ಬುಡಕಟ್ಟು ಮಹಿಳೆಯರು ಅನಿವಾರ್ಯವಾಗಿ ಪುರುಷರೊಂದಿಗೆ ಕೂಲಿಕೆಲಸಕ್ಕೆ ಮೊರೆ ಹೋಗಿ ಸಣ್ಣಪುಟ್ಟ ವ್ಯಾಪಾರ ಮಾಡುತ್ತಿದ್ದಾರೆ. ನಂತರದಲ್ಲಿ ಅಸಂಘಟಿತ ವಲಯಗಳಲ್ಲಿ ಚಿಕ್ಕಪುಟ್ಟ ಕೆಲಸಗಳಿಗೆ ಮೊರೆಹೋಗಿ ತನ್ನ ಶ್ರಮವನ್ನು ಅಲ್ಪಹಣಕಾಸಿಗೆ ಮಾರಿಕೊಂಡು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದಾಳೆ.

ಅಸಂಘಟಿತ ವಲಯದಲ್ಲಿ ಬುಡಕಟ್ಟು ಮಹಿಳಾ ಕಾರ್ಮಿಕರ ಸಮಸ್ಯೆಗಳು

ಬುಡಕಟ್ಟು ಮಹಿಳೆಯರು ಅನಕ್ಷರತೆ, ಮೌಢ್ಯತೆ, ಬಡತನ, ಕೌಶಲ್ಯತೆಯ ಕೊರತೆಯಿಂದ ಕೌಟುಂಬಿಕ ನಿರ್ವಹಣೆ, ಜನಸಂಖ್ಯೆಯ ಒತ್ತಡ ಹಾಗೂ ಸಂಘಟಿತ ಕ್ಷೇತ್ರದ ಉದ್ಯೋಗಗಳ ಬಗೆಗಿನ ಅಜ್ಞಾನ ಮತ್ತು ಅವಕಾಶಗಳ ಕೊರತೆಯಿಂದಾಗಿ ಅಸಂಘಟಿತ ವಲಯದಲ್ಲಿ ವೃತ್ತಿಯನ್ನು ಕೈಗೊಂಡಿದ್ದಾರೆ.

ದಿನದ ೨೪ ಗಂಟೆಯಲ್ಲಿ ೧೦ ಅಥವಾ ೧೨ ಗಂಟೆಗಳು ತಾವು ಕೈಗೊಂಡಿರುವ ಕೆಲಸಕಾರ್ಯಗಳಲ್ಲಿ, ೭ ಅಥವಾ ೮ ಗಂಟೆಗಳವರೆಗೆ ಗೃಹಕಾರ್ಯದಲ್ಲಿ, ಒಟ್ಟು ೧೮ ಅಥವಾ ೧೯ ಗಂಟೆಗಳು ಗಾಣದ ಎತ್ತಿನಂತೆ ದುಡಿಯುತ್ತಿದ್ದರೂ, ಅನೇಕ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಅಂತಹ ಕೆಲವು ಸಮಸ್ಯೆಗಳೆಂದರೆ ಕಡಿಮೆ ವೇತನ, ನಿಕೃಷ್ಟ ಜೀವನ, ಲೈಂಗಿಕ ಕಿರುಕುಳ, ಕೆಲಸದ ತೀವ್ರತೆ,

ಅಸಂಘಟನೆ, ಜಾತಿನಿಂದನೆ, ಉದ್ಯೋಗಾವಕಾಶಗಳ ಕೊರತೆ ಮತ್ತು ಸರ್ಕಾರದ ಯೋಜನೆಗಳಿಂದ ವಂಚನೆ ಇತ್ಯಾದಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳಲ್ಲಿ ಕೆಲವೊಂದು ಮಾತ್ರ ಇಲ್ಲಿ ವಿವರಿಸಲಾಗಿದೆ.

೧. ವೇತನ ತಾರತಮ್ಯ

ಪುರುಷರಿಗೆ ಸಮಾನವಾಗಿ ಕೆಲಸ ಮಾಡಿದರು ಮಹಿಳೆಯರು ಪಡೆಯುವ ಕೂಲಿ ಪುರುಷರು ಪಡೆಯುವ ಕೂಲಿಯ ಅರ್ಧದಷ್ಟಿದೆ. ಪುರುಷ ಕಡಿಮೆ ಕೆಲಸ ಮಾಡಿ ಹೆಚ್ಚು ವೇತನಪಡೆದರೆ, ಮಹಿಳೆಯರು ಹೆಚ್ಚು ಕೆಲಸ ಮಾಡಿ ಕಡಿಮೆ ವೇತನ ಪಡೆಯುತ್ತಿದ್ದಾರೆ. ಕಾಫಿಯ ತೋಟಗಳಿಂದ ಕೂಡಿದ ವೀರಾಜಪೇಟೆ ತಾಲೂಕಿನಲ್ಲಿ ಕಾಫಿತೋಟದ ಕೆಲಸಕ್ಕೆ ಪುರುಷನಿಗೆ ದಿನಕ್ಕೆ ೧೫೦ರೂನಂತೆ ನೀಡಿದರೆ ಹೆಂಗಸರಿಗೆ ಕೇವಲ ೭೦ರೂ ನಿಂದ ೮೦ರೂಗಳನ್ನು ನೀಡಲಾಗುತ್ತಿದೆ. ಭಾರತದಲ್ಲಿ ೧೯೭೬ರಲ್ಲಿಯೇ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ "ಸಮಾನಕಾಯ್ದೆ" ಜಾರಿಗೆ ಬಂದರೂ ಕೂಡ ಮಹಿಳೆಯರಿಗೆ ಸಮಾನವೇತನ ನೀಡಲಾಗುತ್ತಿಲ್ಲ. ಅನಕ್ಷರಸ್ಥರು ಹಾಗೂ ಅಸಂಘಟಿತರಾದ ಈ ಮಹಿಳಾ ಕಾರ್ಮಿಕರಿಗೆ ಈ ಕಾಯಿದೆಯ ಅರಿವಿಲ್ಲದಿರುವುದು ದುರದೃಷ್ಟಕರ ವಿಷಯವಾಗಿದೆ.

೨. ಕೆಲಸದಲ್ಲಿ ಅಭದ್ರತೆ

ಕೆಲಸದ ಅಭದ್ರತೆಯು ಅಸಂಘಟಿತ ಬುಡಕಟ್ಟು ಮಹಿಳಾ ಕಾರ್ಮಿಕರ ಲಕ್ಷಣಗಳಲ್ಲಿ ಒಂದಾಗಿದೆ. ಬಹುತೇಕ ಕಾರ್ಮಿಕರು ಭೂರಹಿತ ಹಾಗು ಕೂಲಿ ಕಾರ್ಮಿಕರಾಗಿದ್ದೂ ಮಾಲೀಕರು ಅಥವಾ ಬಂಡವಾಳಶಾಹಿಗಳ ನೀತಿನಿರ್ಬಂಧಗಳಿಗೆ ಬದ್ಧರಾಗಿ ದುಡಿಯಬೇಕಾಗಿದೆ. ಒಂದು ವೇಳೆ ಮಾಲೀಕರು ಹಾಕಿದ ನಿಯಮಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಅವರು ದೈಹಿಕ ಹಿಂಸೆಗೆ ಗುರಿಯಾಗುವುದರ ಜೊತೆಗೆ ಕೆಲಸವನ್ನು ಸಹ ಕಳೆದುಕೊಳ್ಳಬೇಕಾಗುತ್ತದೆ. ಒಂದು ಹೊತ್ತಿನ ಊಟಕ್ಕೂ ಪರಿತಪಿಸುವ ಸ್ಥಿತಿಯಲ್ಲಿರುವ ಬುಡಕಟ್ಟು ಮಹಿಳೆಯರು ಅನಿವಾರ್ಯವಾಗಿ ಜಮೀನ್ದಾರರ ಶೋಷಣೆಯನ್ನು ಸಹಿಸಿಕೊಳ್ಳಬೇಕಾಗುತ್ತದೆ.

೩. ನಿಕೃಷ್ಟ ಜೀವನಮಟ್ಟ

ಸಾಮಾನ್ಯವಾಗಿ ಬಡತನ ರೇಖೆಗಿಂತ ಕೆಳಗಡೆ ಜೀವ ನಡೆಸುವ ಪರಿಶಿಷ್ಟವರ್ಗಕ್ಕೆ ಸೇರಿದ ಬುಡಕಟ್ಟು ಸಮುದಾಯಗಳು ಸಾಕ್ಷರತೆ, ಕುಡಿಯುವ ನೀರು, ಪೌಷ್ಟಿಕ ಆಹಾರ, ಆರೋಗ್ಯ, ನೈರ್ಮಲ್ಯ ಮತ್ತು ಉನ್ನತ ಆರ್ಥಿಕ ಸಾಮಾಜಿಕ ಸ್ಥಾನಮಾನದಿಂದ ವಂಚಿತರಾಗಿದ್ದಾರೆ. ಕೆಲವು ಪ್ರದೇಶಗಳಲ್ಲಿ ಬುಡಕಟ್ಟು ಸಮುದಾಯಗಳು ವಿದ್ಯುತ್‌ದೀಪವಿಲ್ಲದೆ ಗುಡಿಸಲುಗಳಲ್ಲಿ ವಾಸಮಾಡುತ್ತಿದ್ದಾರೆ.

೪. ಉದ್ಯೋಗಾವಕಾಶಗಳ ಕೊರತೆ

ಬುಡಕಟ್ಟು ಮಹಿಳೆಯರು ಸಂಘಟಿತವಲಯದ ಚಟುವಟಿಕೆಗಳ ಪರಿಚಯವಿಲ್ಲದಿರುವುದರಿಂದ

ಇವರು ಸಾಂಪ್ರದಾಯಿಕ ಚಟುವಟಿಕೆಯಲ್ಲಿ ಹೆಚ್ಚು ಪ್ರಾವೀಣ್ಯತೆಯನ್ನು ಹೊಂದಿದ್ದಾರೆ. ಆದ್ದರಿಂದ ಆಧುನಿಕ ಆರ್ಥಿಕ ಚಟುವಟಿಕೆಗಳಲ್ಲಿ ಹೆಚ್ಚು ಪ್ರಾವೀಣ್ಯತೆಯನ್ನು ಹೊಂದಿಲ್ಲ. ಹಾಗಾಗಿ ಇವರಿಗೆ ಹೊಂದಿಕೊಳ್ಳುವ ಉದ್ಯೋಗಾವಕಾಶಗಳ ಕೊರತೆ ಕಂಡುಬರುತ್ತಿದೆ.

೫. ಮೇಲ್ವರ್ಗದವರಿಂದ ಶೋಷಣೆ

ಸುಮಾರು ಶೇ.೮೦ರಷ್ಟು ಭೂಮಿ ಮೇಲ್ಜಾತಿಯವರ ಒಡೆತನದಲ್ಲಿದ್ದರೆ ಶೇ. ೨೦ರಷ್ಟು ಜಮೀನು ಮಾತ್ರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದವರಿಗೆ ಸೇರಿದೆ. ಹಾಗಾಗಿ ಇವರೆಲ್ಲಾ ಚಿಕ್ಕ ಹಿಡುವಳಿದಾರರಾಗಿದ್ದಾರೆ. ಈ ಬುಡಕಟ್ಟು ಮಹಿಳೆಯರು ಮೇಲ್ಜಾತಿಯವರ ಜಮೀನು, ತೋಟ, ಗಣಿಗಾರಿಕೆ, ಕಾರ್ಖಾನೆ ಮುಂತಾದವುಗಳಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಭೂ ಮಾಲೀಕರು ಮತ್ತು ಬಂಡವಾಳಶಾಹಿಗಳು ಈ ಮಹಿಳೆಯರನ್ನು ಕಡಿಮೆ ಕೂಲಿನೀತಿಯಡಿ ಹೆಚ್ಚು ಸಮಯ ದುಡಿಸಿಕೊಳ್ಳುತ್ತಿದ್ದಾರೆ.

ಭೂಮಾಲೀಕರ ಶೋಷಣೆಯ ವಿರುದ್ಧ ಧ್ವನಿ ಎತ್ತಿದರೆ ಅವರನ್ನು ಗ್ರಾಮದಿಂದ ಮತ್ತು ಅವರು ಎಸ್ಟೇಟ್‌ಗಳಿಂದ, ಗಣಿ ಪ್ರದೇಶಗಳಿಂದ, ಹೊರಹಾಕುವುದಾಗಿ ಭಯ ಹುಟ್ಟಿಸುತ್ತಾರೆ. ಇನ್ನು ಹಲವಾರು ಅಂಶಗಳಿಂದ ಮೇಲ್ವರ್ಗದವರಿಂದ ಶೋಷಣೆಯ ಒಳಗಾಗುತ್ತಿದ್ದಾರೆ.

೬. ಸರ್ಕಾರದ ಯೋಜನೆಗಳಿಂದ ವಂಚನೆ

ಪ್ರಸ್ತುತ ಬುಡಕಟ್ಟು ಮಹಿಳೆಯರನ್ನು ಪ್ರಬಲಗೊಳಿಸುವ ಉದ್ದೇಶದಿಂದ ಐ.ಟಿ.ಡಿ.ಪಿ. ಯೋಜನೆ ಮತ್ತು ಕರ್ನಾಟಕದ ಪರಿಶಿಷ್ಠವರ್ಗಗಳ ನಿರ್ದೇಶನಾಲಯ ಜಾರಿಗೆ ತಂದ ಹಲವಾರು ಯೋಜನೆಗಳು ಮಹಿಳೆಯರಿಗೆ ದೊರೆಯದೆ ದುರ್ಬಳಕೆಯಾಗುತ್ತಿವೆ. ಅವರ ಹೆಸರಿನಲ್ಲಿ ಬರುವಂತ ಹಣ ಸರ್ಕಾರಿ ಅಧಿಕಾರಿಗಳ ದುರಾಡಳಿದಿಂದ ಮಹಿಳೆಯರಿಗೆ ವಂಚಿಸಲಾಗುತ್ತಿದೆ. ಸರ್ಕಾರ ಹಾಕಿಕೊಂಡಿರುವ ಯೋಜನೆಗಳೆಲ್ಲಾ ಸರಿಯಾದ ಗುರಿ ತಲುಪುತ್ತಿಲ್ಲ. ಆದ್ದರಿಂದ ಬುಡಕಟ್ಟು ಮಹಿಳೆಯರು ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿ ಇನ್ನೂ ಕೂಡ ಶೋಷಿತರಾಗಿಯೇ ಉಳಿದುಕೊಂಡಿದ್ದಾರೆ. ಪ್ರಾಚೀನ ಕಾಲದಿಂದಲೂ ಬುಡಕಟ್ಟು ಮಹಿಳೆಯರು ಶೋಷಣೆಯನ್ನು ಅನುಭವಿಸಿ ಮತ್ತು ಮೂಲಭೂತ ಸೌಕರ್ಯದಿಂದ ವಂಚಿತರಾಗಿ, ಇಂದು ಕೂಡ ಅದೇ ಸ್ಥಿತಿಯಲ್ಲಿ ಮುಂದುವರಿಯುತ್ತಿದ್ದಾರೆ. ಅವರು ಕೂಡ ಸಾಮಾನ್ಯ ಮಹಿಳೆಯರಂತೆ ಆಧುನಿಕ ಸಮಾಜಕ್ಕೆ ಹೊಂದಿಕೊಂಡು ಜೀವನಸಾಗಿಸಲು ಅವರಿಗೆ ಕೃಷಿಯೇತರ ಉದ್ಯೋಗಗಳ ಕಡೆ ಅವರನ್ನು ಕೊಂಡೊಯ್ದು ಅವರನ್ನು ಗೃಹಕೈಗಾರಿಕೆಗಳಾದ ಅಗರಭತ್ತಿ, ಸಂಡಿಗೆ, ಅಪ್ಪಳ ತಯಾರಿಕೆ, ಬುಟ್ಟಿ ಹೆಣೆಯುವುದು, ಕರಕುಶಲ ತರಬೇತಿ ಮತ್ತು ಡೈರಿ ಉದ್ಯಮ ಮತ್ತು ಕೃಷಿ ಉದ್ಯೋಗ ಮಾಡಲು ತರಬೇತಿ ನೀಡಲು, ಸರ್ಕಾರದ ಅಭಿವೃದ್ಧಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಸೂಕ್ತ ಮಾರ್ಗದರ್ಶನದ ಮೂಲಕ ಅವರ ಉದ್ಯೋಗವನ್ನು ಕಲ್ಪಿಸಿಕೊಡುವಂತಾಗಬೇಕು. ಮತ್ತು ಬುಡಕಟ್ಟು ಸಮುದಾಯಗಳು ಮತ್ತು ಮಹಿಳೆಯರು ಉತ್ಪಾದಿಸಿದ ವಸ್ತುಗಳನ್ನು ನೇರವಾಗಿ ಸರ್ಕಾರವೇ ಖರೀದಿಸಿ ಸೂಕ್ತ ಮಾರುಕಟ್ಟೆಯನ್ನು ಒದಗಿಸಬೇಕು. ಕೆಲವು

ಸಮುದಾಯಗಳು ರೂಡಿಸಿಕೊಂಡು ಬಂದ ಕರಕುಶಲ ಕಲೆಯನ್ನು ಪೋಷಿಸಿ ಬೆಳೆಸಲು ಸರ್ಕಾರ ಹಣಕಾಸಿನ ನೆರವು ನೀಡಬೇಕು.

ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿರುವ ಬುಡಕಟ್ಟು ಜನಾಂಗದವರೆಲ್ಲರೂ ಅಸಂಘಟಿತ ವಲಯದಲ್ಲಿ ಕಂಡುಬರುತ್ತಾರೆ. ಕಾರಣ ಅವರಲ್ಲಿ ಉತ್ತಮ ಶಿಕ್ಷಣವಿಲ್ಲದಿರುವುದು ತಂತ್ರಜ್ಞಾನದ ಮಟ್ಟಕ್ಕೆ ಅವರ ಜ್ಞಾನವನ್ನು ಕೊಂಡೊಯ್ಯದಿರುವುದು. ಅವರ ಬುದ್ಧಿವಂತಿಕೆಯ ಸಾಮಾರ್ಥ್ಯವನ್ನು ಅಭಿವ್ಯಕ್ತಪಡಿಸಿಲ್ಲದಿರುವುದು ಕೂಡ ಕಾರಣವಾಗಿದೆ. ಆದ್ದರಿಂದ ಬುಡಕಟ್ಟು ಮಹಿಳೆಯರಿಗೆ ಸಂಬಂಧಿಸಿದ ಕಾರ್ಯಚಟುವಟಿಕೆಯನ್ನು ಉತ್ತಮವಾಗಿ ಜಾರಿಗೆ ತರಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಬೇಕು. ಸರ್ಕಾರದ ವತಿಯಿಂದ ಸಾಮಾಜಿಕ ಭದ್ರತೆಯನ್ನು ನೀಡಿ ಜಾಗತೀಕರಣ ಹಾಗೂ ಖಾಸಗೀಕರಣದ ಸವಾಲುಗಳನ್ನು ಎದುರಿಸುವಂತೆ ಮಹಿಳೆಯರನ್ನು ಸನ್ನದ್ಧರನ್ನಾಗಿ ಮಾಡಬೇಕಾಗಿದೆ. ಮಹಿಳೆಯರು ಕಾರ್ಮಿಕರಾಗಿ ಸ್ವಯಂ ಉದ್ಯೋಗಿಗಳಾಗಿ ಸಂಘಟಿತರಾಗುವುದು ಇತ್ಯಾದಿ ಹೀಗೆ ಮಹಿಳೆಯರ ಪರಿಸ್ಥಿತಿಯನ್ನು ಸುಧಾರಿಸಿ ಒಂದು ಉತ್ತಮ ಹಂತಕ್ಕೆ ತರುವುದರಿಂದ ಅವರು ಹೆಚ್ಚು ಹೆಚ್ಚು ಆರ್ಥಿಕ ಚಟುವಟಿಕೆಯನ್ನು ಕೈಗೊಂಡು ಹೆಚ್ಚು ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

ಟಿಪ್ಪಣಿಗಳು

೧. ಡಾ.ಅಂಜನಪ್ಪ ಬಿ.ಹೆಚ್. ಮಹಿಳೆ ಮತ್ತು ದುಡಿಮೆ, ಸೃಷ್ಟೀ ಪಬ್ಲಿಕೇಷನ್ ನಾಗಶೆಟ್ಟಿಹಳ್ಳಿ, ಬೆಂಗಳೂರು. ಪುಟ. ೯೪

೨. ಡಾ.ಕೆ.ಎಂ.ಮೇತ್ರಿ, (೨೦೦೨), ಬುಡಕಟ್ಟು ಕುಲ ಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ ಸಂಖ್ಯೆ-೨

೩. ಅದೇ ಪುಟ-೬

೪. ಡಾ.ಹಿ.ಚಿ.ಬೋರಲಿಂಗಯ್ಯ, (೧೯೫೫), ಕಾಡು ಮತ್ತು ಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ. ಪುಟ ಸಂಖ್ಯೆ-೨೯

೫. ಅದೇ ಪುಟ-೨೯

೬. ಕರ್ನಾಟಕ ಸರ್ಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶವಾಲಯ, (೨೦೦೬), 'ಕೃಷಿ ಭವನ' ೨ನೇ ಮಹಡಿ, ಹಡ್ಸನ್‌ವೃತ್ತ ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೧. ಪುಟ ಸಂಖ್ಯೆ-೨೪

೭. ಟಿ.ಆರ್. ಚಂದ್ರಶೇಖರ್, (೨೦೦೧), ಆರ್ಥಿಕತೆ ಅಭಿವೃದ್ಧಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟಸಂಖ್ಯೆ -೯.

೮. ಅದೇ ಪುಟ ಸಂಖ್ಯೆ-೧೪

೯. ಡಾ.ಹೇಮಲತಾ ಕೆ.ಎಂ., ಮಹಿಳಾ ಅಧ್ಯಯನ ಸಂಚಿಕೆ-೩. ಪಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು-೪. ಪುಟ-೩೯

೧೦. ಅದೇ ಪುಟ ಸಂಖ್ಯೆ-೩೫

ಅಧ್ಯಾಯ ೪

ಬುಡಕಟ್ಟು ಮಹಿಳೆ ಮತ್ತು ಸ್ವಸಹಾಯ ಗುಂಪುಗಳು

ಸ್ವಸಹಾಯ ಗುಂಪುಗಳ ಪರಿಚಯ

ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ಸ್ವಸಹಾಯ ಸಂಘಗಳ ಕೊಡುಗೆ

ಬುಡಕಟ್ಟು ಮಹಿಳೆಯರನ್ನು ಸದೃಡಗೊಳಿಸುವಿಕೆಯಲ್ಲಿ ಸ್ವಸಹಾಯ ಸಂಘಗಳ ಪಾತ್ರ

ಸ್ವಸಹಾಯ ಸಂಘಗಳಲ್ಲಿ ಬುಡಕಟ್ಟು ಮಹಿಳೆಯರ ಸಹಭಾಗಿತ್ವದ ಮಹತ್ವ

ಬುಡಕಟ್ಟು ಮಹಿಳಾ ಸಬಲೀಕರಣ ಹಾಗೂ ಸ್ವಸಹಾಯ ಗುಂಪುಗಳು

ಗ್ರಾಮೀಣ ಮಹಿಳೆ ಮತ್ತು ಸ್ವಸಹಾಯ ಗುಂಪುಗಳು

ಸ್ವಸಹಾಯ ಗುಂಪುಗಳು ಮತ್ತು ಸಣ್ಣ ಪ್ರಮಾಣದ ಸಾಲ ಸೌಲಭ್ಯಗಳು

ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಸದಸ್ಯರ ಉಳಿತಾಯ

ಬುಡಕಟ್ಟು ಮಹಿಳಾ ಸ್ವಸಹಾಯ ಸಂಘದ ಸಾಲ ಯೋಜನೆ

ಕಲ್ಯಾಣವಾದಿ ಕಾರ್ಯಕ್ರಮಗಳು

ಅಮರ್ತ್ಯಸೇನ್‌ರವರ ವಿಚಾರಗಳು

ಅಧ್ಯಾಯ ೪

ಬುಡಕಟ್ಟು ಮಹಿಳೆ ಮತ್ತು ಸ್ವಸಹಾಯ ಗುಂಪುಗಳು

ಒಂದು ದೇಶ ಅಭಿವೃದ್ಧಿಯು ಸಾಮಾನ್ಯ ಮಹಿಳೆಯರ ಬುಡಕಟ್ಟು ಮಹಿಳೆಯರ ಮತ್ತು ಗ್ರಾಮೀಣ ಪ್ರದೇಶದ ಮಹಿಳೆಯರ ಬದುಕಿನ ಸ್ಥಿತಿಗಳನ್ನು ಉತ್ತಮ ಪಡಿಸಿದೆಯೋ ಅಥವಾ ಹಾನಿಗೊಳಪಡಿಸಿದೆಯೋ ಎಂಬುದರ ಬಗ್ಗೆ ಭಾರತದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ತೀವ್ರರೀತಿಯ ಚರ್ಚೆ ೧೯೭೦ರ ದಶಕದಲ್ಲಿ ಪ್ರಾರಂಭವಾಯಿತು. "ಅಭಿವೃದ್ಧಿ ಪ್ರಕ್ರಿಯೆಯು ಮಹಿಳೆಯರ ಬದುಕಿನ ಸ್ಥಿತಿಗತಿಯ ಮೇಲೆ ಹಾನಿಯನ್ನುಂಟು ಮಾಡುವಲ್ಲಿ ಕಾರಣವಾಗಿರುವ ಮತ್ತೊಂದು ಬಹುಮುಖ್ಯ ಸಂಗತಿ ಎಂದರೆ ಪುರುಷಶಾಹಿ ಸ್ವರೂಪವಾಗಿದೆ. ಮಹಿಳೆಯನ್ನು ಸಾಮಾಜಿಕ ಘಟಕವೆಂದು, ಅಭಿವೃದ್ಧಿಯ ನಿಯೋಗಿಗಳೆಂದು, ಅಭಿವೃದ್ಧಿಯು ಸಾಧ್ಯವೆಂದು ಪರಿಗಣಿಸುವುದರಲ್ಲಿನ ವೈಫಲ್ಯವೇ ಅಬಿವೃದ್ಧಿಯನ್ನು ಮಹಿಳೆಯರ ವಿರೋಧಿ ಸಂಗತಿಯನ್ನಾಗಿ ಮಾಡಿಬಿಟ್ಟಿವೆ."[೧]

ಇಂದು "ಬುಡಕಟ್ಟು ಮಹಿಳೆಯರನ್ನು ಸಾಮಾಜಿಕ ಮತ್ತು ಆರ್ಥಿಕ ಘಟಕವಾಗಿ ನೋಡುವ ಪರಿ ರೂಢಿಗೆ ಬಂದಿದೆ. ಸಮತಾವಾದಿ ಆರ್ಥಿಕ ವ್ಯವಸ್ಥೆಯು ನಾಶವಾಗಿ ಬಂಡವಾಳಶಾಹಿ ಅರ್ಥವ್ಯವಸ್ಥೆ ರೂಪುಗೊಳ್ಳುವ, ವಿಚಾರವಾದಿ ಪ್ರಕ್ರಿಯೆಯನ್ನು ಕೈಗಾರಿಕೀಕರಣದಲ್ಲಿ ನಗರೀಕರಣದಲ್ಲಿ, ಆಧುನೀಕರಣದಲ್ಲಿ, ಗುರುತಿಸಲಾಗಿದೆ"[೨] ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಅಭಿವೃದ್ಧಿಯ ದೃಷ್ಠಿಯಿಂದ ಅತ್ಯಂತ ಕೆಳಮಟ್ಟದಲ್ಲಿರುವ, ನಿಕೃಷ್ಟವಾಗಿರುವ, ವರ್ಗವೆಂದರೆ ಪರಿಶಿಷ್ಟಜಾತಿ, ಪರಿಶಿಷ್ಟವರ್ಗದ ಮಹಿಳೆಯರು. ಇಲ್ಲಿ ಅಭಿವೃದ್ಧಿಯನ್ನು ಈ ಮಹಿಳೆಯ ನೆಲೆಯಿಂದ ಪರಿಭಾವಿಸಿಕೊಳ್ಳಲಾಗಿದೆ.

ದೇಶದಲ್ಲಿ ಪರಿಶಿಷ್ಟ ಮಹಿಳೆಯರ ಬದುಕು ಅಭಿವೃದ್ಧಿಯ ಎಲ್ಲಾ ಹಿತಾಶಕ್ತಿಗಳನ್ನು ಪ್ರತಿನಿಧಿಸುತ್ತದೆ. ಪರಿಶಿಷ್ಠ ಮಹಿಳೆಯರ ಬದುಕು ಸಮಾಜದಲ್ಲಿ ಅಂಚಿನಲ್ಲಿರುವ ಎಲ್ಲಾ ವರ್ಗಗಳ ಬದುಕನ್ನು ಪ್ರತಿನಿಧಿಸುತ್ತವೆ. ನೈಲಾ ಕಬೀರ್ ಹೇಳುವಂತೆ "ಜಗತ್ತಿನಲ್ಲಿ ನಿಕೃಷ್ಟಕರ ಮತ್ತು ವಂಚಿತರ ಬದುಕನ್ನು ರಾಚನಿಕವಾಗಿ ಬದಲಾದಾಗ ಮಾತ್ರ ಅಭಿವೃದ್ಧಿಗೆ ಸಮಾನತೆಗೆ ಒಂದು ಅರ್ಥ ಬರುವುದು ಸಾಧ್ಯ".[೩] ಅಭಿವೃದ್ಧಿಯನ್ನು ಉದ್ದೇಶವನ್ನಾಗಿ ಮಾಡಿಕೊಂಡು ಎಲ್ಲಾ ನೊಂದ ಮಹಿಳೆಯರು ತನ್ನ ಆಧುನಿಕ ಕಾಲದಲ್ಲಿ ಸ್ವಾವಲಂಬಿಗಳಾಗಿ ಬದುಕು ಪ್ರಾರಂಭಿಸಿದ್ದಾರೆ.

ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದರಿಂದ ಸಮಾಜಕ್ಕೆ ತೀವ್ರಹಾನಿಯಾಗಿದೆ. ಆದುರಿಂದ ಮಹಿಳೆಯರ

ಜೀವನ ಮಟ್ಟ ಕೀಳಾಗಿದೆ ಎಂದು ಒಂದು ಕಾಲಘಟ್ಟದಲ್ಲಿ ಹೇಳಲಾಗುತ್ತಿತ್ತು. ಆದರೆ ಹಾನಿಯನ್ನು ಕುರಿತ ಚರ್ಚೆ ಬದಲಾವಣೆ ಆಗಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ತೀವ್ರವಾಗಿ ತೊಡಗಿಸಿಕೊಳ್ಳದೆ ಇರುವುದರಿಂದ ಹಾನಿಯಾಗಿರುವುದು "ಅಭಿವೃದ್ಧಿಗೆ ವಿನಃ ಮಹಿಳೆಯರಿಗಲ್ಲ" ಎಂದು ವಾದಿಸಲಾಗುತ್ತಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟಿರುವ ಮಹಿಳೆಯರ ದುಡಿಮೆ ಕರ್ತೃತ್ವಶಕ್ತಿ ಅನಾವಶ್ಯಕವಾಗಿ ಪೋಲಾಗುತ್ತಿದೆ. ಜಡವಾಗಿ ಬಿದ್ದಿದ್ದೆ ಅದರ ಹಾನಿಯು ಅಭಿವೃದ್ಧಿ ಮತ್ತು ಆರ್ಥಿಕತೆಗೆ ತಟ್ಟುತ್ತದೆ. ಮಹಿಳೆಯರಿಗೆ ಅಭಿವೃದ್ಧಿ ಬೇಕು ಎಂಬ ಕಾಲ ಹೋಗಿ ಇಂದು ಅಭಿವೃದ್ಧಿಗೆ ಮಹಿಳೆಯರು ಬೇಕು ಎನ್ನುವ ಕಾಲ ಬಂದಿದೆ"[೪]

ಭಾರತ ದೇಶದಲ್ಲಿ ಮಹಿಳೆಯರು ಅದರಲ್ಲೂ ಈ ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರಗಳು ಹಾಗು ಅಂತರಾಷ್ಟ್ರೀಯ ಸಂಸ್ಥೆಗಳು, ಸ್ವಯಂಸೇವಾಸಂಸ್ಥೆಗಳು ಮಹಿಳೆಯರ ದೈನಂದಿನ ಹಿತಾಶಕ್ತಿಗಳನ್ನು ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸುವಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು.

"ಮಹಿಳೆಯರ ಊಟ ವಸತಿ, ವಸ್ತ್ರ, ಮದುವೆ, ಮಕ್ಕಳು, ಉದ್ಯೋಗ ಮುಂತಾದ ಸ್ಥಿತಿಗತಿಗಳಿಗೆ ಅಥವಾ ದೈನಂದಿನ ಹಿತಾಶಕ್ತಿಗಳಿಗೆ ಸಂಬಂಧಪಟ್ಟಿವೆ. ಸರ್ಕಾರ ಮತ್ತು ಅವು ಜಾರಿಗೊಳಿಸುವ ಮಹಿಳೆಯರ ಅಭಿವೃದ್ಧಿಯ ಕಾರ್ಯಕ್ರಮಗಳು ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ದಿಶೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಿರುತ್ತವೆ"[೫]

ನಮ್ಮ ದೇಶದಲ್ಲಿ ಮಹಿಳೆಯರು ಅದರಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ, ಹಿಂದುಳಿದವರಿಗೆ ಅನೇಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರವು ಯೋಜನೆಗಳ ಮೂಲಕ ನಿರ್ಧರಿಸಿತು. "ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು, ಕಲ್ಯಾಣ ರಾಜ್ಯ ಹೊಂದುವುದನ್ನು ಸ್ಥಾಪಿಸುವ ಘನ ಉದ್ದೇಶವನ್ನು ಹೊಂದಿದೆ"[೬]. ಇದರಲ್ಲಿ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು ಹಲವಾರು ಯೋಜನೆಗಳ ಮುಖಾಂತರ ಬುಡಕಟ್ಟು ಮಹಿಳೆಯರ ಸ್ಥಿತಿಗತಿಗಳನ್ನು ಹಾಗು ಅವರ ಅಭಿವೃದ್ಧಿಗೆ ಸೂಕ್ತ ಸಲಹೆ ನೀಡಲು ಸರ್ಕಾರ ಮಹಿಳೆಯರು ಅತ್ಯಂತ ಕ್ರಿಯಾಶೀಲರಾಗಿ ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳುವಂತೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

ದೇಶದ ಅಭಿವೃದ್ಧಿಗೆ ಮಹಿಳೆಯರ ಉತ್ಪಾದನಾ ಸಾಮಾರ್ಥ್ಯವನ್ನು ಉತ್ತಮಪಡಿಸಬೇಕು ಎಂಬ ತಿಳುವಳಿಕೆ ಉಂಟಾದುದು ತುಂಬಾ ಮಹತ್ವದ ಸಂಗತಿಯಾಗಿದೆ. ನಂತರ ಮಹಿಳಾ ಅಭಿವೃದ್ಧಿ ಯೋಜನೆಯಡಿಯಲ್ಲಿ ಸ್ವಶಕ್ತಿಯೋಜನೆಯಲ್ಲಿ ಮಹಿಳೆಯರನ್ನು ತೊಡಗಿಸಿಕೊಂಡು ಅವರು ಆಧುನಿಕ ಸಮಾಜದಲ್ಲಿ ತಾವು ಆರ್ಥಿಕವಾಗಿ, ಸಾಮಾಜಿಕವಾಗಿ, ಹಾಗೂ ರಾಜಕೀಯವಾಗಿ ಸ್ವತಂತ್ರ ಮತ್ತು ಸ್ವಾವಲಂಬಿಗಳಾಗಿ ಬದುಕನ್ನು ಸಿದ್ಧಪಡಿಸಿಕೊಂಡಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಹಲವಾರು ಸ್ವ ಸಹಾಯ ಸಂಘಗಳನ್ನು ಸ್ಥಾಪಿಸಿಕೊಂಡು ಸ್ವಯಂ ಉದ್ಯೋಗ, ವ್ಯಾಪಾರ ಮತ್ತು ಕೂಲಿಗಳನ್ನು

ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಾ ಸಂಘಕ್ಕೆ ಸ್ವಲ್ಪ ಹಣವನ್ನು ಸೇರಿಸಿಕೊಂಡು ಉತ್ತಮರೀತಿಯಲ್ಲಿ ಬದುಕು ಸಾಗಿಸುತ್ತಿರುವುದು ಕಂಡುಬರುತ್ತದೆ.

ಒಂದು ಕಾಲದಲ್ಲಿ "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಸಂಪೂರ್ಣವಾಗಿ ವಿಫಲಗೊಂಡಿವೆ"[1] ಎಂಬ ವಾದವಿತ್ತು. ಆದರೆ ೨೦ನೆಯ ಶತಮಾನದ ಅಂತಿಮಕಾಲದಲ್ಲಿ ಮಹಿಳೆಯರು ಹಲವಾರು ರಂಗಗಳಲ್ಲಿ ಪ್ರವೇಶಿಸಿ ತಂತ್ರಜ್ಞಾನ ಇನ್ನು ಅನೇಕ ಕಾಲ ಸರಣಿಯಲ್ಲಿ ಅಭಿವೃದ್ಧಿಯ ಯೋಜನೆಯನ್ನು ರೂಪಿಸಿಕೊಂಡು ಮುಂದುವರೆಯುತ್ತಿದ್ದಾರೆ. "ಇಂದಿಗೂ ಮಹಿಳೆಯರ ಅಭಿವೃದ್ಧಿಯನ್ನು ಸರ್ಕಾರ ಮತ್ತು ಪಂಚವಾರ್ಷಿಕ ಯೋಜನೆಗಳು, ಕಲ್ಯಾಣವಾದಿ ನೆಲೆಯಲ್ಲಿ ನೋಡುತ್ತಿದ್ದಾರೆಯೋ ವಿನಾಃ ಸಂಘರ್ಷವಾದಿ ನೆಲೆಯಲ್ಲಿ ಸಮಾನತೆ ನೆಲೆಯಲ್ಲಿ, ಸಾಮಾಜಿಕ ನ್ಯಾಯದ ನೆಲೆಯಲ್ಲಿ ನೋಡುತ್ತಿಲ್ಲ"[6].

ನಂತರ ಮಹಿಳೆಯರ ಅಭಿವೃದ್ಧಿ ಎಂಬುದು ಒಂದು ಪ್ರತ್ಯೇಕ ಕ್ರಿಯೆಯಾಗಿ ನೋಡುವ ಪರಿ ಇತ್ತೀಚೆಗೆ ಪ್ರಾರಂಭವಾಗಿದೆ. ಅಭಿವೃದ್ಧಿಯು ಸಮಾಜದ ಎಲ್ಲಾ ವರ್ಗಗಳ ಹಿತಾಶಕ್ತಿಯನ್ನು ಪೂರೈಸುತ್ತದೆ ಎಂಬ ನಂಬಿಕೆಯು ಸವಾಲನ್ನು ಎದುರಿಸುತ್ತಿದೆ. ಆದರೆ ಇಂದು ಈ ರೀತಿ ಮಹಿಳೆಯರು ಅದರಲ್ಲೂ ಬುಡಕಟ್ಟು ಮಹಿಳೆಯರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಉಪಯೋಗಿಸಿಕೊಂಡು ಇದರ ಉಪಯೋಗವನ್ನು ಪಡೆದುಕೊಳ್ಳುವಲ್ಲಿ ಸಫಲರಾಗಿದ್ದಾರೆ. ಹಿಂದಿನ ಕಾಲಘಟ್ಟದಲ್ಲಿ ಮಹಿಳೆಯರ್ಉತ್ಪಾದಿಸಿದ ಅನುಭೋಗಿ ವಸ್ತುಗಳು, ಇವರ ಬದುಕು ಒಂದು ಕುಟುಂಬಕ್ಕೆ ಮೀಸಲು ಮತ್ತು ಅವರಿಗೆ ತಮ್ಮದೆಯಾದ ಹಿತಾಶಕ್ತಿಗಳು ಇರುವುದಿಲ್ಲ, ಅವಳು ಅಬಲೆ ಎಂದು ಸಮಾಜದಲ್ಲಿ ನಂಬಿಕೆ ಇತ್ತು. ಆದರೆ, ಇಂದು ಇದು ಸಂಪೂರ್ಣವಾಗಿ ಬದಲಾಗಿ ಆರ್ಥಿಕ ಚಟುವಟಿಕೆಯಲ್ಲಿ ಮತ್ತು ಉತ್ಪಾದನೆಯಲ್ಲಿ ಪುರುಷರಿಗಿಂತ ವಿಭಿನ್ನ ರೀತಿಯಲ್ಲಿ ತೊಡಗಿಕೊಂಡಿದ್ದಾಳೆ.

ಸ್ವಸಹಾಯ ಸಂಘಗಳ ಪರಿಚಯ

ಕೃಷಿ ಕಾರ್ಮಿಕರ ಪ್ರಮಾಣವು ಅಧಿಕವಾಗಿರುವ ದೇಶ ಮತ್ತು ಪ್ರದೇಶಗಳಲ್ಲಿ ಜಮೀನ್ದಾರಿ ಪಾಳೇಗಾರಿಕೆಯು ಕ್ರಿಯಾಶೀಲವಾಗಿರುವುದನ್ನು ನೋಡಬಹುದು. ಜಮೀನ್ದಾರಿ ಪಾಳೆಗಾರಿಕೆಯು ಅಸ್ತಿತ್ವದಲ್ಲಿರುವ ಪ್ರದೇಶಗಳಲ್ಲಿ ಮಹಿಳೆಯ ಬದುಕು ತೀವ್ರತರವಾದ ಶೋಷಣೆಗೆ, ಲೈಂಗಿಕ ಹಿಂಸೆಗೆ ಒಳಗಾಗಿರುವುದನ್ನು ಅನೇಕ ಅಧ್ಯಯನಗಳಿಂದ ತಿಳಿಯಲಾಗಿದೆ. ಕೃಷಿ ಕಾರ್ಮಿಕರಲ್ಲಿ ವ್ಯಾಪಕವಾಗಿ ಕಂಡುಬರುವ ಸಂಗತಿಯೆಂದರೆ ಜೀತಪದ್ಧತಿ. ಈ ಜೀತ ಪದ್ಧತಿಗೆ ಅನೇಕ ಕಾರಣಗಳಿವೆ. ಹೊಟ್ಟೆ, ಬಟ್ಟೆ, ಆರ್ಥಿಕತೆಯು ಕೃಷಿಕರನ್ನು ಜೀತಕ್ಕೆದೂಡುವ ಸಾಧ್ಯತೆ ಇದೆ. ಅಲ್ಪಸ್ವಲ್ಪ ಭೂ ಹಿಡುವಳಿಯಿಂದ ಹೆಚ್ಚಿನ ವರಮಾನ ಇರುವುದಿಲ್ಲ. ಅರಣ್ಯಗಳಿಂದ ದೊರೆಯುವ ಉತ್ಪನ್ನಗಳು ಕಡಿಮೆಯಾಗಿರುವುದರಿಂದ, ವಿಪರೀತ ಗೇಣಿ, ಸಾಲ, ಮುಂತಾದವು ಜೀತಪದ್ಧತಿಗೆ ಕಾರಣಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರ ಬದುಕು ಹೆಚ್ಚು ಜರ್ಜರಿತವಾಗುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿರುವ ಬುಡಕಟು ಮಹಿಳೆಯರು ಮತ್ತು ಇತರೇ ಹಿಂದುಳಿದ ಕಡು ಬಡತನದ ಮಹಿಳೆಯರು, ಬಂಡವಾಳಶಾಹಿಗಳು, ಭೂಮಾಲೀಕರು ಲೇವಾ-ದೇವಿದಾರರಿಂದ ಆರ್ಥಿಕ ಶೋಷಣೆಯಿಂದ ಮುಕ್ತಗೊಳಿಸಿ, ಸುಲಭ ಬಡ್ಡಿದರದಲ್ಲಿ ಆರ್ಥಿಕ ನೆರವನ್ನು ನೀಡಿ ಅವರ ಸರ್ವತೋಮುಖ ಪ್ರಗತಿಗೆ ನೆರವಾಗುವ ದೃಷ್ಠಿಯಿಂದ ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಹಿಂದೂಳಿದವರಿಗೆ ಮಹಿಳಾ ಅಭಿವೃದ್ಧಿಯ ಕಾರ್ಯಕ್ರಮದ ಮೂಲಕ ಸ್ವ ಶಕ್ತಿ ಯೋಜನೆಯಡಿಯಲ್ಲಿ ಸ್ವ ಸಹಾಯ ಸಂಘಗಳನ್ನು ಸ್ಥಾಪಿಸಿದೆ. ಈ ಸ್ವಸಹಾಯ ಗುಂಪುಗಳನ್ನು ರಚಿಸಿರುವ ಕಾರಣ ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೇಳುವುದಾದರೆ ಹಿಂದುಳಿದ ಮಹಿಳೆಯರೆಲ್ಲರೂ ಒಟ್ಟಾಗಿ ಸೇರಿ ಸಂಘಟಿತರಾಗಿದ್ದಾರೆ ಎಂದು ಹೇಳಬಹುದು.

ಭಾರತ ಗ್ರಾಮೀಣ ಪ್ರದೇಶಗಳಿಂದ ಕೂಡಿದ ಬೃಹತ್‌ದೇಶವಾಗಿದೆ. ಈ ದೇಶದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವವರ ಸಂಖ್ಯೆ ಸುಮಾರು ೭೦ ಭಾಗವಾಗಿದೆ. ಇದರಲ್ಲಿ ಬಹುತೇಕ ಜನರು ಬಡತನದಲ್ಲಿ ಬುದುಕುತ್ತಿದ್ದಾರೆ. ದೇಶಕ್ಕೆ ಸ್ವಾತಂತ್ರ ಬಂದು ೬೨ ವರ್ಷಗಳಾದರು ಅವರಿಗೆ ಯಾವುದೇ ವಿಧವಾದ ಊಟ, ವಸತಿ, ಆರೋಗ್ಯ ಉದ್ಯೋಗಗಳನ್ನು ಕಲ್ಪಿಸಲಾಗಿಲ್ಲ. ಇದಕ್ಕೆ ಕಾರಣ, ಈ ಬಗ್ಗೆ ಚಿಂತಿಸಿ ಪರಿಹಾರ ಕಂಡುಕೊಳ್ಳುವ ಅವರದೆ ಆದ ಸಂಘಟನೆಗಳು ಇಲ್ಲವಾಗಿವೆ. ಅದರಲ್ಲಿಯು ಬುಡಕಟ್ಟು ಮಹಿಳೆಯರು ಸಂಘಟಿತರಾದರೆ ಈ ಸಮಸ್ಯೆಗಳು ತಕ್ಕಮಟ್ಟಿಗೆ ಪರಿಹರಿಸಲು ಸಾಧ್ಯವಾದೀತು. ಈ ನಿಟ್ಟಿನಲ್ಲಿ ಬಡ ಜನರನ್ನು ಸಂಘಟಿಸಿ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸ್ವಸಹಾಯ ಸಂಘಗಳು ಮಹತ್ತರ ಪಾತ್ರವಹಿಸುತ್ತಿವೆ.

ಸ್ವಸಹಾಯ ಗುಂಪುಗಳು

ಈ ಸ್ತ್ರೀಶಕ್ತಿ ಸಂಘ ಅಥವಾ ಸ್ವಸಹಾಯ ಸಂಘವೆಂದರೇ ಸಮಾನ ಆಸಕ್ತಿ ಇರುವ ೧೦ ರಿಂದ ೨೦ ಬಡ ಪರಿಶಿಷ್ಠ ಮಹಿಳೆಯರು ತಮ್ಮ ಸಾಮಾಜಿಕ ಆರ್ಥಿಕಾಭಿವೃದ್ಧಿಗಾಗಿ ಹಾಗೂ ಸಮಸ್ಯೆಗಳ ಪರಿಹಾರಕ್ಕಾಗಿ ಒಂದು ನಿರ್ದಿಷ್ಠ ಜಾಗ ಮತ್ತು ನಿರ್ದಿಷ್ಠ ವೇಳೆಗೆ ಸೇರಿ ಸಹಭಾಗಿತ್ವದ ಮೂಲಕ ಚರ್ಚಿಸಿ ಸರಿಯಾದ ತೀರ್ಮಾನಗಳ ಮೂಲಕ ತಮ್ಮದೇ ಆದ ಸ್ವಂತ ಬಂಡವಾಳ ಹೂಡಿ ಪರಸ್ಪರ ಸಹಾಯ ಮಾಡಿಕೊಳ್ಳುವ ಗುಂಪನ್ನು ಸ್ವಸಹಾಯ ಸಂಘ ಎಂದು ಕರೆಯಬಹುದು. ನಂತರ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯುಳ್ಳ ಬಡ ಕುಟುಂಬಗಳ ಮಹಿಳೆಯರ ಒಂದು ಸಣ್ಣ ಸಂಘಟನೆಗೆ ಸ್ವ ಸಹಾಯ ಸಂಘ ಎನ್ನಬಹುದು.

ಸ್ವಯಂ ಸೇವಾ ಸಂಸ್ಥೆಗಳು, ಮೈರಾಡದವರು, ಬುಡಕಟ್ಟು ಸಮುದಾಯಗಳು ಸ್ವಸಹಾಯ ಗುಂಪುಗಳ ರಚನೆ

ಅ. ಮಹಿಳಾ ಸ್ವಸಹಾಯ ಸಂಘಗಳು

ಆ. ಪುರುಷರದೆ ಸ್ವಸಹಾಯ ಸಂಘಗಳು

೩. ಮಹಿಳೆ ಹಾಗೂ ಪುರುಷರು ಸೇರಿ ರಚಿಸಿಕೊಂಡಿರುವ ಮಿಶ್ರ ಸ್ವಸಹಾಯ ಸಂಘಗಳು ಎಂದು ವಿವರಿಸಿದ್ದಾರೆ.

ಪರಸ್ಪರ ಸಹಕಾರ ಮತ್ತು ವಿಶ್ವಾಸದ ಮೇಲೆ ಉಳಿತಾಯ ಮನೋಭಾವದಿಂದ ಸಮಾನ ಆಸಕ್ತಿ ಹೊಂದಿರುವ ಜನರು ಒಮ್ಮತದಿಂದ ತಮ್ಮ ಒಳಿತಿಗಾಗಿ ರಚಿಸಿಕೊಂಡಿರುವ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಯ ಗುಂಪು. ಇದು ಸ್ವಯತ್ತತೆ. ಸ್ವಯಂಪ್ರೇರಿತ, ಸ್ವಾಸಮಾರ್ಥ್ಯದ ಸಾಮಾಜಿಕ ಬದ್ಧತೆ ಹೊಂದಿದ ಗುಂಪು. ಈ ಗುಂಪುಗಳು ಕಾನೂನಿನ ರೀತ್ಯ ನೋಂದಾವಣೆಯಾಗಲೀ, ಇತರೇ ಸಹಕಾರಿ ಕಟ್ಟಳೆಗೆ ಇದು ಒಳಪಡುವುದಿಲ್ಲ. ಒಂದು ಪಕ್ಷ ಇಪ್ಪತ್ತು ಮತ್ತು ಅದಕ್ಕಿಂತ ಮೇಲ್ಪಟ್ಟ ಸದಸ್ಯರಿಂದಲೇ ಗುಂಪು ರಚನೆಯಾಗಬೇಕು ಎಂದರೇ ಕಂಪನಿಕಾಯ್ದೆಯ ಪ್ರಕಾರ ನೋಂದಣಿಮಾಡಿಕೊಳ್ಳಬೇಕು. ಸಾಮಾನ್ಯವಾಗಿ ಸದಸ್ಯರ ಸಂಖ್ಯೆ ಇಪ್ಪತ್ತರೊಳಗೆ, ಇದ್ದರೆ ನಿರ್ವಹಣೆ ದೃಷ್ಠಿಯಿಂದ ಅಪೇಕ್ಷಾರ್ಹ. ಈ ಗುಂಪುಗಳು ಪಕ್ಷಬೇಧ, ರಾಜಕೀಯರಹಿತ ಸ್ವಯಂಘೋಷಿತ ಸಂಸ್ಥೆಗಳು, ಲಾಭಗಳಿಸುವ ಆರ್ಥಿಕ ಘಟಕ. ಉಳಿತಾಯಭಿವೃದ್ಧಿಸಿ, ಲಾಭಗಳಿಸಿ ಅದನ್ನು ಸರ್ವಾನುಮತ ತೀರ್ಮಾನದಂತೆ ವಿನಿಯೋಗಿಸಿಕೊಳ್ಳುವ ಸಣ್ಣ ಘಟಕ. ಲಾಭಾಂಶದಲ್ಲಿ ಸಾಮೂಹಿಕ ಮತ್ತು ಸಾಮಾಜಿಕ ಕಳಕಳಿ ಮತ್ತು ಬದ್ಧತೆಗೆ ಸ್ಪಂಧಿಸುವ ಗುಂಪು. ತನಗೆ ಅವಶ್ಯವೆನಿಸಿದಾಗ ಗುಂಪಿನ ನಿರ್ಣಯದಂತೆ ಗುಂಪಿನ ಹೆಸರಿನ ಮೇಲೆ ಬ್ಯಾಂಕುಗಳಿಂದ ಸಾಲಪಡೆದು ಸದಸ್ಯರಿಗೆ ಹಂಚುವ ಮತ್ತು ಸಾಲದ ನಿಯಮದಂತೆ ಮರುಪಾವತಿ ಮಾಡುವ ವ್ಯವಹಾರವನ್ನು ಸಹ ಹೊಂದಿರುತ್ತವೆ. ನೆರವು ನೀಡುವ ಸಂಸ್ಥೆಗಳಿಂದ ಕೊಡುಗೆ ನಿಧಿ ಮತ್ತು ಸಹಾಯಧನದ ರೂಪದಲ್ಲಿ ತನ್ನ ಸಂಪನ್ಮೂಲಗಳನ್ನು ಹಂಚಿಕೊಳ್ಳುತ್ತವೆ. ಉದಾ. ತನಗೆ ಮಾರ್ಗದರ್ಶನ ನೀಡಿ, ಪೋಷಿಸುವ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳಿಂದ ಪ್ರಾರಂಭಿಕ ಅನುದಾನ, ಕೊಡುಗೆ, ದತ್ತಿನಿಧಿಗಳು ಮತ್ತು ಸರ್ಕಾರಿ ಸಂಸ್ಥೆಗಳಿಂದ ಸಹಾಯಧನ; ವರ್ತುಲನಿಧಿಗಳು ಉತ್ತಮವಾಗಿ ಕಾರ್ಯನಿರ್ವಹಿಸುವ ಗುಂಪುಗಳಿಗೆ ದೊರೆಯುತ್ತದೆ. ಸಾಮಾನ್ಯವಾಗಿ ಬೀಜಧನ ಅಥವಾ ವರ್ತುಲ ನಿಧಿ ರೂ ೧೦,೦೦೦ಗಳಿಂದ ರೂ. ೨೫,೦೦೦ಗಳ ವರೆಗೆ ದೊರೆಯುತ್ತದೆ. ಜೊತೆಗೆ ಜಿಲ್ಲಾ ಪಂಚಾಯಿತಿಗಳು, ತಾಲೂಕು ಪಂಚಾಯಿತಿಗಳ ಮೂಲಕ SGSY ಯೋಜನೆಯಡಿ ರೂ ೧೦,೦೦೦ಗಳ ವರ್ತುಲ ನಿಧಿಯನ್ನು ಬ್ಯಾಂಕ್‌ನವರು ಶಿಫಾರಸ್ಸು ಮಾಡಿದ ಗುಂಪುಗಳಿಗೆ ನೀಡುತ್ತಿದ್ದಾರೆ. ಇದಕ್ಕೆ ಸಂಚಯನಿಧಿ ಎಂದು ಕರೆಯುತ್ತಾರೆ. ಅದರ ಜೊತೆಗೆ 'ಸ್ತ್ರೀ ಶಕ್ತಿ' ಯೋಜನೆಯಡಿ ಆಯ್ಕೆಯಾದ ಮಹಿಳಾ ಗುಂಪುಗಳಿಗೆ ರೂ.೫೦೦೦ಗಳ ವರ್ತುಲ ನಿಧಿ (ಸುತ್ತು ನಿಧಿ)ಯನ್ನು ಕರ್ನಾಟಕ ರಾಜ್ಯ ಸರ್ಕಾರ ನೀಡುತ್ತಿದೆ. ಇನ್ನು ಬ್ಯಾಂಕುಗಳಿಂದ ನೀಡಿದ ಸಾಲದ ಅರ್ಧಭಾಗ ಅಂದರೇ ಶೇ ೫೦ರಷ್ಟು (ಗರಿಷ್ಠ ಮಿತು ರೂ. ೧-೨೫ ಲಕ್ಷಗಳು, ಕಿರುನೀರಾವರಿ ಉದ್ದೇಶಕ್ಕಾಗಿ ಪಡೆದ ಸಾಲಕ್ಕೆ ಗರಿಷ್ಠ ಮಿತಿಯಿಲ್ಲ) ಸಹಾಯಧನ SGSY ಯೋಜನೆಯಲ್ಲಿ ಆಯ್ಕೆಯಾದ ಸ್ವಸಹಾಯ ಗುಂಪುಗಳಿಗೆ ದೊರೆಯುತ್ತದೆ. ಅಂದರೆ ಈ ಸ್ವಸಹಾಯ ಗುಂಪುಗಳ ಪರಿಕಲ್ಪನೆಯಲ್ಲಿ ಪ್ರಮುಖ ಅಂಶಗಳೆಂದರೆ, ಸಮಾನ ಮನಸ್ಕ

ಸದಸ್ಯರು, ಉಳಿತಾಯ, ಸಭೆಯ ನಿರ್ಣಯ, ಆಂತರಿಕ ಸಾಲ, ಸಂಪನ್ಮೂಲಗಳು (ನಿಧಿ, ಸಹಾಯಧನ, ಬಡ್ಡಿ, ಬಡ್ಡಿಶುಲ್ಕ ಪ್ರವೇಶ ಧನ) ಮತ್ತು ಸಮೂಹ ಹಿತ.

ಪ್ರತಿ ಹಳ್ಳಿಗಳಲ್ಲಿ ನಾವು ನೋಡಿದಾಗ ಸುಮಾರು ಶೇ. ೭೫ಭಾಗ ಜನರು ಬಡ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ಈ ಬಡಜನರ ಅಭಿವೃದ್ಧಿಗೋಸ್ಕರ ಸರ್ಕಾರಿ ಇಲಾಖೆಗಳು, ಸಹಕಾರ ಸಂಘಗಳು ಮತ್ತು ಇತರ ಇಲಾಖೆಗಳು ಹಲವಾರು ಯೋಜನೆಗಳನ್ನು ಹಾಕಿಕೊಂಡು ಕಾರ್ಯನಿರ್ವಹಿಸುತ್ತಿವೆ. ಸರ್ಕಾರಿ ಇಲಾಖೆಗಳು, ಸಹಕಾರ ಸಂಘಗಳು ಮತ್ತು ಬ್ಯಾಂಕುಗಳು ರಚಿಸಲ್ಪಟ್ಟ ಕೆಲವು ನಿಯಮಗಳು, ಕೆಲವೊಮ್ಮೆ ಬಡವರ ಅಭಿವೃದ್ಧಿಗೆ ಅಡಚಣೆ ಉಂಟಾಗಿರುವುದರಿಂದ ಹಾಗೂ ಜನರ ಜವಾಬ್ದಾರಿ ಕುಂಟಿತವಾಗಿರುವುದರಿಂದ ಬಡವರು ಬಡವರಾಗಿಯೇ ಉಳಿದಿದ್ದಾರೆ.

ಈ ನಿಯಮಗಳಿಂದ ಬಡವರಿಗೆ ಸಕಾಲಕ್ಕೆ ಸರಿಯಾದ ಸಾಲ ಸೌಲಭ್ಯಗಳು ಕುಟುಂಬಗಳ ಅವಶ್ಯಕತೆಗೆ ತಕ್ಕ ಕಾರ್ಯಕ್ರಮಗಳು ಸಿಗದೆ ಸಾಲ ಮರುಪಾವತಿಯೂ ಸಹ ಕುಂಠಿತವಾಗಿರುವುದು ಸಹಜ, ಹಾಗೂ ಸಾಲಪಡೆಯುವ ಮುನ್ನ ಈ ಕಾರ್ಯಕ್ರಮದ ಬಗ್ಗೆ ಜನರಿಗೆ ತಿಳುವಳಿಕೆ ಸಿಗದೆ ಮತ್ತು ಕಾರ್ಯಕ್ರಮದ ಮೇಲ್ವಿಚಾರಣೆಯ ಅಭಾವದಿಂದ ಸಾಲಗಳು ದುರುಪಯೋಗವಾಗಿ ಯೋಜನೆಗಳ ಗುರಿಸಾಧನೆಗೆ ಅಡಚಣೆಯುಂಟಾಗುತ್ತಿದೆ.

ಕೆಲವು ವರ್ಷಗಳಿಂದ ನೊಂದ ಬಡಜನರನ್ನು ಒಗ್ಗೂಡಿಸಿ ಸೂಕ್ತ ತಿಳುವಳಿಕೆ ತರಬೇತಿಗಳನ್ನು ನೀಡಿ ಬಡವರು ಅವರದೇ ಆದ ಸಂಘಗಳನ್ನು ನಿರ್ಮಿಸಿ ನಿಯಮಿತಿ ಸದಸ್ಯತ್ವವನ್ನು ಹೊಂದಿಉಳಿತಾಯ, ಸರ್ವಸದಸ್ಯರ ಸಭೆ, ಸಾಲಕೊಡುವುದರ ಬಗ್ಗೆ, ಕೌಟುಂಬಿಕ ಹಾಗೂ ಗ್ರಾಮಕ್ಕೆ ಸೇರಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಅದರದೆ ಆದ ತೀರ್ಮಾನಗಳನ್ನು ಕೈಗೊಂಡು ಸರ್ವತೋಮುಖ ಅಭಿವೃದ್ಧಿಗಾಗಿ ಈ ಸಂಘಗಳು ವಾರಕ್ಕೊಮ್ಮೆ ತಪ್ಪದೆ ನಿಗದಿತ ವೇಳೆಯಲ್ಲಿ ಸಭೆ ಸೇರಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸ್ವ ಸಹಾಯ ಸಂಘಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ಸ್ವಸಹಾಯ ಸಂಘಗಳ ಕೊಡುಗೆ

ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿಯು ಅತ್ಯಂತ ತಳ ಸಮುದಾಯವೆಂದರೇ ಬುಡಕಟ್ಟು ಸಮುದಾಯಗಳು, ಈ ಸಮುದಾಯಗಳ ಶೋಷಣೆ ಸತತವಾಗಿ ಮುಂದುವರಿದಿದ್ದು, ಈ ನಿಟ್ಟಿನಲ್ಲಿ ಈ ತಳಸಮುದಾಯಗಳನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಹಲವಾರು ಮಾನವತವಾದಿಗಳು, ಹಲವಾರು ಸ್ವಯಂಸೇವಾ ಸಂಸ್ಥೆಗಳು ಮತ್ತು ಸರ್ಕಾರದ ಪ್ರಯತ್ನಗಳು ಮುಂದುವರಿದಿವೆ. ಆದರೂ ಸರ್ಕಾರ ಪ್ರಸ್ತುತದಲ್ಲಿ ಈ ಹಲವಾರು ಯೋಜನೆಗಳಿಂದ ಬುಡಕಟ್ಟು ಸಮುದಾಯಗಳಿಗೆ ಸರಿಯಾದ ಸವಲತ್ತುಗಳನ್ನು ಒದಗಿಸುತ್ತಿದ್ದರು. ಅವು ಎಲ್ಲೋ ಸೋರಿಕೆಯಾಗುತ್ತಿವೆ. ಅದರಲ್ಲು ಬುಡಕಟ್ಟು ಮಹಿಳೆಯರಿಗಂತು ಈ ಯೋಜನೆಗಳ ಸವಲತ್ತುಗಳು ಗಗನ ಕುಸುಮವಾಗಿ ಕಾಣತೊಡಗಿವೆ. ಈ ಎಲ್ಲಾ ಸವಲತ್ತುಗಳಿಂದ ವಂಚಿತಳಾಗಿ ಎಲ್ಲೋ ಭೂ ಒಡೆಯರ, ಗಣಿಗಾರಿಕೆಯ ಮಾಲಿಕರ, ಸರ್ಕಾರಿ

ಅರಣ್ಯಕಾಯ್ದೆಗಳ, ಮೇಲ್ಜಾತಿಯ ಪುರುಷರ ಲೈಂಗಿಕ ಕಿರುಕುಳ, ಎಲ್ಲಾ ರೀತಿಯ ಸಮಸ್ಯೆಗಳನ್ನು ತಮ್ಮ ಮನದಲ್ಲಿ ಹುದುಗಿಸಿಕೊಂಡು ಹೊರಗಿನ ಸಮಾಜಕ್ಕೆ ಮಾತ್ರ ನಗುಮುಖ ಕಾಣುವ ಹಾಗೇ ಜೀವಿಸಿತೊಡಗಿದ್ದಾಳೆ. ಈ ಮಹಿಳೆಯರು ಪ್ರಸ್ತುತದಲ್ಲಿ ನಾವು ಯಾರಿಗೂ ಕಡಿಮೆ ಇಲ್ಲವೆಂದು ಕೈಗಾರಿಕಾರಂಗ, ಕೃಷಿರಂಗ ಪ್ರತಿಯೊಂದು ವಲಯದಲ್ಲಿಯು ಪುರುಷರಿಗಿಂತ ಒಂದು ಕೈ ಮೇಲಾಗಿಯೇ ಉತ್ಪದನಾ ಚಟುವಟಿಕೆಯಲ್ಲಿ ತೊಡಗಿದ್ದರು ಕೂಡ ಇವಳಿಗೆ ಸಿಗುವಂತಹ ಬಿರುದುಗಳು, ವೇತನಗಳು ಬಹಳ ಕಡಿಮೆ. ಇಷ್ಟೆಲ್ಲಾ ಸಾಮರ್ಥ್ಯವನ್ನು ಹೊಂದಿರುವಂತಹ ಬುಡಕಟ್ಟುಗಳು ಶತ ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದರು ಕೂಡ ಪ್ರಸ್ತುತದಲ್ಲಿ ಶೋಷಣೆಯನ್ನು ತಡೆಯಲಾಗದೆ ಜಾಗೃತಗೊಂಡ ಬುಡಕಟ್ಟು ಮಹಿಳೆ ಮತ್ತು ಸಾಮಾನ್ಯ ಮಹಿಳೆಯರು ತಮ್ಮ ಶೋಷಣೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಮತ್ತು ತಮಗೆ ಸಿಗುವಂತಹ ಸವಲತ್ತುಗಳನ್ನು ಪಡೆಯುವುದಕ್ಕಾಗಿ ಮೊದಲು ನಗರ ಪ್ರದೇಶದಲ್ಲಿ ಸಾಮಾನ್ಯ ಮಹಿಳೆಯರ ಜೊತೆಗೂಡಿ ಸಂಘಗಳನ್ನು ಸ್ಥಾಪಿಸಿಕೊಂಡರು. ಈ ಸಂಘಗಳು ಬುಡಕಟ್ಟು ಮಹಿಳೆಯರು ಮತ್ತು ಇತರೇ ಮಹಿಳೆಯರು ಶೋಷಣೆಯ ವಿರುದ್ಧ ಹೋರಾಡಲು ಆತ್ಮವಿಶ್ವಾಸ ಮತ್ತು ಸಾಮಾರ್ಥ್ಯ ಚಿಗುರಲು ಸಂಘಗಳು ದಾರಿಮಾಡಿಕೊಟ್ಟವು.

ಈ ಸಂಘಗಳು ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಸ್ಥಾಪನೆಯಾಗಿ ಇವು ಗ್ರಾಮೀಣ ಪ್ರದೇಶಕ್ಕೆ ಕಾಲಿಟ್ಟಾಗ ಹಲವಾರು ಸಂಪ್ರದಾಯ, ಕೌಟುಂಬಿಕ ಚಟುವಟಿಕೆ, ಅನಕ್ಷರತೆ, ಮೂಡನಂಬಿಕೆ, ಹೊರಪ್ರಪಂಚದ ಜ್ಞಾನವಿಲ್ಲದ ಬುಡಕಟ್ಟು ಮಹಿಳೆ ಮತ್ತು ತಳಸಮುದಾಯದ ಮಹಿಳೆಯರಿಗೆ ಇದರ ಅರಿವೆ ಇಲ್ಲದವರಾಗಿ ತಮ್ಮ ತಮ್ಮ ಕಾಯಕದಲ್ಲಿ ತೊಡಗಿಸಿಕೊಂಡಿದ್ದರು. ಈ ಸಂಘ ಸಂಸ್ಥೆಗಳಿಂದ ಬಹಳ ದೂರದಲ್ಲಿ ಉಳಿದುಕೊಂಡಿದ್ದರು. ಇಂತಹ ಸಮಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮವು 'ಸ್ತ್ರೀ ಶಕ್ತಿ' ಯೋಜನೆಯನ್ನು ಮತ್ತು ಇನ್ನು ಹಲವಾರು ಯೋಜನೆಯನ್ನು ಗ್ರಾಮೀಣ ಪ್ರದೇಶದ ಬುಡಕಟ್ಟು ಮತ್ತು ಇತರೇ ಮಹಿಳೆಯರಿಗೆ ಪರಿಚಯಿಸಿತ್ತು. ಈ ಯೋಜನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಎಂಬ ಯೋಜನೆಯನ್ನು ಮಹಿಳೆಯರ ಏಳಿಗೆಗಾಗಿ ಮಹಿಳಾ ಮತ್ತು ಮಕ್ಕಳ ಇಲಾಖೆಯು ಜಾರಿಗೆ ತಂದಿತ್ತು.

ಪ್ರಸ್ತುತದಲ್ಲಿ ಸ್ವಸಹಾಯ ಸಂಘಗಳು ಒಂದು ಪ್ರದೇಶದಲ್ಲಿ ಬಡತನರೇಖೆಗಿಂತ ಕೆಳಗಿರುವ ಕೆಳಗೆ ವಾಸಿಸುವ ಸಾಮಾನ್ಯ ಮಹಿಳೆ ಮತ್ತು ಬುಡಕಟ್ಟು ಮಹಿಳೆಯರ ನಡುವೆ ಮಾರ್ಗದರ್ಶಕನಂತೆ ಕೆಲಸ ಮಾಡುತ್ತಿದೆ. ಅವರಲ್ಲಿರುವ ಸಂಪ್ರದಾಯ ,ಮೌಢ್ಯ, ಅನಕ್ಷರತೆ, ಕಟ್ಟುಪಾಡುಗಳು, ಆಚರಣೆಗಳು, ಆಚಾರ-ವಿಚಾರಗಳು ಮುಂತಾದವುಗಳಿಂದ ಹೊರಬಂದು ಯಶಸ್ವಿಯಾದ ಜೀವನ ರೂಪಿಸಲು ಈ ಸ್ವ ಸಹಾಯ ಸಂಘಗಳು ದಾರಿಮಾಡಿಕೊಟ್ಟವು. ಮಹಿಳೆಯರು ಉತ್ಪಾದಕ ಚಟುವಟಿಕೆಯನ್ನು ಕೈಗೊಳ್ಳಲು ಅನುವು ಮಾಡಿಕೊಟ್ಟವು.

ಇತರೇ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಸ್ಥಾಪಿಸಿಕೊಂಡಂತಹ ಸ್ವಸಹಾಯ ಸಂಘಗಳು ಹಲವಾರು ರೀತಿಯಾದ ಚಟುವಟಿಕೆಗಳನ್ನು ಕೈಗೊಳ್ಳುವ, ವಿವಿಧ ರೀತಿಯಾದ ಕೆಲಸ

ಕಾರ್ಯಗಳನ್ನು ಕೈಗೊಳ್ಳುವ ಉದ್ದೇಶದಿಂದ ಸಮಾನ ಮನಸ್ಕ ಮಹಿಳೆಯರು ಚಿಕ್ಕ ಚಿಕ್ಕ ಸಂಘಗಳನ್ನು ರಚಿಸಿಕೊಂಡು ಉಳಿತಾಯ ಮಾಡಿದ ಹಣವನ್ನು ತಮ್ಮ ಸಂಘದ ಸದಸ್ಯರಲ್ಲಿ ಅವಶ್ಯಕತೆ ಇದ್ದವರಿಗೆ ಒಂದು ನಿರ್ದಿಷ್ಟ ಬಡ್ಡಿದರದ ಆಧಾರದ ಮೇಲೆ ಅವರು ಕೈಗೊಳ್ಳುವಂತ ಚಟುವಟಿಕೆ ಮತ್ತು ಕಾರ್ಯಗಳನ್ನೂ ಗಮನದಲ್ಲಿಟ್ಟುಕೊಂಡು ಕೆಲವು ಷರತ್ತುಗಳ ಆಧಾರದ ಮೇಲೆ ಸಾಲವನ್ನು ನೀಡುತ್ತಿವೆ. ಆ ಸಂಘಗಳು ಸಾಲ ಸೌಲಭ್ಯವನ್ನು ನೀಡುವುದರ ಜೊತೆಗೆ ಆತ್ಮಸ್ಥೈರ್ಯ, ಮಹಿಳೆಯರಲ್ಲಿ ಹೊರಪ್ರಪಂಚದ ಜ್ಞಾನಾ, ಧೈರ್ಯ, ಮುಂತಾದವುಗಳನ್ನು ತಂದುಕೊಟ್ಟಿರುವಂತ ಈ ಮಹಿಳಾ ಸ್ವಸಹಾಯ ಸಂಘಗಳು ಮಹಿಳೆಯರಿಗೆ ಬೆಳಕಿನ ದಾರಿದೀಪವಾಗಿವೆ.

ಈ ಬುಡಕಟ್ಟು ಮಹಿಳೆ ಮತ್ತು ಸಾಮಾನ್ಯ ಮಹಿಳೆಯರು ಸ್ಥಾಪಿಸಿಕೊಂಡಿರುವ ಸ್ವಸಹಾಯ ಸಂಘಗಳಲ್ಲಿರುವ ಮಹಿಳೆಯರಲ್ಲಿ ಕೇವಲ ಬೆರಳೆಣಿಕೆಯಷ್ಟು ಮಾತ್ರ ಅಕ್ಷರಸ್ಥರಿದ್ದರೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಅನಕ್ಷರಸ್ಥರು ಕಂಡುಬರುತ್ತಾರೆ. ಆದರೂ ಇವರು ಕಷ್ಟ ಕಾರ್ಪಣ್ಯ, ಮದುವೆ, ಮಕ್ಕಳ ಶಿಕ್ಷಣ, ಅನಾರೋಗ್ಯ ಮುಂತಾದವುಗಳನ್ನು ಎದುರಿಸಲು ಲೇವಾದೇವಿದಾರರನ್ನು ಆಶ್ರಯಿಸದೆ, ಭೂ ಮಾಲೀಕರಿಗೆ ಮೊರೆಹೋಗದೆ ಸ್ವತಂತ್ರ ಜೀವನ ಮಾಡುವ ಹಂಬಲದಿಂದ ಸ್ವ ಇಚ್ಚೆಯಿಂದ ಸ್ವಸಹಾಯ ಸಂಘಗಳನ್ನು ರಚನೆ ಮಾಡಿಕೊಂಡಿದ್ದಾರೆ. ಈ ಮಹಿಳೆಯರು ಪ್ರತಿ ಭಾನುವಾರ ಸಭೆ ಸೇರಿ ಆ ವಾರದ ಪ್ರತಿಯೊಬ್ಬ ಸದಸ್ಯರು ತಮ್ಮ ಉಳಿತಾಯದ ಹಣದಲ್ಲಿ ತನ್ನ ಸಂಘದ ನಿಯಮಕ್ಕೆ ಸಂಬಂಧಿಸಿದಂತೆ ತಲಾ ಹತ್ತು ರೂಪಾಯಿಗಳನ್ನು ಸಂಘದ ಪದಾಧಿಕಾರಿಗಳಿಗೆ ನೀಡಿ ಅವರ ಉಳಿತಾಯ ಸಂಗ್ರಹದ ಪುಸ್ತಕದಲ್ಲಿ ಸಹಿಮಾಡಿ ತಮ್ಮ ವೈಯಕ್ತಿಕ ಉಳಿತಾಯ ಪುಸ್ತಕಕ್ಕೆ ಬರೆಸಿಕೊಳ್ಳುತ್ತಾರೆ.

ಈ ರೀತಿಯಾಗಿ ಪದಾಧಿಕಾರಿಗಳು ಸಂಗ್ರಹಿಸಿದ ಹಣವನ್ನು ಕೂಡಿಡುವುದು, ಆ ಕೂಡಿಟ್ಟ ಸಂಘದ ಹಣವನ್ನು ಅಗತ್ಯಕ್ಕೆ ತಕ್ಕಂತೆ ವಿನಿಯೋಗಿಸುವುದು. ನಿರ್ಧಿಷ್ಟ ಅವಧಿಗೆ ಸಂಘದಿಂದ ಸಾಲ ಪಡೆದು, ಅವದಿಯ ದಿನಗಳಲ್ಲಿ ಬಡ್ಡಿಯ ಸಮೇತ ಹಣವನ್ನು ವಾಪಸ್ ಮಾಡುವ ಪರಿಪಾಠವನ್ನು ಸಂಘದ ಎಲ್ಲಾ ಸದಸ್ಯರು ರೂಢಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಮತ್ತೆ ಸಂಗ್ರಹಿಸಿದ ಹಣವನ್ನು ಅಗತ್ಯವಿರುವ ಮಹಿಳೆಯರಿಗೆ ಸಾಲರೂಪದಲ್ಲಿ ಕೊಟ್ಟು ಕೊಟ್ಟಂತಹ ಸಾಲವನ್ನು ವಾಪಸ್ಸ್ ಸಂಗ್ರಹಮಾಡುತ್ತಾರೆ. ಸ್ವಸಹಾಯ ಸಂಘಗಳಲ್ಲಿ ಸಾಲಪಡೆದಿರುವ ಮಹಿಳೆಯರು ಕೋಳಿಸಾಕಾಣಿಕೆ, ಮೇಕೆ ಸಾಕಾಣಿಕೆ, ಹಸು ಸಾಕಾಣಿಕೆ, ಅಂಗಡಿ ವ್ಯಾಪಾರ, ಹಂದಿ ಸಾಕಾಣಿಕೆ, ಕೃಷಿಗೆ ಸಂಬಂಧಿಸಿದ ಚಟುವಟಿಕೆ, ಹೋಟೆಲ್ ನಡೆಸುವುದು, ಮಹಿಳೆಯರಿಗೆ ಬೇಕಾದಂತಹ ಕೆಲವು ಚಿಕ್ಕಪುಟ್ಟ ವಸ್ತುಗಳ ಮಾರಾಟ ಮುಂತಾದವುಗಳಿಗೆ ಸಾಲವನ್ನು ತೆಗೆದುಕೊಂಡು ಕಂತಿನ ರೂಪದಲ್ಲಿ ಮರುಪಾವತಿ ಮಾಡುತ್ತಾರೆ. ಈ ಮಹಿಳೆಯರು ಮಾಡುವಂತಹ ಚಟುವಟಿಕೆಯನ್ನು ಗಮನಿಸಿದಂತ ಸರ್ಕಾರ ಬ್ಯಾಂಕುಗಳು, ವಾಣಿಜ್ಯ ಬ್ಯಾಂಕುಗಳು, ಸ್ವಯಂ ಸೇವಾ ಸಂಸ್ಥೆಗಳು, ಇತರೇ ಅಭಿವೃದ್ಧಿ ಸಂಸ್ಥೆಗಳು ಇವುಗಳಿಗೆ ಸಹಾಯ ಹಸ್ತ ಚಾಚಿವೆ. ಸ್ವ ಸಹಾಯ ಗುಂಪುಗಳ ಯಶಸ್ವಿ ಮುಂದುವರಿಕೆಗೆ ಮಹಿಳೆಯರಲ್ಲಿ ಉಳಿತಾಯ ಮನೋಭಾವ, ಸಾಮಾರ್ಥ್ಯವರ್ಧನೆ, ದುಡಿಮೆಯ ಮಾರ್ಗ, ಆರ್ಥಿಕ

ಚಿಂತನೆ, ಕುಟುಂಬದ ತಾಳ್ಮೆ, ಆತ್ಮ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ದಾರಿ ಸುಗಮವಾಯ್ತು. ಹಾಗೂ ಮೂಲಭೂತ ಸಾಲ ನೀಡುವವರ ಕಪಿಮುಷ್ಠಿಯಿಂದ ಬಿಡುಗಡೆ ಹೊಂದಿದರು. ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಗೃಹಕೈಗಾರಿಕೆಗಳಿಗೆ ಉತ್ತೇಜನ ಹಾಗೂ ಸ್ವಯಂ ಉದ್ಯೋಗದ ಸ್ಥಾಪನೆಗೆ ಮತ್ತು ಸ್ವಾವಲಂಬಿ ಬದುಕನ್ನು ಸ್ಥಾಪಿಸಲು ಈ ಸ್ವಸಹಾಯ ಸಂಘಗಳು ಮಾರ್ಗದರ್ಶನವಾಗಿ ನಿಂತಿವೆ.

ಈ ಹಿನ್ನಲೆಯಲ್ಲಿ ಹಣಕಾಸಿಗೆ ಸಂಬಂಧಿಸಿದ ಚಟುವಟಿಕೆ, ಆರ್ಥಿಕಾಭಿವೃದ್ಧಿಯ ಜೊತೆಗೆ ಸಂಘಟನಾ ಮನೋಭಾವನೆ, ಗುಂಪುಚರ್ಚೆ, ಮುಂತಾದವುಗಳನ್ನು ಮೈಗೂಡಿಸಿಕೊಳ್ಳುವುದಕ್ಕೆ ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ ಬೆಳವಣಿಗೆಯತ್ತ ಕೊಂಡೊಯ್ಯಲು ಈ ಸಂಘಗಳು ಕಾರಣವಾದವು. ಮಹಿಳೆಯರ ಮೇಲಿನ ಶೋಷಣೆ ವಿರುದ್ಧ ಜಾಗೃತರಾಗಲು ಹಾಗೂ ಕೃಷಿಕೂಲಿಕಾರರು ಹೆಚ್ಚಾಗಿ ಇರುವುದರಿಂದ ಸ್ವಸಹಾಯ ಸಂಘಗಳು ಮಹಿಳೆಯರಿಗೆ ವರದಾನವಾಗಿರುವುದು ಹೆಮ್ಮೆಯ ವಿಚಾರವಾಗಿದೆ.

ಈ ಸ್ವಸಹಾಯ ಗುಂಪುಗಳು ಮಹಿಳೆಯರಲ್ಲಿ ವಿಶ್ವಾಸನೀಯ ವ್ಯವಹಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿವೆ. ಬ್ಯಾಂಕ್ ಅಧಿಕಾರಿಗಳು ಮತ್ತು ಸ್ವಯಂಸೇವಾ ಸಂಸ್ಥೆಯ ಅಧಿಕಾರಿಗಳ ಪ್ರಕಾರ ಸಾಮಾಜಿಕ ಹಾಗೂ ಆರ್ಥಿಕಾಭಿವೃದ್ಧಿಯಲ್ಲಿ ಸ್ವಸಹಾಯ ಸಂಘಗಳ ಗಣನೀಯ ಪಾತ್ರವಾದುದು ಎಂದು ಗುರುತಿಸಿದ್ದಾರೆ. ಮಹಿಳೆಯರು ಅದರಲ್ಲಿಯು ಹಿಂದೂಳಿದ ಮತ್ತು ಬುಡಕಟ್ಟು ಮಹಿಳೆಯರ ಜವಾಬ್ದಾರಿಯುತ ನಡವಳಿಕೆ ಮತ್ತು ದುಡಿಮೆಯಲ್ಲಿ ಹೊಸ ಹೊಸ ಚಟುವಟಿಕೆಗಳ ಹುಡುಕಾಟ, ಗಮನಾರ್ಹವಾಗಿದೆ. ಅವರ ಸಭೆಯ ತೀರ್ಮಾನ, ಅವರ ದಾಖಲಾತಿ, ಭಾಗವಹಿಸುವಿಕೆ, ನಿಯಮಗಳ ನಿರ್ಧಾರ ಪಾಲಿಸುವಿಕೆ, ವಾರದ ದಿನ ಸಭೆಗೆ ತಪ್ಪಿಸಿಕೊಂಡರೇ ಕೊಡಬೇಕಾದ ದಂಡ ಮುಂತಾದ ಕಟ್ಟುನಿಟ್ಟಿನ ವ್ಯವಹಾರದಿಂದ ಈ ಸಂಘಗಳು ಹೆಚ್ಚು ಜನಪ್ರಿಯವಾಗಿವೆ.

ಬುಡಕಟ್ಟು ಮಹಿಳೆಯರನ್ನು ಸದೃಡಗೊಳಿಸುವಿಕೆಯಲ್ಲಿ ಸ್ವಸಹಾಯ ಸಂಘಗಳ ಪಾತ್ರ

ಗ್ರಾಮೀಣ ಪ್ರದೇಶದ ಬುಡಕಟ್ಟು ಸಮುದಾಯದ ಮಹಿಳೆಯರ ಅಭಿವೃದ್ಧಿಗೆ ಸ್ವಸಹಾಯ ಸಂಘಗಳು ಪ್ರಮುಖ ಪಾತ್ರವನ್ನು ವಹಿಸುತ್ತಿವೆ. ಈ ಸ್ವಸಹಾಯ ಸಂಘಗಳು ಬುಡಕಟ್ಟು ಮಹಿಳೆಯರಲ್ಲಿರುವಂತಹ ಕೆಲವು ಮುಗ್ಧ ಮತ್ತು ಹಿಂಜರಿಕೆಯ ಗುಣಗಳನ್ನು ದೂರಮಾಡಿ ಅವರನ್ನು ಸಮಾಜದ ಇತರೆ ಜನತೆಯ ಜೊತೆಗೆ ಮುಖಾಮುಖಿಯಾಗಿ ಸಾಮಾನ್ಯ ಜನರೊಂದಿಗೆ ಬೆರೆತು ಈ ಸಮಾಜದ ನಾಗರೀಕತೆಗೆ ಮತ್ತು ಸಾಂಸ್ಕೃತಿಗೆ ಬೆರೆಯುವಂತೆ ಮಾಡಿವೆ. ಇವರೆಲ್ಲರು ಒಂದಾಗಿ ಸೇರಿ ಪರಸ್ಪರ ಸಹಕಾರದ ಮನೋಭಾವನೆಯಿಂದ ತಮ್ಮ ಬೇಡಿಕೆಯನ್ನು ಈಡೇರಿಸಿಕೊಳ್ಳುವುದ ಕೋಸ್ಕರ ರಚಿಸಿಕೊಂಡಿರುವಂತಹ ಸಂಘಗಳೇ ಸ್ವಸಹಾಯ ಸಂಘಗಳಾಗಿವೆ. ಇವುಗಳ ಮುಖಾಂತರ ಬುಡಕಟ್ಟು ಸಮುದಾಯದ ಮಹಿಳೆಯರು ಮತ್ತು ಇತರೇ ಮಹಿಳೆಯರು ಒಂದು ನಿರ್ಧಿಷ್ಟ ಗುರಿ ಮತ್ತು ಉದ್ದೇಶಗಳನ್ನಿಟ್ಟುಕೊಂಡು ಈ ಸಂಘಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ.

ಸಮುದಾಯದ ಮಹಿಳೆಯರು ತಮಗೆ ಬೇಕೆನಿಸಿದಾಗ ಸಾಲಸೌಲಭ್ಯವನ್ನು ಭೂಮಾಲೀಕರು, ಗಣಿಮಾಲೀಕರು, ತೋಟದಮಾಲೀಕರು, ಲೇವಾದೇವಿದಾರರು ಮುಂತಾದವರಿಂದ ಕಡಿಮೆ ಬಡ್ಡಿದರದಲ್ಲಿ ಪಡೆದುಕೊಳ್ಳುತ್ತಾರೆ. ಆದರೆ ಸ್ವಸಹಾಯ ಸಂಘಗಳು ಇಂತಹ ಸಾಲವನ್ನು ಬಡವರಿಗೆ ಕಷ್ಟದ ಸಮಯದಲ್ಲಿ ಆಪತ್ಕಾಲದಲ್ಲಿ ಬೇಕೆಂದಾಗ ಯಾವ ನಿರ್ಬಂಧವು ಇಲ್ಲದೆ ಮುಕ್ತಮನಸ್ಸಿನಿಂದ ಸಾಲವನ್ನು ನೀಡುತ್ತವೆ. ಈ ಸಂಘದಿಂದ ಮಹಿಳೆಯರಲ್ಲಿ ಒಂದೇ ಹೃದಯದಿಂದ ಬೇರೆ ಬೇರೆ ದೇಹದಿಂದ ಮಾಡಲ್ಪಟ್ಟಿರುವ ಜನರೆಂದು ಈ ಸಂಘಗಳು ಸಹಕಾರದ ಮೂಲಕ ಮಾನವೀಯ ಗುಣಗಳನ್ನು, ಮಾನವೀಯ ಮೌಲ್ಯಗಳನ್ನು ಕಲಿಸಿಕೊಡುತ್ತದೆ.

ಪ್ರಸ್ತುತದ ದಿನಗಳಲ್ಲಿ ಮಹಿಳೆಯರ ಮೇಲೆ ನಡೆಯುವಂತ ದೌರ್ಜನ್ಯ, ದಬ್ಬಾಳಿಕೆ, ಮತ್ತು ಇನ್ನು ಹಲವಾರು ತೊಂದರೆಗಳು ನಡೆದಾಗ ಅವುಗಳನ್ನು ಪ್ರತಿರೋಧ ಮಾಡಿ ನ್ಯಾಯವನ್ನು ದೊರಿಕಿಸಿಕೊಳ್ಳುತ್ತವೆ. ಇತ್ತೀಚಿನ ದಿನಗಳಲ್ಲಿ ಯಾವುದೇ ಸರ್ಕಾರವಾಗಲಿ, ಯಾವುದೇ ಸಮಾಜವಾಗಲಿ ಮಹಿಳೆಯರಿಗೆ ಉತ್ತಮವಾದ ಸ್ಥಾನಮಾನವನ್ನು ನೀಡಿಲ್ಲದಿರುವುದು ತಮಗೆಲ್ಲಾ ಗೊತ್ತಿರುವ ವಿಚಾರವಾಗಿದೆ. ಇಂತಹ ಸಮಸ್ಯೆಗಳನ್ನು ನಿವಾರಿಸಲು ಮಹಿಳಾ ಸ್ವಸಹಾಯ ಸಂಘಗಳು ಒಟ್ಟಾಗಿ ಸೇರಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸ್ವಸಹಾಯ ಸಂಘಗಳು ಸಹಾಯಕವಾಗಿವೆ.

ಕೇವಲ ಕೆಲವೆ ವರ್ಷಗಳಲ್ಲಿ ಕಾಡಿನಿಂದ ನಾಡಿಗೆ ಬಂದು ಜೀವನ ಸಾಗಿಸುತ್ತಿರುವ ಬುಡಕಟ್ಟು ಮಹಿಳೆಯರು ಹಲವಾರು ಸಮಸ್ಯೆಗಳಿಂದ ಜೀವನ ನಿರ್ವಹಣೆ ಮಾಡುತ್ತಿರುವುದು ಗೊತ್ತಿರುವ ವಿಚಾರವಾಗಿದೆ. ಇಂತಹ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಸದೃಢವಾಗಿ ಜೀವನಮಾಡಲು ಮತ್ತು ಹೊರಪ್ರಪಂಚವನ್ನು ಪರಿಚಯಿಸಲು ಈ ಸ್ವಸಹಾಯ ಸಂಘಗಳು ಸಹಕಾರಿಯಾಗಿವೆ.

ಸ್ವಸಹಾಯ ಸಂಘಗಳಲ್ಲಿ ಬುಡಕಟ್ಟು ಮಹಿಳೆಯರ ಸಹಭಾಗಿತ್ವದ ಮಹತ್ವ

ಪ್ರಸ್ತುತದಲ್ಲಿ ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಸಭೆ, ಸಮಾರಂಭಗಳಲ್ಲಿ ಸಮಾಜದ ಇನ್ನಿತರ ತರಬೇತಿಗಳಲ್ಲಾಗಲಿ ಮತ್ತು ಸಮಾಜದಲ್ಲಿ ನಡೆಯುವಂತಹ ಚಟುವಟಿಕೆಯಲ್ಲಿ ಭಾಗವಹಿಸುವುದರಿಂದ ಬುಡಕಟ್ಟು ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದ ಇತರೇ ಹಿಂದುಳಿದ ಮಹಿಳೆಯರಲ್ಲಿ ಹೆಚ್ಚು ಜ್ಞಾನ ಸಂಪಾದನೆಯಾಗಿ ಪ್ರಪಂಚದ ಜ್ಞಾನವನ್ನು ತಿಳಿದುಕೊಳ್ಳುತ್ತಾ ತಮ್ಮ ಮೇಲೆ ಆಗುವ ಶೋಷಣೆಯನ್ನು ವಿರೋಧಿಸಲು ಈ ಸಂಘಗಳು ಮಹಿಳೆಯರಲ್ಲಿ ಜಾಗೃತಿ ಮೂಡಿಸುತ್ತಿವೆ.

ಪ್ರಸ್ತುತದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಪುರುಷರ ದಬ್ಬಾಳಿಕೆ, ಭೂ ಮಾಲೀಕರ ಶೋಷಣೆ, ಮೇಲ್ಜಾತಿಯವರ ವಂಚನೆ, ಹಲವಾರು ಸಮಸ್ಯೆಗಳಿಂದ ಮಹಿಳೆಯರನ್ನು ಈ ಸ್ವಸಹಾಯ ಸಂಘಗಳು ರಕ್ಷಿಸುತ್ತಿವೆ. ಬುಡಕಟ್ಟು ಮಹಿಳೆ ಮತ್ತು ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರನ್ನು ಹೊಸ ಹೊಸ ಕ್ಷೇತ್ರಗಳಲ್ಲಿ ಪಾಲ್ಗೊಳ್ಳುವಂತೆ ಅವರಲ್ಲಿ ಅಡಗಿರುವ ಬುದ್ಧಿಚಾತುರ್ಯತೆಯನ್ನು

ಗುರುತಿಸಿ ಅವರನ್ನು ಬೆಳಕಿಗೆ ತರುವುದು. ಇಂತಹ ಹಲವಾರು ಕಾರ್ಯಗಳಲ್ಲಿ ಪಾಲ್ಗೊಂಡು ಮಹಿಳೆಯರಲ್ಲಿ ಆಧುನಿಕ ಜಗತ್ತಿನಲ್ಲಿ ಜೀವನ ರೂಪಿಸಲು ಸಹಕಾರಿಯಾಗಿರುವಂತಹ ಹೊಸ ಮಾರ್ಗಗಳನ್ನು ಸ್ವಸಹಾಯ ಸಂಘಗಳು ಮಹಿಳೆಯರಿಗೆ ನೀಡುತ್ತಿವೆ.

ಪ್ರಸ್ತುತದಲ್ಲಿ ಮಹಿಳೆಯರು ಸ್ವಸಹಾಯ ಸಂಘಗಳ ಪ್ರಭಾವದಿಂದ ಸಬಲೀಕರಣಕ್ಕೆ ಒಳಗಾಗಿದ್ದಾರೆ. ಆರ್ಥಿಕಾಭಿವೃದ್ಧಿಯಲ್ಲಿ ಭಾಗವಹಿಸುವಿಕೆ, ಸಮಾಜದಲ್ಲಿ ಸಮಾನತೆ, ಶಿಕ್ಷಣದಲ್ಲಿ ಪ್ರಗತಿ, ಆರೋಗ್ಯದಲ್ಲಿ ಮುನ್ನಡೆ, ಸಾಂಸ್ಕೃತಿಕ ವಿಚಾರದಲ್ಲಿ ಪರಸ್ಪರ ವಿನಿಮಯ, ಗೌರವಿಸುವಿಕೆ ಇವೆಲ್ಲವು ಮಹಿಳೆಯರ ಅಭಿವೃದ್ಧಿಯ ಹಂತಗಳೆಂದು ಗುರುತಿಸಲಾಗಿದೆ. ಎಲ್ಲಾ ಕಾರ್ಯಕ್ರಮಗಳಲ್ಲಿ ಸಾಮೂಹಿಕ ಭಾಗವಹಿಸುವಿಕೆಯನ್ನು ರೂಪಿಸಿಕೊಂಡಿದ್ದಾರೆ. ಮಹಿಳೆಯರು ಸ್ವಸಹಾಯ ಸಂಘಗಳನ್ನು ಸ್ಥಾಪನೆ ಮಾಡಿಕೊಂಡಿದ್ದರಿಂದ ಸಮಾಜದಲ್ಲಿ ಆರ್ಥಿಕ ಚಟುವಟಿಕೆಯನ್ನು ಕೈಗೊಂಡು, ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಿ, ಸ್ವಯಂ ಉದ್ಯೋಗದಲ್ಲಿ ನಿರತಳಾಗಿದ್ದಾಳೆ, ಮತ್ತು ಆಧುನಿಕ ಜಗತ್ತಿನೊಂದಿಗೆ ಬುಡಕಟ್ಟು ಮಹಿಳೆ ಮತ್ತು ಇತರೇ ಹಿಂದುಳಿದ ವರ್ಗದ ಮಹಿಳೆಯರು ಮುಖಾಮುಖಿಯಾಗಿ ಆಧುನಿಕ ಜಗತ್ತಿನ ಸಂಪರ್ಕಹೊಂದಿದ್ದಾಳೆ ಎನ್ನುವುದಕ್ಕೆ ಪ್ರೇರಕಶಕ್ತಿಯಾಗಿ ನಿಂತಿರುವ ಸಂಘಗಳೆಂದರೆ ಸ್ತ್ರೀಶಕ್ತಿ ಸಂಘಗಳು ಮತ್ತು ಸಹಾಯ ಸಂಘಗಳು.

ಈ ಬುಡಕಟ್ಟು ಮಹಿಳೆಯರು ಮತ್ತು ಇತರೇ ಗ್ರಾಮೀಣ ಹಿಂದುಳಿದ ಮಹಿಳೆಯರು ಈ ಸ್ವಸಹಾಯ ಸಂಘಗಳಲ್ಲಿ ಭಾಗಿಯಾಗಿ ದುಡಿಯುವುದರಿಂದ ಮಹಿಳೆಯರಲ್ಲಿ ಅತೀ ಶೀಘ್ರವಾಗಿ ಬರುವಂತಹ ಸಮಸ್ಯೆಗಳನ್ನು ದೂರಮಾಡಲು ಈ ಸಂಘಗಳು ಸಹಕಾರಿಯಾಗಿ ನಿಂತಿವೆ. ನನ್ನ ಕ್ಷೇತ್ರಕಾರ್ಯದಲ್ಲಿ ಪಡೆದ ಹಲವಾರು ಮಾಹಿತಿಯ ಪ್ರಕಾರ ಈ ಸ್ವಸಹಾಯ ಸಂಘಗಳಲ್ಲಿ ಮಹಿಳೆಯರು ಭಾಗಿಯಾಗಿರುವುದರಿಂದ ಸಂಘದ ಸದಸ್ಯೆಯರು ಕುಟುಂಬಗಳಿಗೆ ಒದಗಿಬಂದ ಕಷ್ಟಕಾರ್ಪಣ್ಯಗಳನ್ನು ದೂರಮಾಡಿ ನೆಮ್ಮದಿಯ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಿವೆ. ಸದಸ್ಯರ ಕುಟುಂಬಗಳಲ್ಲಿ ಮಕ್ಕಳ ಭವಿಷ್ಯವನ್ನು ರೂಪಿಸುವಂತ ವಿದ್ಯಾಭ್ಯಾಸಕ್ಕೆ ಹಣಕಾಸನ್ನು ಒದಗಿಸುತ್ತದೆ. ಹಣವನ್ನು ಉಳಿತಾಯ ಮಾಡುವ ಮೂಲವಾಗಿ, ಜನರಲ್ಲಿ ಸ್ವಾರ್ಥಸೇವೆಯನ್ನು ಮರೆಯುವಂತೆ ಮಾಡಿ ನಿಸ್ವಾರ್ಥಸೇವೆಯನ್ನು ರೂಡಿಸಿಕೊಳ್ಳುವಂತೆ ಜನರಲ್ಲಿ ಸ್ವಾಭಾವಿಕ ಮನೋಭಾವನೆಯನ್ನು ಬೆಳೆಸುತ್ತಿದೆ. ಮಹಿಳೆಯರಲ್ಲಿ ಪರಸ್ಪರ ಸಹಕಾರ, ವಿನಿಮಯ ಪದ್ಧತಿ, ನೆಮ್ಮದಿಯ ಬದುಕಿನಡೆಗೆ ಒಲವು, ಸಂಘಟನಾ ಚತುರತೆ, ಅನ್ಯಾಯದ ವಿರುದ್ಧ ಹೋರಾಟದ ಮನೋಭಾವನೆಯನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಿವೆ. ಅಲ್ಲದೆ ಲೇವಾದೇವಿಗಾರರಿಂದ ಆಗುತ್ತಿದ್ದ ಮತ್ತು ಆಗುತ್ತಿರುವ ಶೋಷಣೆ ವಿರುದ್ಧ ಹೋರಾಡಲು ಸಹಕಾರಿಯಾಗಿದೆ. ಪ್ರಸ್ತುತದಲ್ಲಿ ಈ ಸ್ವಸಹಾಯ ಸಂಘಗಳಲ್ಲಿ ಕೃಷಿಗೆ ಬೇಕಾದ ಹಣಕಾಸು ಒದಗಿಸುವುದು ಮುಂತಾದ ಜನಪರ ಕಾರ್ಯಗಳನ್ನು ಈ ಮಹಿಳಾ ಸ್ವಸಹಾಯ ಸಂಘಗಳು ಮಾಡುತ್ತಿವೆ ಎಂದು ಸದಸ್ಯೆಯರ ಒಕ್ಕೊರಲಿನ ಧ್ವನಿಯಿಂದ ಕಂಡುಬಂದಿತು. ಮೇಲಿನ ಎಲ್ಲಾ

ಕಾರಣಗಳಿಂದಾಗಿ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರು ಸಹಭಾಗಿತ್ವ ತೋರಿ ದುಡಿಯುತ್ತಿರುವುದೇ ಸಮಾಜದ ಇತರ ಜನರ ಮೆಚ್ಚುಗೆ ಪಡೆಯಲು ಕಾರಣವಾಗಿದೆ.

ಪ್ರಸ್ತುತ ಸಮಯದಲ್ಲಿ ಒಳ್ಳೆಯ ಹೆಸರುಗಳಿಸಿ ಬಾಳಬೇಕೆಂಬ ಉತ್ತಮ ಆಸೆ ಇತ್ಯಾದಿಗಳನ್ನು ಜಾಗೃತೆಯಿಂದ ನೆರವೇರಿಸಿಕೊಂಡು ಭೂಮಿಯಲ್ಲಿ ಜೀವಿಸುವ ಮತ್ತು ದಿನನಿತ್ಯದಲ್ಲಿ ಅಧಿಕ ಸಮಯದಲ್ಲಿ ದುಡಿಯುವ ಜೀವಿಗಳಾಗಿ ಮಹಿಳೆಯರು ತಮ್ಮ ಜೀವನ ಸಾಗಿಸುತ್ತಿದ್ದಾರೆ. ಇಂತಹ ಕಾರ್ಯದಲ್ಲಿ ತೊಡಗಿರುವ ಮಹಿಳೆಯರ ಸಹಭಾಗಿತ್ವದಿಂದ ಕೆಲವು ಕುಟುಂಬಗಳ ಜನರು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಲಾಭ ಪಡೆಯುತ್ತಿದ್ದಾರೆ ಎಂಬುದು ಸ್ವಸಹಾಯ ಸಂಘಗಳನ್ನು ನೋಡಿದ ಮೇಲೆ ನಿಜಾಂಶ ತಿಳಿಯುತ್ತಿದೆ. ಅಧ್ಯಯನದ ವ್ಯಾಪ್ತಿಯಲ್ಲಿರುವ ಇನ್ನು ಕೆಲವು ಸಂಘಗಳ ಸದಸ್ಯರು ಅಭಿವೃದ್ಧಿಯ ನಿಟ್ಟಿನಲ್ಲಿರುವುದು ಕಂಡುಬರುತ್ತದೆ. "ಯಾವ ಕುಟುಂಬ ಮತ್ತು ಸಂಘಗಳಲ್ಲಿ ಎಲ್ಲಾ ಸದಸ್ಯರು ಪ್ರತಿ ವಿಚಾರದಲ್ಲಿಯು ಚರ್ಚಿಸಿ, ತೀರ್ಮಾನಿಸಿ, ಕಾರ್ಯಪ್ರವೃತ್ತರಾಗುತ್ತಾರೋ ಅಂತಹ ಸದಸ್ಯರ ಕುಟುಂಬಗಳಲ್ಲಿ ಮತ್ತು ಸಂಘಗಳಲ್ಲಿ ಆಯಾ ಕ್ಷೇತ್ರಗಳಷ್ಟೇ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲಿಯು ಯಶಸ್ಸು ಕಾಣಲು ಸಹಕಾರಿಯಾಗುತ್ತಾರೆ. ಇದರಿಂದಾಗಿ ಕುಟುಂಬಗಳಲ್ಲಿ ಸಂತೋಷ, ನಲಿವು, ಯಶಸ್ಸು, ಪ್ರೀತಿ, ವಿಶ್ವಾಸ ಮತ್ತು ನೆಮ್ಮದಿ ನೆಲಸುವಂತಾಗುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಕೆಲವು ವಿಚಾರದಲ್ಲಿ ಈ ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ ಮಹಿಳೆಯರು ಪುರುಷರಿಗಿಂತ ಚೆನ್ನಾಗಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವುದನ್ನು ನಮ್ಮ ಸುತ್ತಮುತ್ತಲ ಪ್ರದೇಶಗಳ ಸಂಘಗಳಲ್ಲಿರುವ ಮಹಿಳಾ ವರ್ಗವನ್ನು ಕಾಣಬಹುದು. ಈ ಮಹಿಳೆಯರು ಸಂಘದವತಿಯಿಂದ ಪಡೆದ ಸಾಲವನ್ನು ಅನಾವಶ್ಯಕವಾಗಿ ದುಂದುವೆಚ್ಚ ಮಾಡದೆ ತಮ್ಮ ಜೀವನಾಭಿವೃದ್ಧಿಗೆ ಉಪಯೋಗಿಸುವುದು ಕಂಡುಬರುತ್ತದೆ. ಇವರು ಸಾಲವನ್ನು ಪಡೆದ ಹಣಕ್ಕೆ ವ್ಯಾಪಾರ, ಕುರಿ ಸಾಕಾಣಿಕೆ ಇನ್ನು ಮುಂತಾದವುಗಳಿಗೆ ವಿನಿಯೋಗಿಸುತ್ತಿರುವುದು ಕಂಡುಬರುತ್ತದೆ.

ಈ ಬಗೆಯ ಕಾರ್ಯಚಟುವಟಿಕೆಗಳಲ್ಲಿ ತೊಡಗಲು ಕಾರಣ ಸಾಲ ಪಡೆದ ಹಣವನ್ನು ಸದ್ವಿನಿಯೋಗಪಡಿಸಿಕೊಳ್ಳಲಾಗಿರುತ್ತದೆ. ಹಾಗೆಯೇ ಸಾಧ್ಯವಾದಷ್ಟು ಉಳಿತಾಯ ಮಾಡಿ ಇತರ ವರ್ಗದವರಿಗಿಂತ ಉತ್ತಮ ಬದುಕನ್ನು ಸಾಗಿಸಲು ಜವಾಬ್ದಾರಿಯುತ ಖರ್ಚನ್ನು ನಿಭಾಯಿಸಲು ಸಿದ್ಧತೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತಾರೆ. ಒಂದು ವೇಳೆ ಮನೆಯಲ್ಲಿ ಗಂಡಂದಿರು ಇವರ ಬಗ್ಗೆ ತಪ್ಪು ಅಭಿಪ್ರಾಯಗಳನ್ನಿಟ್ಟುಕೊಂಡರೆ, ನಂತರ ಇವರನ್ನು ಸಂಘ ತ್ಯಜಿಸುವಂತೆ ಮಾಡುವ ಸನ್ನಿವೇಷಗಳು ಬಂದರೆ, ಅದನ್ನು ಉಪಾಯದಿಂದ ಮನೆಯವರನ್ನು ಸಮದಾನ ಪಡಿಸುವರು. ಯಾವುದೇ ಕಾರಣಕ್ಕೆ ಸಂಘವನ್ನು ತ್ಯಜಿಸುವುದಿಲ್ಲ ಹಾಗೂ ಹಣದ ಉಳಿತಾಯ ಮಾಡುವುದನ್ನು ತಪ್ಪಿಸುವುದಿಲ್ಲ. ಪ್ರತಿ ಮಹಿಳೆಯರು ಸಾಧ್ಯವಾದಷ್ಟು ಎಚ್ಚರದಿಂದ ಹಣ ವಿನಿಯೋಗ ಮತ್ತು ನಿರ್ವಹಣೆಯನ್ನು ನೆರವೇರಿಸುತ್ತಾರೆ. ಬಹಳ ಜನ ಮಹಿಳೆಯರು ಹಣ ನಿರ್ವಹಣೆಯ ವಿಚಾರಗಳಲ್ಲಿ ಪುರುಷರಗಿಂತ ಉತ್ತಮ ತೀರ್ಮಾನ ಕೈಗೊಳ್ಳುತ್ತಾರೆಂಬುದನ್ನು ಒಪ್ಪಿಕೊಳ್ಳಬೇಕಾಗಿರುವ ನಿಜಾಂಶವಾಗಿದೆ. ಇಂಗ್ಲೀಷ್‌ನಲ್ಲಿ ಒಂದು ಗಾದೆಯಂತೆ

"ಹಣವನ್ನು ಸೇವಕನಾಗಿ ಮಾಡಿಸಿಕೊಂಡರೆ ಮಾತ್ರ ಉತ್ತಮ ಸೇವೆಯನ್ನು ಹಣವು ನೀಡುವುದು ಇಲ್ಲವಾದರೆ ನಾವು ಸಂಪಾದಿಸಿದ ಹಣವು ನಮ್ಮನ್ನೇ ಗುಲಾಮರನ್ನಾಗಿ ಮಾಡಿಕೊಳ್ಳುತ್ತದೆ"

ಅಂದರೆ ಮಹಿಳೆಯರು ಹಣದ ನಿರ್ವಹಣೆಯನ್ನು ಹಿಡಿತದಲ್ಲಿ ಮತ್ತು ವಿವೇಕದಿಂದ ವಿನಿಯೋಗ ಮಾಡದಿದ್ದರೆ ಹಣ ಅಹಂನಿಂದ ದುಷ್ಟಮಾರ್ಗಗಳನ್ನು ಹಿಡಿದು ಆರೋಗ್ಯ, ಮನಸ್ಸು, ಕುಟುಂಬ, ವೃತ್ತಿ, ಕಳೆದುಕೊಳ್ಳಲು ಅನುವು ಮಾಡಿಬಿಡುತ್ತದೆ. ಈ ಗುಟ್ಟನ್ನು ಮಹಿಳೆಯರು ಸರಿಯಾಗಿ ಅರ್ಥಮಾಡಿಕೊಂಡಿರುವುದರಿಂದಲೋ ಅಥವಾ ಸ್ವಾಭಾವಿಕವಾಗಿ ಅವರಲ್ಲಿರುವ ಯೋಚನಾಶಕ್ತಿಯಿಂದಲೋ ಹಿಡಿತ ಮತ್ತು ವಿವೇಕದಿಂದ ಹಣ ನಿರ್ವಹಣೆ ನಡೆಸುತ್ತಾರೆ. ಅನೇಕ ಮಹಿಳೆಯರಿಗೆ ಅದರಲ್ಲೂ ಗ್ರಾಮೀಣ ಪ್ರದೇಶಗಳ ಪರಿಶಿಷ್ಟ ವರ್ಗದವರಿಗೆ ವಿದ್ಯಾಭ್ಯಾಸದ ಅವಕಾಶವಾಗಲಿ ಇತರೆ ಸರ್ಕಾರದ ತಿಳುವಳಿಕೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವಾಗಲಿ, ವಿವಿಧ ಮಾಧ್ಯಮಗಳ ಉಪಯೋಗದ, ಅವಕಾಶಗಳಿಂದ ವಂಚಿತರಾಗಿದ್ದರು. ಆದರೆ ಆಧುನಿಕ ಸಮಾಜದಲ್ಲಿ ಪರಿಶಿಷ್ಟ ಮಹಿಳೆಯರು ಆಯಾ ಕ್ಷೇತ್ರದ ಅನುಭವಗಳನ್ನು, ಅನಿಸಿಕೆಗಳನ್ನು ವ್ಯಕ್ತಪಡಿಸಿ ತಿಳಿಯದಿರುವ ವಿಚಾರ, ಜ್ಞಾನ, ಮಾಹಿತಿ ತಿಳಿದುಕೊಂಡು ಈ ಸ್ವಸಹಾಯ ಸಂಘಗಳ ಮೂಲಕ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಕಂಡುಬರುತ್ತದೆ. ಆದುದರಿಂದ ಮಹಿಳೆಯರ ಸಹಭಾಗಿತ್ವ ಅಗತ್ಯವಿರುವುದು. ಈ ಕಾರಣಕ್ಕಾಗಿ ಮಹಿಳೆಯರು ಗ್ರಾಮ ಅರಣ್ಯ ಸಮಿತಿಗಳಲ್ಲಿ ಗ್ರಾಮ ಸಭೆಗಳಲ್ಲಿ, ಸ್ವಸಹಾಯ ಸಂಘಗಳಲ್ಲಿ ಹೆಚ್ಚಾಗಿ ಚರ್ಚೆ, ಸಭೆ ಹಾಗೂ ತರಬೇತಿಗಳಲ್ಲಿ ಭಾಗವಹಿಸುವುದರ ಮೂಲಕ ಅನುಭವ, ಜ್ಞಾನ, ಮಾಹಿತಿ ತಾಂತ್ರಿಕತೆಗಳನ್ನು ವ್ಯಕ್ತಪಡಿಸಿ, ವಿವಿಧ ಹೊರ ಅನುಕೂಲಕರ ಮಾಹಿತಿಗಳನ್ನು ಪಡೆದುಕೊಂಡು ಅಭಿವೃದ್ಧಿ ಹೊಂದುವ ಸಾಧ್ಯತೆ ಇದೆ ಎಂದು ಹೇಳಬಹುದು.

ಪರಿಶಿಷ್ಟ ಮಹಿಳೆಯರು ಗ್ರಾಮೀಣ ಅರಣ್ಯ ಸಮಿತಿಯ, ಜಲಾನಯನ ಸಮಿತಿಯ, ಸಭೆ ಹಾಗೂ ಗ್ರಾಮಸಭೆಗಳ ಸದುಪಯೋಗವನ್ನು ಜವಾಬ್ದಾರಿಯುತವಾಗಿ ಪಡೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಸಮಾಜದಲ್ಲಿ ಇತರ ವರ್ಗಗಳಂತೆ ಸರಿಸಮಾನರಾಗಿ ಯಾವುದೇ ಶೋಷಣೆ ಇಲ್ಲದೆ ಸ್ವಸಹಾಯ ಸಂಘಗಳ ಮುಖಾಂತರ ಹಾಗೂ ಮಹಿಳೆಯರ ಸಹಭಾಗಿತ್ವದ ಮೂಲಕ ಅಭಿವೃದ್ಧಿ ಹೊಂದುವ ನಿಟ್ಟಿನಲ್ಲಿರುವುದು ಈ ಕ್ಷೇತ್ರದಲ್ಲಿ ಕಂಡುಬರುತ್ತದೆ.

ಬುಡಕಟ್ಟು ಮಹಿಳಾ ಸಬಲೀಕರಣ ಹಾಗು ಸ್ವ-ಸಹಾಯ ಗುಂಪುಗಳು

ಭಾರತದ ಒಟ್ಟಾರೆ "ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡಾಗ ೨೦೦೧ನೇ ಜನಗಣತಿಯ ಅಂಕಿ-ಅಂಶಗಳ ಪ್ರಕಾರ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ.೪೮.೩ರಷ್ಟಿದೆ. ಆದರೆ ಆರ್ಥಿಕ ಚಟುವಟಿಕೆಯಲ್ಲಿ ಇವರ ಪಾಲು ಶೇ.೩೪ರಷ್ಟು ಮಾತ್ರ"". ಆದರೆ ಮಹಿಳೆಯರನ್ನು ರಾಷ್ಟ್ರೀಯ ಅಭಿವೃದ್ಧಿಯ ಮುಖ್ಯವಾಹಿನಿಯಲ್ಲಿ ತರದೇ ರಾಷ್ಟ್ರದ ಪ್ರಗತಿ ಹಾಗೂ ಸಮಾಜದ ಆರೋಗ್ಯಪೂರ್ಣ ಬೆಳವಣಿಗೆ ಅಸಾಧ್ಯ. ಆದ್ದರಿಂದ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯಲ್ಲಿ

ಮಹತ್ವದ ಪಾತ್ರವಹಿಸುತ್ತಿರುವ ಮಹಿಳೆಯರನ್ನು ದೇಶದ ಅಭ್ಯುದಯದ ಪ್ರತಿಯೊಂದು ಚಟುವಟಿಕೆಯಲ್ಲಿ ಪಾಲುದಾರಿಕೆಗೆ ಅವಕಾಶ ಕಲ್ಪಿಸಿಕೊಡಬೇಕಾದುದು ಅಗತ್ಯವಾಗಿದೆ.

ಸಮಾಜದಲ್ಲಿ ವ್ಯಕ್ತಿಯ ಸಾಮಾಜಿಕ ಹಾಗು ರಾಜಕೀಯ ಸ್ಥಾನಮಾನಗಳು ಸಾಮಾನ್ಯವಾಗಿ ಅವರ ಆರ್ಥಿಕ ಬಲವನ್ನೇ ಅವಲಂಬಿಸಿರುತ್ತವೆ. ಅದರಿಂದ ಮಹಿಳೆ ಬಲ ಪಡೆದುಕೊಂಡರೇ ಅವರಿಗೆ ಧ್ವನಿಬರುತ್ತದೆ. ಈ ಹಿನ್ನಲೆಯಲ್ಲಿ ಮಹಿಳೆಯರ ಸಬಲೀಕರಣ ಅಗತ್ಯವಾಗಿದೆ. ಈ ಸಬಲೀಕರಣ ಪ್ರಕ್ರಿಯೆಯ ಮುಖ್ಯ ಗುರಿ ಎಂದರೇ ಮಹಿಳೆಯರನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡುವುದಾಗಿದೆ. ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಆದಾಯ ಸೃಷ್ಟಿಸುವ ಚಟುವಟಿಕೆಯಲ್ಲಿ ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ನೇರವಾಗಿ ಪಾಲ್ಗೊಳ್ಳುವಂತೆ ಮಾಡುವುದಾಗಿದೆ.

ಸಬಲೀಕರಣವು ಮಹಿಳೆಯರು ಹಾಗೂ ಬುಡಕಟ್ಟು ಮಹಿಳೆಯರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಮೇಲ್ಮುಖ ಸಂಚಲನೆಯನ್ನು ಸಾಧಿಸಲು ಹಾಗೂ ಸಮಾಜದಲ್ಲಿ ಸೂಕ್ತ ಅಧಿಕಾರ ಹಾಗೂ ಸ್ಥಾನಮಾನ ಹೊಂದಲು ಉತ್ತಮಸಾಧನವಾಗಿದೆ. ಸಬಲೀಕರಣ ಪ್ರಕ್ರಿಯೆಯು ಲಿಂಗತಾರತಮ್ಯವನ್ನು ಹೋಗಲಾಡಿಸಿ ಮಹಿಳೆಯರಿಗೆ ಮತ್ತು ಬುಡಕಟ್ಟು ಮಹಿಳೆಯರಿಗೆ ವೈಯಕ್ತಿಕ ಸಾಮಾಜಿಕ ನೆಲೆಗಟ್ಟಿನಲ್ಲಿ ಸಮಾನತೆಯನ್ನು ಒದಗಿಸಿಕೊಡುತ್ತದೆ. "ಸಬಲೀಕರಣ ಎಂಬುದು ವಿಸ್ತೃತವಾಗಿ ಹಾಗೂ ವಿಭಿನ್ನನೆಲೆಗಳಲ್ಲಿ ಬಳಸಲಾಗುತ್ತದೆ. ಸಬಲೀಕರಣದ ಬಗ್ಗೆ ನಿರ್ದಿಷ್ಟವಾದ ಅರ್ಥನೀಡುವುದು ಕಷ್ಟ. ಸಬಲೀಕರಣ ಎಂಬುದು ಅಧಿಕಾರದೊಂದಿಗೆ ಇರುವಂಥದ್ದು. ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹವನ್ನು ಸಬಲೀಕರಣಗೊಳಿಸುವುದೆಂದರೆ ಅವರು ತಮ್ಮ ಪ್ರಯತ್ನಗಳಲ್ಲಿ ಅಂತಿಮ ಯಶಸ್ಸಿನ ಹಂತವನ್ನು ತಲುಪುವಂತೆ ಮಾಡುವ ನಿರಂತರ ಪ್ರಕ್ರಿಯೆ. ಈ ಸಬಲೀಕರಣ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಅಂಶಗಳೆಂದರೆ.

೧. ಜನರಲ್ಲಿ ಜಾಗೃತಿ ಹಾಗೂ ಆತ್ಮವಿಶ್ವಾಸಗಳ ಬೆಳವಣಿಗೆ

೨. ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರಲ್ಲಿ ಸಮಸ್ಯೆಗಳನ್ನು ನಿಭಾಯಿಸುವ ಸಾಮಾರ್ಥ್ಯ ವೃದ್ಧಿ.

೩. ಬುಡಕಟ್ಟು ಮಹಿಳೆಯರು ಹಾಗೂ ಗ್ರಾಮೀಣ ಪ್ರದೇಶದ ಹಿಂದುಳಿದ ಸಮುದಾಯಗಳ ಮಹಿಳೆಯರು ಸಂಪನ್ಮೂಲ ಹಾಗು ಸಾರ್ವಜನಿಕ ಸೌಲಭ್ಯಗಳಿಂದ ಹೆಚ್ಚಿನ ಪ್ರಯೋಜನ ಹೊಂದುವುದು.

೪. ಬುಡಕಟ್ಟು ಮಹಿಳೆಯರು ಮತ್ತು ಇತರೇ ಮಹಿಳೆಯರಲ್ಲಿ ವಿವಿಧ ಸಾಮಾಜಿಕ ಸಮೂಹಗಳ ಮಧ್ಯೆ ಸಂಬಂಧಗಳನ್ನು ಉತ್ತಮಪಡಿಸಿಕೊಳ್ಳುವುದು".[೧೦]

ಮಹಿಳಾ ಸಬಲೀಕರಣವು ಬಹುಮುಖ ಆಯಾಮಗಳನ್ನು ಹೊಂದಿರುವ ಪ್ರಕ್ರಿಯೆಯಾಗಿದೆ. ಇದು ಮಹಿಳೆಯರು ತನ್ನ ಸಾಮಾರ್ಥ್ಯವನ್ನು ಅರಿತುಕೊಳ್ಳುವಂತೆ ಹಾಗೂ ಜೀವನದ ಎಲ್ಲಾ ಸ್ಥರಗಳಲ್ಲಿ ಅವರು ಸಶಕ್ತರಾಗುವಂತೆ ಮಾಡುತ್ತದೆ. ಮಹಿಳೆಯರು ತಮ್ಮ ಹಕ್ಕು ಹಾಗೂ ಸಾಮಾರ್ಥ್ಯಗಳನ್ನು ಹಾಗೂ ಸಾಮಾಜಿಕ, ಆರ್ಥಿಕ, ರಾಜಕೀಯ ಶಕ್ತಿಗಳು ತಮ್ಮ ದೈನಂದಿನ ಬದುಕಿನ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಅರಿತುಕೊಳ್ಳುವ ಮೂಲಕವೇ ಈ ಸಬಲೀಕರಣ ಪ್ರಕ್ರಿಯೆ ಆರಂಭಗೊಳ್ಳುತ್ತಿದೆ. ತನ್ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಮೇಲೆತ್ತುತ್ತದೆಯಲ್ಲದೆ ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸಿ, ರಾಜಕೀಯ ಪ್ರಬುದ್ಧನಾಗಿಸುತ್ತದೆ. ಆದ್ದರಿಂದ ಇತ್ತೀಚಿನ ದಿನಗಳಲ್ಲಿ ರಾಜಕೀಯ ಚಿಂತಕರು, ಸಾಮಾಜ ಸುಧಾರಕರು, ಶಿಕ್ಷಣ ತಜ್ಞರು, ಮಹಿಳಾ ಸಂಘಟಕರು ಮುಂತಾದವರು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಶ್ರೇಷ್ಠ ಮಹತ್ವ ನೀಡುತ್ತಿದ್ದಾರೆ.

ಪ್ರತಿಯೊಂದು ದೇಶದ ಆರ್ಥಿಕಾಭಿವೃದ್ಧಿಯು ಅಲ್ಲಿನ ಸಾಮಾಜಿಕ ಅಭಿವೃದ್ಧಿಯನ್ನು ಅವಲಂಬಿಸಿದೆ. ಸಾಮಾಜಿಕ ಅಭಿವೃದ್ಧಿಯು ಸಾಧ್ಯವಾಗಬೇಕಾದರೆ ಸಮಾಜದ ಯಾವುದೇ ಅಂಗವು ನಿರ್ಲಕ್ಷಿಸಲ್ಪಡಬಾರದು. ಸಮಾಜದಲ್ಲಿ ಮಹಿಳೆಯರು ಪುರುಷರಷ್ಟೇ ಸಮಪಾಲು ಹೊಂದಿರುವರಲ್ಲದೆ, ದೇಶದ ಕೆಲಭಾಗಗಳ ಆರ್ಥಿಕಾಭಿವೃದ್ಧಿಯಲ್ಲಿ ಪುರುಷರಿಗಿಂತ ಮಹಿಳೆಯರ ಕೊಡುಗೆಯೇ ಹೆಚ್ಚಾಗಿದೆ. ಆದ್ದರಿಂದ ಸಾಮಾಜಿಕ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಇಂದು ಮಹಿಳಾ ಸಂಬಲೀಕರಣಕ್ಕೆ ವಿಶೇಷ ಪ್ರಾಧಾನ್ಯತೆ ನೀಡುವುದು ಅಗತ್ಯವಾಗಿದೆ. ಗ್ರಾಮೀಣ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಮನೆಗೆಲಸದೊಂದಿಗೆ ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಂಡು ಆರ್ಥಿಕ ಚಟುವಟಿಕೆಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಇತ್ಯಾದಿ ಚಟುವಟಿಕೆಗಳನ್ನು ಕೈಗೊಂಡಿರುತ್ತಾರೆ. ಹೀಗೆ ಅವರು ತಮ್ಮ ಕುಟುಂಬದ ನಿರ್ವಹಣೆಗಾಗಿ ಗ್ರಾಮೀಣ ಆರ್ಥಿಕ ಚಟುವಟಿಕೆಯನ್ನು ಕೈಗೊಂಡಿರುತ್ತಾರೆ. ಆದಾಗ್ಯೂ ಅವರ ಆರ್ಥಿಕ ಸ್ಥಿತಿಗತಿಗಳು ತೀರಾ ಇತ್ತೀಚಿನವರೆಗೂ ಅಷ್ಟು ಸುಧಾರಿಸಿಲ್ಲದಿರುವುದು ಹಾಗು ಜೀವನಮಟ್ಟ ಉನ್ನತವಾಗಿಲ್ಲದೆ ಇರುವುದು ದುರದೃಷ್ಟಕರ. ಮಹಿಳೆಯರಲ್ಲಿ ಸಾಕಷ್ಟು ಉದ್ಯಮಶೀಲತೆ ಇದ್ದಾಗ್ಯೂ ಅವರು ಆರ್ಥಿಕವಾಗಿ ಸಶಕ್ತರಾಗಿಲ್ಲದಿರುವುದೇ ಅವರ ಹಿಂದುಳಿವಿಕೆಗೆ ಕಾರಣವಾಗಿದೆ. ಹಣಕಾಸಿನ ಕೊರತೆಯಿಂದಾಗಿ ಅವರು ತಮ್ಮಲ್ಲಿರುವ ಔದ್ಯಮಿಕ ಕೌಶಲ್ಯಗಳನ್ನು ಆರ್ಥಿಕ ಚಟುವಟಿಕೆಗಳಾಗಿ ಪರಿವರ್ತಿಸುವಲ್ಲಿ ಹಿಂದುಳಿದಿದ್ದಾರೆ. ಅವುಗಳ ಕಾರಣದಿಂದ ಹಣಕಾಸಿನ ಅಗತ್ಯತೆಯಿದೆ. ಈ ಸಂಗತಿಯನ್ನು ಮನಗಂಡ ಸರಕಾರವು ಸ್ವಸಹಾಯ ಗುಂಪುಗಳು ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.

ಸ್ವ ಸಹಾಯ ಗುಂಪುಗಳು ಗ್ರಾಮೀಣ ಮಹಿಳೆಯರ ಮತ್ತು ಬುಡಕಟ್ಟು ಮಹಿಳೆಯರ ಸಂಘಟಿತ ಗುಂಪಿನಿಂದ ನಿರ್ವಹಿಸಲ್ಪಡುವ ಹಣಕಾಸಿನ ವ್ಯವಹಾರದ ಘಟಕಗಳಾಗಿವೆ. ಗ್ರಾಮೀಣ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಇದರ ಸದಸ್ಯರಾಗಿದ್ದು, ಅವರು ತಮ್ಮ ಉಳಿತಾಯದಿಂದ ಹಣಕಾಸು ಸಂಪನ್ಮೂಲಗಳನ್ನು ಕ್ರೂಢೀಕರಿಸುಸುತ್ತಾರೆ. ಹಾಗೂ ಇದನ್ನು ತಮ್ಮಲ್ಲಿಯೇ

ಹಣಕಾಸಿನ ಅಗತ್ಯವಿರುವ ಸದಸ್ಯರಿಗೆ ಸಾಲವಾಗಿ ನೀಡಲಾಗುತ್ತದೆ. ಈ ಸ್ವಸಹಾಯ ಗುಂಪುಗಳು ಗ್ರಾಮೀಣಾಭಿವೃದ್ಧಿಯ ಉದ್ದೇಶವನ್ನು ಸಾಧಿಸುವ ಹಾಗೂ ಗ್ರಾಮೀಣಾಭಿವೃದ್ಧಿ ಯೋಜನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಪಾಲ್ಗೊಳ್ಳುವಿಕೆಯನ್ನು ಸಾಧಿಸುವ ಪರ್ಯಾಯ ಸಾಧನಗಳಾಗಿವೆ. ಇವು ಗ್ರಾಮೀಣ ಹಿಂದುಳಿದ ಮತ್ತು ಬುಡಕಟ್ಟು ಮಹಿಳೆಯರನ್ನು ಉದ್ಯೋಗಸ್ಥರನ್ನಾಗಿಸಲು ಅಗತ್ಯವಿರುವ ಸಣ್ಣ ಪ್ರಮಾಣದ ಸಾಲಸೌಲಭ್ಯಗಳನ್ನು ಒದಗಿಸುವ, ಹಾಗೂ ಔದ್ಯಮಿಕ ಚಟುವಟಿಕೆಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಳ್ಳಲು ಉತ್ತೇಜಿಸುವ ಸಂಘಟಿತ ವ್ಯವಸ್ಥೆಯಾಗಿದೆ. ಹಣಕಾಸು ಸಂಪನ್ಮೂಲಗಳ ಸಂಗ್ರಹಣೆ, ನಿರ್ವಹಣೆ, ಸಾಲದ ಅಗತ್ಯತೆ ಪೂರೈಸುವುದು, ಬ್ಯಾಂಕುಗಳೊಂದಿಗೆ ಸಂಪರ್ಕ ಸಾಧಿಸುವಿಕೆ ಹಣಕಾಸು ವಿಷಯದಲ್ಲಿ ಸ್ವಯಂ ಶಿಸ್ತುಪಾಲನೆ ಇವುಗಳನ್ನು ಸಾಧಿಸುವುದು ಹೇಗೆ ಎಂಬುದನ್ನು ಈ ಮಹಿಳಾ ಸ್ವಸಹಾಯ ಗುಂಪುಗಳು ತೋರಿಸಿಕೊಟ್ಟಿವೆ.

ಸ್ವಸಹಾಯ ಗುಂಪುಗಳು ಬಡಮಹಿಳೆಯರ ಮತ್ತು ಬುಡಕಟ್ಟು ಮಹಿಳೆಯರ ಅಭಿವೃದ್ಧಿ ಯೋಜನೆಗಳ ಬಗ್ಗೆ ಜಾಗೃತಿಯನ್ನು ಮೂಡಿಸುವ ಗುರಿಹೊಂದಿವೆ. ಗ್ರಾಮೀಣ ಬಡಜನತೆಗಾಗಿ ಸರ್ಕಾರ ರೂಪಿಸಿದ ಕಾರ್ಯಕ್ರಮಗಳನ್ನು ಅವರು ಅರಿತುಕೊಳ್ಳಲು ಹಾಗೂ ಅವುಗಳ ಸದುಪಯೋಗವನ್ನು ಪಡೆದುಕೊಳ್ಳಲು ಅಗತ್ಯವಾದ ಮಾಹಿತಿ ಹಾಗೂ ತಿಳುವಳಿಕೆಯನ್ನು ಕೂಡ ಈ ಸ್ವಸಹಾಯ ಗುಂಪುಗಳು ನೀಡುತ್ತವೆ.

ಜನರೊಂದಿಗೆ ನಿಕಟ ಸಂಪರ್ಕ ಹೊಂದಿ, ಸರ್ಕಾರದ ಯೋಜನೆಗಳಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯರು ಮತ್ತು ಇತರೆ ಸಮುದಾಯದ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವಲ್ಲಿ ಈ ಸ್ವಸಹಾಯ ಗುಂಪುಗಳು ಅತ್ಯಂತ ಜನಪ್ರಿಯಸಾಧನವಾಗಿ ಹೊರಹೊಮ್ಮಿದೆ. ಇವುಗಳಿಂದ ಮಹಿಳೆಯರ ಆರ್ಥಿಕ ಸ್ಥಿತಿಗತಿ ಸುಧಾರಿರಿಸುತ್ತಿದೆ. ಸಾಮಾಜಿಕ ಸ್ಥಾನಮಾನ ಹೆಚ್ಚುತ್ತದೆ. ಇದರಿಂದ ಸಹಜವಾಗಿಯೇ ಸಮಾಜವು ಮಹಿಳೆಯರ ಸಾಮಾರ್ಥ್ಯವನ್ನು ಅರಿತುಕೊಳ್ಳಲು ಹಾಗು ಅವರನ್ನು ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ. ಅಲ್ಲದೆ ಮಹಿಳೆಯರು ತಮ್ಮ ಕಾರ್ಯಸಾಧನೆಗಳ ಬಗ್ಗೆ ಆತ್ಮ ತೃಪ್ತಿಹೊಂದುವುದಲ್ಲದೆ ಸಮಾಜದಲ್ಲಿ ತಮ್ಮದೆಯಾದ ಸ್ಥಾನವನ್ನು ಹೊಂದಲು ಸಾಧ್ಯವಾಗುತ್ತದೆ.

ಸ್ವಸಹಾಯ ಗುಂಪುಗಳನ್ನು ಆ ಗುಂಪಿನ ಸದಸ್ಯರೇ ನಿರ್ವಹಿಸುವುದರಿಂದ ಅವರಲ್ಲಿ ಕಾರ್ಯದಕ್ಷತೆ ಹೆಚ್ಚುತ್ತದೆ. ಈ ಗುಂಪುಗಳ ಸದಸ್ಯರೆಲ್ಲ ನಿಯಮಿತ ಸಭೆಗಳಲ್ಲಿ ಹಾಜರಾಗಿ, ಗುಂಪಿನ ಹಣಕಾಸು ಸ್ಥಿತಿಗತಿಗಳ ಬಗ್ಗೆ ಹಾಗೂ ತತ್ಸಂಬಂಧಿ ಇತರೆ ವಿಷಯಗಳ ಬಗ್ಗೆ ಚರ್ಚಿಸುವುದರಿಂದ ಅವರಲ್ಲಿ ಹಣಕಾಸು ವಿಷಯದ ವ್ಯವಹಾರಕ್ಕೆ ಸಂಬಂಧಿಸಿದಂತೆ ಹಾಗೂ ಸಂಭಾಷಣೆ ಕೌಶಲ್ಯಗಳು ಬೆಳೆಯುತ್ತವೆ. ಜೊತೆಗೆ ಪ್ರಚಲಿತ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸೂಕ್ತ ವೇದಿಕೆ ದೊರೆಯುವಂತಾಗುತ್ತದೆ. ಹಾಗೂ ಅವುಗಳಿಗೆ ಸ್ಪಂದಿಸಲು ಸೂಕ್ತ ಅವಕಾಶ ದೊರಕುತ್ತದೆ. ಬುಡಕಟ್ಟು ಮಹಿಳೆಯರಲ್ಲಿ ಮತ್ತು ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರಲ್ಲಿ ಬಡತನ ನಿರ್ಮೂಲನೆ

ಮಾಡಿ, ಆರ್ಥಿಕಾಭ್ಯುದಯ ಸಾಧಿಸಬೇಕಾದರೆ ಈ ಸ್ವಸಹಾಯ ಸಂಘಗಳ ಮೂಲಕವೆ ಸಾಮಾಜಿಕ ಸಂಚಲನೆ ಅಗತ್ಯ. ಈ ಗುಂಪಿನ ಮಹಿಳೆ ಎಲ್ಲರಲ್ಲು ಒಂದೇ ಎಂಬ ಭಾವನೆ ಇರುತ್ತದೆ. ಈ ಭಾವನೆಗಳೇ ಅವರಲ್ಲಿ ಪರಸ್ಪರ ಸಹಾಯ, ಸಹಕಾರ, ಸಹಭಾಗಿತ್ವ ಹಾಗೂ ಸಬಲತೆಯ ಸಂಸ್ಕೃತಿಯನ್ನು ಬೆಳೆಯಸುತ್ತದೆ. ಈ ಸ್ವಸಹಾಯ ಗುಂಪುಗಳಲ್ಲಿ ಸದಸ್ಯರೆಲ್ಲಾ ಒಂದಾಗಿ ಸಾಮಾಜಿಕ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಉತ್ಪಾದನಾ ವೆಚ್ಚದಲ್ಲಿ ಇಳಿಕೆಯನ್ನೊಳಗೊಂಡಂತೆ ಅನೇಕ ಆರ್ಥಿಕ ಪ್ರಯೋಜನಗಳು ಉಂಟಾಗುತ್ತವೆ.

ಸ್ವಸಹಾಯ ಗುಂಪುಗಳು ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ, ಹಾಗು ಪ್ರಜಾಸತ್ತಾತ್ಮಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಇವೇ ಮುಂತಾದ ಜೀವನದ ವಿವಿಧ ಸ್ಥರಗಳಲ್ಲಿ ಮಹಿಳೆಯರ ಸಾಮಾರ್ಥ್ಯವನ್ನು ಹಾಗೂ ಸ್ಥಾನವನ್ನು ಹೆಚ್ಚಿಸುತ್ತವೆ. ದೇಶದ ಸಾಮಾಜಿಕ, ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳಲು ಉತ್ತೇಜನ ನೀಡುತ್ತವೆ. ಸಮಾಜವು ಸರಿಯಾದ ದಿಶೆಯಲ್ಲಿ ರೂಪುಗೊಳ್ಳುವಲ್ಲಿ ಮಹಿಳೆಯರ ಮತ್ತು ಬುಡಕಟ್ಟು ಮಹಿಳೆಯರ ಅಭಿವೃದ್ಧಿಯನ್ನು ಎತ್ತಿಹಿಡಿಯುತ್ತವೆ. ಹಾಗೂ ಈ ದಿಶೆಯಲ್ಲಿ ಮಹಿಳೆಯರು ತಮ್ಮ ಅಂತಃಸತ್ವವನ್ನು ಬೆಳೆಸಿಕೊಳ್ಳಲು ಪ್ರೇರಣೆನೀಡುತ್ತವೆ. ಸ್ವಸಹಾಯ ಸಂಘಗಳು ತರಬೇತಿ ನೀಡುವುದರ ಮೂಲಕ ಅವರಲ್ಲಿ ಸ್ವಯಂಶಿಸ್ತು ಸ್ವಾವಲಂಬನೆಯನ್ನು ಬೆಳೆಸುತ್ತವೆ. ಎಲ್ಲಕ್ಕೂ ಮಿಗಿಲಾಗಿ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ತುಂಬಿ ದೈನಂದಿನ ಜೀವನದಲ್ಲಿ ಯಶಸ್ವಿಯಾಗುವಂತೆ ಮಾಡುತ್ತವೆ.

ಮಹಿಳಾ ಸಬಲೀಕರಣದ ಮೂಲತತ್ವಗಳು

ಸ್ವಸಹಾಯ ಸಂಘಗಳ ಸಹಾಯದಿಂದ ಬುಡಕಟ್ಟು ಮಹಿಳೆಯರು ಮತ್ತು ಹಿಂದುಳಿದ ಇತರೆ ಮಹಿಳೆಯರು ಬೌದ್ಧಿಕವಾಗಿ ಪ್ರಬಲರಾಗುತ್ತಿದ್ದಾರೆ. ಈ ಸಂಘಗಳು ಮಹಿಳೆಯರಲ್ಲಿ ಕೆಲವು ರೀತಿಯಾದ ಸಹಕಾರ ಮೂಲತತ್ವಗಳನ್ನು ಬಿತ್ತಿವೆ.

ಸ್ವಾವಲಂಬನೆ

ಭೌತಿಕವಾಗಿ ಮತ್ತು ಮಾನಸಿಕವಾಗಿ ಬಲಗೊಳ್ಳುವುದರ ಮೂಲಕ ಸ್ವಾವಲಂಬನೆ ಹೊಂದಬೇಕು. ಐಕ್ಯತೆ, ಒಗ್ಗಟ್ಟು ಹಂಚಿಕೊಳ್ಳುವಿಕೆ ಮತ್ತು ಒಬ್ಬರಿಗೊಬ್ಬರು ಕಾಳಜಿ ತೋರಿಸುವುದರ ಮೂಲಕ ಭೌತಿಕ ಸಂಪನ್ಮೂಲಗಳ ಹಿಡಿತಸಾಧಿಸಿದರೆ ಆತ್ಮವಿಶ್ವಾಸ, ಸಾಮಾರ್ಥ್ಯ, ಸ್ವವಿಶ್ಲೇಷಣೆ ಮತ್ತು ಅರಿವಿನ ಮೂಲಕ ಮಾನಸಿಕವಾಗಿ ಬಲಗೊಂಡು ಮಹಿಳೆಯರು ಸ್ವಾವಲಂಬನೆಯನ್ನು ಸಾಧಿಸುವುದರಿಂದ ಸ್ವಾವಲಂಬನೆಯತ್ತ ಸಾಗುವುದೇ ಸಶಕ್ತೀಕರಣದ ಉದ್ದೇಶವಾಗಬೇಕು.

ಸ್ವ-ಅರಿವು

ಮಹಿಳೆಯರು ತಮ್ಮ ಜೀವನದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಅದು ಹೇಗಿದೆ, ಯಾಕೆ ಹೀಗಿದೆ, ಸರಿಯಿಲ್ಲದಿದ್ದರೆ ಅದನ್ನು ಹೇಗೆ ಸರಿಪಡಿಸಬೇಕು ಎಂದು ಚಿಂತಿಸಬೇಕು. ಸಾಕ್ಷರತೆ,

ಶಿಕ್ಷಣ, ಮಾಹಿತಿ, ಜ್ಞಾನ ಸಂಪಾದನೆ ಮತ್ತು ಇತರರ ಅನುಭವಗಳನ್ನು ತಿಳಿದುಕೊಳ್ಳುವುದರ ಮೂಲಕ ಸ್ವ-ಅರಿವು ಪಡೆಯಬೇಕು, ಜೊತೆಗೆ ಸಾಮಾಜಿಕ ಅರಿವು ಪಡೆದುಕೊಳ್ಳಬೇಕು.

ಕೌಶಲ್ಯ ಮತ್ತು ಸಾಮರ್ಥ್ಯ ಬೆಳೆಸುವಿಕೆ

ಮಹಿಳೆಯರು ಉತ್ಪಾದಕಶಕ್ತಿ ಪಡೆಯಲು ಮತ್ತು ಆರ್ಥಿಕವಾಗಿ ಸ್ವತಂತ್ರರಾಗಲು ಇದು ಸಹಾಯಮಾಡುತ್ತದೆ. ಶಿಕ್ಷಣ, ತರಬೇತಿ, ಮಾಹಿತಿ ಮತ್ತು ಜ್ಞಾನಸಂಪಾದನೆಯಿಂದ ಕೌಶಲ್ಯ ಬೆಳೆಸಿಕೊಳ್ಳಬೇಕು. ಆದ್ದರಿಂದ ಆದಾಯಗಳಿಸಿ ಆರ್ಥಿಕ ಸ್ವಾವಲಂಬನೆ ಹೊಂದಬೇಕು. ಮಹಿಳೆಯರು ಈ ಗುಂಪಿನಲ್ಲಿ ಕೆಲಸ ಮಾಡುವುದನ್ನು ಕಲಿತುಕೊಳ್ಳಬೇಕು. ಸಮಾನ ಭಾವನೆಯಿರಬೇಕು. ಅಭಿವೃದ್ಧಿ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ಯೋಜನೆ ಮಾಡುವುದು, ಅದನ್ನು ಕಾರ್ಯಗತಗೊಳಿಸುವುದು ಮತ್ತು ಮೇಲ್ವಿಚಾರಣೆ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಲ್ಲಿಯ ತಂತ್ರಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು. ಇವೆಲ್ಲವನ್ನು ಸಾಧಿಸಬೇಕಾದರೆ ಮುಖ್ಯವಾಗಿ ಮಹಿಳೆಯರು ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕು.

ಸಾಮುದಾಯಿಕತೆ ಮತ್ತು ಸಂಘಟನೆ

ಸಂಘಟನಾ ತತ್ವವು ಮಹಿಳಾ ಸಶಕ್ತೀಕರಣದ ಆಧಾರವಾಗಿದೆ. ಎಲ್ಲಾ ಮಹಿಳೆಯರು ಸಾಮಾನ್ಯವಾಗಿ ಎದುರಿಸುವ ಸಮಸ್ಯೆಯನ್ನು ಇಟ್ಟುಕೊಂಡು ಮಹಿಳೆಯರು ಒಂದುಕಡೆ ಸೇರಿ ಸಂಘಟನೆಗೊಂಡು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುವುದರ ಮೂಲಕ ಸಮುದಾಯಿಕ ಸಶಕ್ತೀಕರಣದತ್ತ ಸಾಗಬೇಕು. ಈ ಸಮುದಾಯಿಕತೆ ಮತ್ತು ಸಂಘಟನೆ ಮಹಿಳೆಯರ ಪ್ರತಿಭಟಿಸುವ ಶಕ್ತಿಯನ್ನು ಬಲಗೊಳಿಸುತ್ತದೆ. ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸಲು ಸಹಾಯಮಾಡುತ್ತದೆ. ಸಂಪನ್ಮೂಲಗಳನ್ನು ಸೇರಿಸಿ ವಿತರಿಸುವ ವ್ಯವಸ್ಥೆ ಮಾಡುತ್ತದೆ. ಕೌಶಲ್ಯ ಪಡೆಯುವುದಕ್ಕೆ ಅನುಭವ ಹಂಚಿಕೊಳ್ಳುವುದಕ್ಕೆ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳಲು ಸ್ಥಳ ಮತ್ತು ಸಮಯಪಡೆಯಲು ಅವಕಾಶ ಮಾಡಿಕೊಡುತ್ತದೆ.

ಹೊರ ಜಗತ್ತಿನ ಸಂಪರ್ಕ

ಹೊರ ಜಗತ್ತಿನ ಸಂಪರ್ಕವು ಮಹಿಳಾ ಸಶಕ್ತೀಕರಣಕ್ಕೆ ಪೂರಕಸಾಧನವಾಗಿದೆ. ವಿವಿಧ ಸಂಸ್ಥೆಗಳೊಂದಿಗೆ ಶಿಕ್ಷಣ, ಹಣಕಾಸು, ವ್ಯವಹಾರ, ಮಾರುಕಟ್ಟೆ, ಸಂಘಟನೆ, ಮತ್ತು ಅಭಿವೃದ್ಧಿ ಸಂಸ್ಥೆಗಳು, ಅಧಿಕಾರಿಗಳು, ರಾಜಕಾರಣಿಗಳು, ನೀತಿ ನಿರೂಪಕರು ಮತ್ತು ಸಮಾಜ ಕಾರ್ಯಕರ್ತರೊಂದಿಗಿನ ಸಂಪರ್ಕ ಮಹಿಳೆಯರ ಅಂದಿನ ಜ್ಞಾನದ ಮಟ್ಟವನ್ನು ಉತ್ತಮಪಡಿಸುತ್ತದೆ. ಮಾಹಿತಿ ಲಭ್ಯತೆ ಹಾಗೂ ಅವಕಾಶಗಳನ್ನು ಸೃಷ್ಟಿಸುತ್ತದೆ. ಮಹಿಳಾ ವಿಷಯಗಳಿಗೆ ವಿಶಾಲವಾದ ಮತ್ತು ಜಾಗತಿಕ ದೃಷ್ಟಿಕೋನ ಮತ್ತು ಚೌಕಟ್ಟನ್ನು ಒದಗಿಸುತ್ತದೆ.

ಗ್ರಾಮೀಣ ಮಹಿಳೆ ಮತ್ತು ಸ್ವಸಹಾಯ ಗುಂಪುಗಳು

ಭಾರತ ಹಳ್ಳಿಗಳಿಂದ ಕೂಡಿದ ರಾಷ್ಟ್ರ. ದೇಶದ ಮುಕ್ಕಾಲು ಭಾಗದ ಜನತೆ ಗ್ರಾಮದಲ್ಲಿ

ವಾಸವಾಗಿದ್ದಾರೆ. "ಗ್ರಾಮೀಣ ಪ್ರದೇಶದಲ್ಲಿ ಲಿಂಗ ತಾರತಮ್ಯ ಅಧಿಕವಾಗಿದೆ. ಕಡಿಮೆಯಿರುವ, ಸಾಕ್ಷರತಾ ಪ್ರಮಾಣ ಹಾಗು ಸಾಂಪ್ರದಾಯಿಕ ದೃಷ್ಟಿಕೋನ ಇದಕ್ಕೆ ಮುಖ್ಯ ಕಾರಣಗಳು. ಮಹಿಳೆಗೆ ಕಡಿಮೆಸ್ಥಾನ ಪುರುಷರಿಗೆ ಹೆಚ್ಚಿನಸ್ಥಾನ ಸಿಗುತ್ತಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸ್ಥಾನ ನೀಡಬೇಕೆಂಬ ಸಾಂವಿಧಾನಿಕ ಅವಕಾಶಗಳಿದ್ದರೂ ಕೂಡ ಬಹಳಷ್ಟು ಮಹಿಳೆಯರು ಪುರುಷ ಪ್ರಧಾನ ಸಮಾಜದಿಂದಾಗಿ ಎಲ್ಲಾ ಅಂಶಗಳಲ್ಲು ಅವರು ಎರಡನೆ ದರ್ಜೆಯವರಾಗಿ ಉಳಿಯಬೇಕಾಗಿದೆ. ಒಟ್ಟು ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಗ್ರಾಮೀಣ ಮಹಿಳೆಯರ ಪ್ರಮಾಣ ಶೇ.೩೦.೬೨ ಹಾಗೂ ನಗರದಲ್ಲಿ ಈ ಪ್ರಮಾಣ ಶೇ.೬೪.೫ ಇರುತ್ತದೆ."[೧೧]

ಸಾಂಪ್ರದಾಯಿಕ ಕುಟುಂಬಗಳಲ್ಲಿ ಸ್ತ್ರೀಯರ ಸ್ಥಾನಮಾನ ತುಂಬಾ ಶೋಚನಿಯವಾಗಿದೆ. ಸ್ತ್ರೀಯರು ಆಸ್ತಿಯ ಹಕ್ಕಿನಿಂದ ವಂಚಿತರಾಗಿ, ಆರ್ಥಿಕವಾಗಿ ಪರಾವಲಂಬಿಗಳಾಗಿ ನಡೆದುಕೊಂಡು ಬಂದ ದಾರಿ ಇದೆ. ಸ್ತ್ರೀ-ಪುರುಷನ ಸಾಧನವಾಗಿ, ಮಕ್ಕಳ ಹಡೆಯುವ ಯಂತ್ರವಾಗಿ, ಮನೆಯ ಕೆಲಸದವಳಾಗಿ ಕಾಲ ಕಳೆಯಬೇಕಾಗಿತ್ತು. ಇಷ್ಟೆಲ್ಲಾ ಸಮಸ್ಯೆಗಳ ನಡುವೆಯು ಈ ಯುಗದಲ್ಲಿ ಸ್ತ್ರೀಯರ ಸ್ಥಾನಮಾನಗಳು ಉನ್ನತಿಯನ್ನು ಹೊಂದುವುದು ಗಮನಾರ್ಹ ಸಂಗತಿ. ಸ್ತ್ರೀ ಆರ್ಥಿಕವಾಗಿ ಸ್ವಾತಂತ್ರವಾಗಲು ಅನೇಕ ಅವಕಾಶಗಳನ್ನು ಕೊಡಲಾಯಿತು. ಆಧುನಿಕ ಸಂದರ್ಭದಲ್ಲಿ ಕಾನೂನುಗಳು, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಸೌಲಭ್ಯಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮಹಿಳೆ ಅಭಿವೃದ್ಧಿಯಾಗಲು ಸಾಧ್ಯವಿದ್ದರು ಗ್ರಾಮೀಣ ಮಹಿಳೆ ಈ ಎಲ್ಲಾ ಅವಕಾಶಗಳಿಂದ ವಂಚಿತಳಾಗಿದ್ದಾಳೆ.

ಮಹಿಳಾ ಕಲ್ಯಾಣಕ್ಕಾಗಿ ಸರ್ಕಾರವು ಅನೇಕ ಬಗೆಯ ಬೆಂಬಲ ಸೇವೆಗಳನ್ನು ಪೂರೈಸಲು ಕ್ರಮಕೈಗೊಂಡಿದೆ. ೧೯೯೨ರಲ್ಲಿ ಭಾರತ ಸರ್ಕಾರವು ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರಿಗೆ ಶಿಕ್ಷಣ ನೀಡಲು ಭಾರತೀಯ ಎಲ್ಲಾ ಭಾಷೆಗಳಲ್ಲೂ ಕೈಪಿಡಿಗಳನ್ನು ಪ್ರಕಟಿಸಿದೆ. ಸರ್ಕಾರದ ನೀತಿಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಲಿಂಗದೃಷ್ಟಿಕೋನಗಳನ್ನು ಸೇರ್ಪಡೆಗೊಳಿಸಲು ನೆರವಾಗಲು ಮಹಿಳಾ ರಾಷ್ಟ್ರೀಯ ಸಂಪನ್ಮೂಲ ಕೇಂದ್ರ ಸ್ಥಾಪನೆಯಾಗಿದೆ. ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಸಾಮಾಜಿಕ ಆರ್ಥಿಕ ಪ್ರಗತಿ, ಸಬಲೀಕರಣ ಮತ್ತು ರಾಜಕೀಯ ಪಾಲ್ಗೊಳ್ಳುವಿಕೆ ಬಗೆಗೆ ಮಹಿಳಾ ರಾಷ್ಟ್ರೀಯ ಆಯೋಗವು ಅನೇಕ ಪ್ರಯತ್ನಗಳನ್ನು ನಡೆಸಿದೆ. ಆರ್ಥಿಕ ಸುಧಾರಣೆಯ ಸಂದರ್ಭದಲ್ಲಿ ಮಹಿಳಾ ಉದ್ಯೋಗವನ್ನು ಸಂರಕ್ಷಿಸುವ, ವಿಸ್ತರಿಸುವ ಕುರಿತು ಕೆಲವು ನೀತಿಗಳನ್ನು ಸರ್ಕಾರ ರೂಪಿಸಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೃಷಿಯನ್ನೊಳಗೊಂಡಂತೆ ಉತ್ಪಾದನೆಯ ಎಲ್ಲಾ ಕ್ಷೇತ್ರಗಳಲ್ಲಿ ಯಂತ್ರಗಳ ಬಳಕೆ ಸಾಮಾನ್ಯವಾಗುತ್ತಿದೆ. ಗಣಕೀಕರಣ ಅಥವ ಕಂಪ್ಯೂಟರೈಜೇಷನ್ ವ್ಯಾಪಕವಾಗಿ ಹಬ್ಬುತ್ತಿದೆ. ಮಾನವಸಶಕ್ತಿಯ ಅಗತ್ಯ ದಿನೇ ದಿನೇ ಕ್ಷೀಣಿಸುತ್ತಿದೆ. ಹಲವಾರು ಮಂದಿ ಸೇರಿ ಹಲವಾರು ಗಂಟೆಗಳ ಕಾಲ ಮಾಡಬಹುದಾದ ಕೆಲಸಕಾರ್ಯಗಳನ್ನು ಒಂದು ಇಲ್ಲವೆ ಕೆಲವು ಯಂತ್ರಗಳು ಇನ್ನು ಕಡಿಮೆ ಅವದಿಯಲ್ಲಿ ಇನ್ನು ಉತ್ತಮ ರೀತಿಯಲ್ಲಿ ಮಾಡಿ

ಮುಗಿಸುವ ಸಾಧ್ಯತೆಗಳು ಹೇರಳವಾಗಿ ಕಂಡುಬರುತ್ತಿದೆ. ತತ್‌ಫಲವಾಗಿ ಕೃಷಿ ಅಸಂಘಟಿತ ಕ್ಷೇತ್ರಗಳಲ್ಲಿಯು ಸ್ತ್ರೀಯು ಆರ್ಥಿಕ ಸಹಭಾಗಿತ್ವ ಗಮನಾರ್ಹವಾಗಿ ಕಡಿಮೆಯಾಗುತ್ತಿರುವುದು ಆತಂಕ ಹುಟ್ಟಿಸಿದೆ.

ಕತ್ತಲೆಯಿಂದ ಬೆಳಕಿನ ಕಡೆಗೆ ಒಯ್ಯುವ ಪ್ರಯತ್ನ ವ್ಯಾಪಕವಾಗಿ ಆಗಬೇಕಾಗಿದೆ. ಅದರಲ್ಲೂ ಭಾರತೀಯ ಮಹಿಳೆಯರು ವಿಶೇಷವಾಗಿ ಗ್ರಾಮೀಣ ಮಹಿಳೆ ಮತ್ತು ಬುಡಕಟ್ಟು ಮಹಿಳೆಯರು ಬೆಳಕುಕಾಣುವುದು. ಕಲ್ಯಾಣ ಸಾಧಿಸಲಾಗುವುದು. ವ್ಯವಸ್ಥಿತ ಪ್ರಯತ್ನ, ಸಂಘಟನಾಶಕ್ತಿ, ಸತತ ಹೋರಾಟ, ಅವಿಶ್ರಾಂತ ಪರಿಶ್ರಮ, ವ್ಯಾಪಕ ಆಂದೋಲನದಿಂದ ಎಲ್ಲವನ್ನು ನಾವು ಅರಿಯಬೇಕಾಗಿದೆ. ಮಹಿಳೆಯರ ಆರ್ಥಿಕ ಹಿತಾರಕ್ಷಣೆ ಮಾಡುವ ಸದುದ್ದೇಶದಿಂದ ಆರ್ಥಿಕ ಕ್ಷೇತ್ರದಲ್ಲಿಯು ಮಹಿಳೆಯರು ಸಂಘಟಿತರಾಗಲು ಶೋಷಣೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಹಲವಾರು ಮಹಿಳಾ ಸಂಘಟನೆಗಳು ಅಸ್ತಿತ್ವಕ್ಕೆ ಬಂದಿವೆ. ಉದಾ: ದುಡಿಯುವ ಸ್ತ್ರೀಯರ ವೇದಿಕೆ, ಸ್ವ ಉದ್ಯೋಗಿ ಸ್ತ್ರೀಯರ ಸಂಘ, ಹಾಗೂ ಮಹಿಳಾ ಸೇವಾ ಸಹಕಾರಿ ಬ್ಯಾಂಕ್ ಇತ್ಯಾದಿ, ಆದಾಗ್ಯೂ ಮಹಿಳೆಯರ ಹಕ್ಕು ಬಾದ್ಯತೆಗಳ ಅರಿವಿಗಾಗಿ. ಮಹಿಳಾ ಜಾಗೃತಿಗಾಗಿ ಅಸ್ತಿತ್ವಕ್ಕೆ ಬಂದಿರುವ ಮಹಿಳಾ ಸಂಘಟನೆಗಳು ಗ್ರಾಮೀಣ ಸಮುದಾಯಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿದ್ದು, ನಗರ ಪ್ರದೇಶಗಳಲ್ಲಿ, ಅದರಲ್ಲಿಯು ಸುಶಿಕ್ಷಿತ ವಲಯಗಳಲ್ಲಿ ಹೆಚ್ಚು ಹೆಚ್ಚು ಕೇಂದ್ರೀಕೃತವಾಗಿರುವುದನ್ನು ಕಾಣಬಹುದಾಗಿದೆ.

ಬುಡಕಟ್ಟು ಮಹಿಳೆ ಮತ್ತು ಗ್ರಾಮೀಣ ಮಹಿಳೆಯರಿಗೆ ಸ್ವಸಹಾಯ ಗುಂಪುಗಳು ಆರ್ಥಿಕ ಉನ್ನತಿಯ ವೇದಿಕೆಗಳಾಗಿವೆ ಎಂದರೆ ತಪ್ಪಾಗಲಾರದು. ಈ ಗುಂಪುಗಳ ಯೋಜನೆಯು ಬಡತನ ನಿವಾರಣೆಯ ಸಂಕಲ್ಪಹೊಂದಿದೆ. ಮಹಿಳೆಯರು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಯನ್ನು ಸಾದಿಸುವಲ್ಲಿ ಇಲ್ಲಿ ಹೇರಳವಾದ ಅವಕಾಶಗಳಿವೆ. ಸ್ವಸಹಾಯ ಗುಂಪು ಎಂಬುದು ಸಮಾನ ಮನಸ್ಕರಾದ, ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ಮತ್ತು ಸಮಾನ ಹಿತಾಶಕ್ತಿಯನ್ನು ಹೊಂದಿರುವ ಜನರ ಸಮೂಹವಾಗಿದೆ. ಸ್ವಸಹಾಯ ಗುಂಪುಗಳ ಯೋಜನೆಯು ಬಾಂಗ್ಲಾದೇಶದಲ್ಲಿ ಜನ್ಮತಾಳಿದರು, ಇಂದು ಭಾರತದಲ್ಲಿ ಅದು ವಿಶಿಷ್ಟವಾದ ರೀತಿಯಲ್ಲಿ ವಿಕಾಸಹೊಂದುತ್ತಿದೆ. ಬಾಂಗ್ಲಾದೇಶದ ಮಾದರಿಯ ಸಾಲವನ್ನು ಆಧರಿಸಿದ ಮಾದರಿಯಾಗಿದ್ದರೆ, ಭಾರತೀಯ ಮಾದರಿಯಲ್ಲಿ ಉಳಿತಾಯಕ್ಕೆ ಮಹತ್ವಕೊಡಲಾಗಿದೆ. ಉಳಿತಾಯ ಮಾಡುವಿಕೆಯು ಸ್ವಸಹಾಯದ ಒಂದು ಪ್ರಮುಖ ಘಟ್ಟ. ಉಳಿತಾಯ ಮಾಡುವಿಕೆ ಮುಖ್ಯವಾಗಿ ಮಹಿಳೆಯರ ಮನೋಸ್ಥಿತಿಯನ್ನು ಅವಲಂಬಿಸಿದೆ. ದುಡಿದ ಹಣದಲ್ಲಿ ಸ್ವಲ್ಪವನ್ನಾದರು ಉಳಿತಾಯ ಮಾಡಬೇಕೆಂಬ ಹಂಬಲ ಮನಸ್ಸು ಪುರುಷರಿಗೆ ಹೋಲಿಸಿ ನೋಡಿದಾಗ ಮಹಿಳೆಯರಲ್ಲಿ ಹೆಚ್ಚು ಕಂಡುಬರುತ್ತದೆ.

"ಭಾರತ ದೇಶದಲ್ಲಿ ಕಾರ್ಯರೂಪದಲ್ಲಿರುವ ಸ್ವಸಹಾಯ ಗುಂಪುಗಳು ಸಾಮಾನ್ಯವಾಗಿ ಬಾಂಗ್ಲಾದೇಶ, ಮಲೇಶಿಯ, ಕೋರಿಯ, ಫಿಲಿಪೈನ್ಸ್ ಮತ್ತು ಇಂಡೋನೇಶಿಯ ದೇಶಗಳಲ್ಲಿ ಕಾರ್ಯರೂಪದಲ್ಲಿರುವ ಮೈಕ್ರೊಕ್ರೆಡಿಟ್ ಗುಂಪುಗಳ ಕಾರ್ಯ ವಿಧಾನವನ್ನೇ ಹೋಲುತ್ತದೆ."

ಸ್ವಸಹಾಯ ಗುಂಪುಗಳಲ್ಲಿ ಮಹಿಳಾ ಗುಂಪುಗಳದೇ ಮೇಲುಗೈ. ಭಾರತದಲ್ಲಿ ಒಟ್ಟಾರೆಯಾಗಿ ಗಮನಿಸಿದರೆ ಒಟ್ಟು ಸ್ವಸಹಾಯ ಗುಂಪುಗಳಲ್ಲಿ ಸುಮಾರು ಶೇ. ೯೦ರಷ್ಟು ಕಂಡುಬರುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಟ್ಟು ಸ್ವಸಹಾಯ ಗುಂಪುಗಳಲ್ಲಿ ಶೇ. ೮೨ರಷ್ಟು ಮಹಿಳಾ ಗುಂಪುಗಳು ಶೇ.೧೮ರಷ್ಟು ಪುರುಷ ಗುಂಪುಗಳಿವೆ. ಹೀಗೆ ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆ ಮತ್ತು ಬುಡಕಟ್ಟು ಮಹಿಳೆಯರು ಈ ಸ್ವಸಹಾಯ ಸಂಘಗಳಿಂದ ಪ್ರಸ್ತುತದಲ್ಲಿ ಹಲವಾರು ಪ್ರಯೋಜನವನ್ನು ಪಡೆದು ಕೊಂಡು ಆರ್ಥಿಕ ಚಟುವಟಿಕೆಯ ಮೂಲಕ ಅಭಿವೃದ್ಧಿಯಾಗುತ್ತಿದ್ದಾರೆ.

ಸ್ವಸಹಾಯ ಗುಂಪುಗಳು ಮತ್ತು ಚಿಕ್ಕ ಪ್ರಮಾಣದ ಸಾಲಗಳು

ಅಭಿವೃದ್ಧಿ ಹೊಂದುತ್ತಿರುವ ದೇಶಗಳು, ಅಭಿವೃದ್ಧಿ ಹೊಂದಿದ ದೇಶಗಳ ಕಾರ್ಯಕ್ರಮಗಳನ್ನು ಅನುಕರಣೆ ಮಾಡಿ ಅನುಷ್ಠಾನಗೊಳಿಸುವುದು ಇದುವರೆವಿಗೂ ನಡೆದುಕೊಂಡು ಬಂದಿರುವ ರೀತಿ ಆದರೆ ಬಡತನ ಬೇಗುದಿಯಲ್ಲೇ ಬಸವಳಿದ, ಒಂದು ಕಾಲದಲ್ಲಿ ಭಾರತದ ಒಂದು ಭಾಗವಾಗಿದ್ದ "ಬಾಂಗ್ಲಾದೇಶ" ಇಂದು ತದ್ವಿರುದ್ಧವಾಗಿ ಸ್ವಸಹಾಯಸಂಘಗಳಿಗೆ ಸಾಲ-ಸೌಲಭ್ಯಗಳನ್ನು ನೀಡುವುದರ ಮುಖಾಂತರ ಅಭಿವೃದ್ಧಿಗೆ ಕಾರಣವಾಗಿದೆ. ಹಾಗಾಗಿ ಬೇರೆಲ್ಲಾ ದೇಶಗಳು ಈ ಪುಟ್ಟ ದೇಶವನ್ನು ನೋಡಿ ಬೆರಗಾಗುವಂತೆ ಮಾಡಿದೆ. ಸ್ವಸಹಾಯ ಸಂಘಗಳ ರಚನೆ, ಗ್ರಾಮೀಣ ಬ್ಯಾಂಕುಗಳ ಚಿಕ್ಕ ಪ್ರಮಾಣದ ಸಾಲಗಳ ಮುಖಾಂತರ ಹೇಗೆ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಪ್ರಪಂಚದ ಅತ್ಯುನ್ನತ ಪ್ರಶಸ್ತಿ ನೊಬೆಲ್ ಪ್ರಶಸ್ತಿ ವಿಜೇತರಾದ ಡಾ.ಮೊಹಮದ್ ಯುನೂಸ್‌ರವರು ತೋರಿಸಿ ಕೊಟ್ಟಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಬಡತನ ರೇಖೆಗಿಂತ ಕೆಳಗಿನವರ ಅಭಿವೃದ್ಧಿಗೋಸ್ಕರ ಇಂತಹುದೇ ಕಾರ್ಯಕ್ರಮವನ್ನು ರೂಪಿಸುತ್ತಿವೆ. ಕರ್ನಾಟಕದಲ್ಲಿ ಇರುವ ಮೈರಾಡ ಸಂಸ್ಥೆಯು ಇಂತಹ ಯೋಜನೆಯನ್ನು ಭಾರತಕ್ಕೆ ಮೊದಲನೆಯದಾಗಿ ೧೯೮೫ರಲ್ಲಿ ತಂದ ಕೀರ್ತಿ ಸಲ್ಲುತ್ತದೆ"[೧೩] ಇದನ್ನು ಗಮನಿಸಿದ ಬ್ಯಾಂಕುಗಳು ಸ್ವಸಹಾಯ ಗುಂಪುಗಳ ಪ್ರೇರಣೆಗೆ ನಿಂತು ಪ್ರತಿಬ್ಯಾಂಕಿಗೂ ಕುರಿ ಸಾಲ ನೀಡುವ ಮುಖಾಂತರ ಸ್ವಸಹಾಯ ಗುಂಪುಗಳ ಆಂದೋಲನವನ್ನು ಪ್ರಾರಂಭಿಸಲಾಯಿತು.

ಸ್ವಸಹಾಯ ಗುಂಪುಗಳ ಮುಖಾಂತರ ಬಡತನ ರೇಖೆಗಿಂತ ಕೆಳಗೆ ಇರುವ ಬುಡಕಟ್ಟು ಮಹಿಳೆಯರ ಮತ್ತು ಗ್ರಾಮೀಣ ಹಿಂದೂಳಿದ ಸಮುದಾಯದ ಮಹಿಳೆಯರ ಅಭಿವೃದ್ಧಿ ಹಾಗೂ ಮಹಿಳಾ ಸಬಲೀಕರಣ ಸಾಧ್ಯ ಎಂದು. "ಮನಗಂಡ ಕರ್ನಾಟಕ ಸರ್ಕಾರ, ೨೦೦೦ನೇ ಇಸವಿಯಲ್ಲಿ ಸ್ತ್ರೀಶಕ್ತಿ ಎಂಬ ಯೋಜನೆಯ ಮುಖಾಂತರ ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿತು".[೧೪] "ಇಂದು ಕರ್ನಾಟಕದಾದ್ಯಂತ ಒಟ್ಟಿಗೆ ೧,೨೫,೪೦೩ ಗುಂಪುಗಳು, ಸ್ವಯಂಸೇವಾ ಸಂಸ್ಥೆಗಳು ಹಾಗೂ ಬ್ಯಾಂಕ್ ಮುಖಾಂತರ ಮಾಡಿರುವ ಸ್ವಯಂಸೇವಾ ಸಂಸ್ಥೆ ಗುಂಪುಗಳೇ ಸುಮಾರು ೫೦,೦೦೦ ಇರುತ್ತವೆ."[೧೫]

ಸುತ್ತುನಿಧಿ

ಪ್ರಸ್ತುತದಲ್ಲಿ ಬುಡಕಟ್ಟು ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದ ಬಡತನ ರೇಖೆಗಿಂತ ಕಡಿಮೆ ಆದಾಯ ಇರುವ ಕುಟುಂಬಗಳ ಮಹಿಳೆಯರು ಸ್ಥಾಪನೆ ಮಾಡಿಕೊಂಡಿರುವ ಸ್ವಸಹಾಯ ಸಂಘಗಳು ತಾವು ತಮ್ಮ ಸಂಘದ ಖಾತೆಯನ್ನು ಹೊಂದಿರುವ ಯಾವುದೇ ಬ್ಯಾಂಕುಗಳಲ್ಲಿ ತಲಾ ಐದುಸಾವಿರ ರೂಪಾಯಿಗಳನ್ನು ಸುತ್ತುನಿಧಿಯನ್ನಾಗಿ ನೀಡಲಾಗುತ್ತಿದೆ.

ತರಬೇತಿ

ಬುಡಕಟ್ಟು ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರು ಸ್ಥಾಪನೆ ಮಾಡಿಕೊಂಡಿರುವ ಸ್ವಸಹಾಯ ಗುಂಪುಗಳಿಗೆ ತರಬೇತಿ ನೀಡಲಾಗುತ್ತಿದೆ. ಅಂದರೆ ತರಬೇತಿ ಇಲ್ಲದ ಗುಂಪುಗಳಿಗೆ ಪುಸ್ತಕ ನಿರ್ವಹಣೆ ಹಾಗೂ ಸಾಮಾಜಿಕ ವಿಷಯಗಳಿಗೆ ತರಬೇತಿ ನೀಡಲಾಗುವುದು. ಸ್ವಯಂಸೇವಾ ಸಂಸ್ಥೆಯವರು ಸ್ಥಾಪಿಸಿದ ಗುಂಪುಗಳಿಗೆ ತರಬೇತಿ ನಡೆಸಲಾಗುತ್ತಿದೆ. ಕೊಡಗು ಹಾಗೂ ವಿರಾಜಪೇಟೆ ಪ್ರದೇಶಗಳಲ್ಲಿನ ಬುಡಕಟ್ಟು ಮಹಿಳೆಯರು ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನಗಳಲ್ಲಿ ತರಬೇತಿ ಪಡೆದಿರುತ್ತಾರೆ.

ಆದಾಯೋತ್ಪನ್ನ ಚಟುವಟಿಕೆಗಳು

ಗುಂಪುಗಳು ಆರ್ಥಿಕವಾಗಿ ಸಬಲತೆ ಹೊಂದಲು ಬ್ಯಾಂಕ್ ಸಂಪರ್ಕದೊಂದಿಗೆ ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅನುವು ಮಾಡುವುದಲ್ಲದೆ ಈ ಬಗ್ಗೆ ಕೌಶಲ್ಯ ತರಬೇತಿಯನ್ನೂ ಸಹಾ ನೀಡಲಾಗುತ್ತದೆ. ಸ್ವಸಹಾಯ ಸಂಘಗಳು ಚಟುವಟಿಕೆ ಹಮ್ಮಿಕೊಳ್ಳಲು ಅವರ ಉಳಿತಾಯದಿಂದ ಆಂತರೀಕ ಸಾಲವನ್ನು ನೀಡಲಾಗುತ್ತದೆ. ಗುಂಪುಗಳು ತಯಾರಿಸಿದ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಲಾಗುತ್ತಿದೆ.

ವಿವಿಧ ಇಲಾಖೆಗಳಲ್ಲಿ ಯೋಜನೆ ಪಡೆಯುವುದು

ಬುಡಕಟ್ಟು ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದ ಹಿಂದುಳಿದ ಸಮುದಾಯದ ಮಹಿಳೆಯರು ಸ್ಥಾಪಿಸಿಕೊಂಡಿರುವ ಸ್ವಸಹಾಯ ಸಂಘಗಳು ಸರ್ಕಾರದ ಇತರೇ ಇಲಾಖೆಗಳಲ್ಲಿ ಲಭ್ಯವಾಗುವಂತಹ ಸೌಲಭ್ಯಗಳನ್ನು ಈ ಸಂಘಗಳಿಗೆ ಒದಗಿಸಲಾಗುತ್ತಿದೆ.

೧. ರಾಷ್ಟ್ರೀಯ ಹಿಂದುಳಿದ ನಿಗಮವತಿಯಿಂದ "ನ್ಯೂ ಸ್ವರ್ಣಿಮಾ" ಯೋಜನೆಯಡಿ ಸಾಲಸೌಲಭ್ಯ ಪಡೆಯುವುದು.

೨. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ವತಿಯಿಂದ ಸಾಲಸೌಲಭ್ಯ ಪಡೆಯುವುದು.

೩. ಪಶುಸಂಗೋಪನಾ ಇಲಾಖೆಯಿಂದ ಗಿರಿರಾಜ ಕೋಳಿ ತಳಿಯನ್ನು ಖರೀದಿಸಿದ್ದಾರೆ.

೪. ರಾಜೀವ್‌ಗಾಂಧಿ ವಸತಿ ನಿಗಮದಿಂದ ಮಹಿಳೆಯರಿಗೆ ಕಟ್ಟಡ ನಿರ್ಮಾಣ ಕುರಿತು ನಿರ್ಮಿತಿ ಕೇಂದ್ರದಿಂದ ತರಬೇತಿ ನೀಡುವುದು.

೫. ಶಿಕ್ಷಣ ಇಲಾಖೆಯಿಂದ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ಸ್ವಸಹಾಯ ಗುಂಪುಗಳನ್ನು ತೊಡಗಿಸುವುದು.

೬. ಕೃಷಿ ಇಲಾಖೆ, ತೋಟಗಾರಿಕೆ, ಮೀನುಗಾರಿಕೆ, ಮುಂತಾದ ಅಭಿವೃದ್ಧಿ ಇಲಾಖೆಗಳಿಂದ ಬುಡಕಟ್ಟು ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶದ ಬಡ ಮಹಿಳೆಯರು ರಚಿಸಿಕೊಂಡಿರುವ ಸ್ವಸಹಾಯ ಗುಂಪುಗಳು ಸೌಲಭ್ಯವನ್ನು ಪಡೆಯುತ್ತಿದ್ದಾರೆ.

ಪ್ರೋತ್ಸಾಹ ಧನ

ಸ್ವಸಹಾಯ ಗುಂಪುಗಳಲ್ಲಿ ಉಳಿತಾಯದ ಮನೋಭಾವನೆ ಬೆಳೆಸಲು ಸರ್ಕಾರದಿಂದ ಹೆಚ್ಚು ಉಳಿತಾಯ ಮಾಡುವ ಸಂಘಗಳಿಗೆ ಪ್ರೋತ್ಸಾಹ ಧನವನ್ನು ನಗದು ರೂಪದಲ್ಲಿ ನೀಡಲಾಗುತ್ತದೆ. ೭೫,೦೦೦/- ರೂಪಾಯಿಗಳಿಂದ ೧ ಲಕ್ಷ ರೂಪಾಯಿಗಳವರೆಗಿನ ಉಳಿತಾಯಕ್ಕೆ ೧೫,೦೦೦ ರೂಪಾಯಿಗಳ ಪ್ರೋತ್ಸಾಹ ಧನ ನೀಡಲಾಗುವುಗು. ೧ ಲಕ್ಷ ಮೇಲ್ಪಟ್ಟು ಉಳಿತಾಯಕ್ಕೆ ೨೦,೦೦೦ ರೂಪಾಯಿಗಳ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಮಾರಾಟ ಮೇಳೆ

ಪ್ರತಿವರ್ಷ ಜಿಲ್ಲಾ ಹಾಗೂ ತಾಲೂಕುಗಳಲ್ಲಿ ಸ್ತ್ರೀಶಕ್ತಿ ಗುಂಪುಗಳು ತಯಾರಿಸಿದ ವಸ್ತುಗಳ ಮಾರಾಟಕ್ಕೆ ಮಾರಾಟ ಮೇಳವನ್ನು ನಡೆಸಲು ಹಣ ಒದಗಿಸಲಾಗುತ್ತಿದೆ. ಸ್ತ್ರೀ ಶಕ್ತಿ ಹಾಗೂ ಸ್ವಸಹಾಯ ಗುಂಪುಗಳ ಬೆಳವಣಿಗೆಯಿಂದ ರಿಸರ್ವ್‌ಬ್ಯಾಂಕ್ ಹಾಗೂ ನಬಾರ್ಡ್‌ಗಳು ಸಾಲ ನೀತಿಯನ್ನು ಬದಲಾಯಿಸಿ, ಸಣ್ಣ ಪ್ರಮಾಣದ ಸಾಲ ಯೋಜನೆಗೆ ಪ್ರೇರಣೆ ನೀಡುತ್ತಿವೆ.

ಸ್ವಸಹಾಯ ಗುಂಪುಗಳಲ್ಲಿ ಸಹಾಯಧನದಿಂದಾದ ಬದಲಾವಣೆ

೧. ಸಣ್ಣ ಉಳಿತಾಯದ ಮುಖಾಂತರ ಅವರದೇ ಉಳಿತಾಯದೊಂದಿಗೆ, ಯಾರಿಗೆ ಸಾಲ ಅವಶ್ಯಕತೆ ಇದೆ ಎಂಬ ನೀತಿಯಿಂದ ಸಾಲ ವಿತರಣೆ ಹಾಗು ೧೦೦ ಕ್ಕೆ ೧೦೦ಭಾಗ ಸಾಲ ವಸೂಲಾತಿ. ಇದರಿಂದಾಗಿ ಈ ಗುಂಪುಗಳೇ ಒಂದು ರೀತಿ ಬ್ಯಾಂಕುಗಳಾಗಿ ಪರಿವರ್ತನೆಗೊಂಡಿವೆ.

೨. ಸಾಲ ಮರುಪಾವತಿ ಕಂಡು ಬ್ಯಾಂಕಿನವರು ಎಲ್ಲಾ ಗುಂಪಿನವರಿಗೆ ಸಾಲ ನೀಡಲು ಮುಂದಾಗಿವೆ.

೩. ಎಲ್ಲಾ ಗುಂಪಿನ ಸದಸ್ಯರಲ್ಲಿ "ನಾಯಕತ್ವದ ಗುಣ" ಬೆಳವಣಿಗೆ ಆಗಿರುವುದು, ಇದರಿಂದಾಗಿ ವೈಯಕ್ತಿಕ ಬೆಳವಣಿಗೆ ಗ್ರಾಮದ ಅಭಿವೃದ್ಧಿಗೆ ಸಹಾಯಕವಾಗುತ್ತಿದೆ.

೪. ಕೇವಲ ಉಳಿತಾಯ/ಸಾಲ ನೀಡುವುದಲ್ಲದೆ ಉತ್ತಮ ಸಾಮಾಜಿಕ ಕಾರ್ಯಕ್ರಮ, ಅರಿವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದು.

೫. ಕರ್ನಾಟಕ ಸರ್ಕಾರ ಹೆಂಡ ಸರಾಯಿ ನಿಲ್ಲಿಸುವಂತಹ ಕಾರ್ಯಕ್ರಮಕ್ಕೆ ಸ್ತ್ರೀ ಶಕ್ತಿಗಳ ಕೊಡುಗೆ ಅಪಾರ.

೬. ಸ್ವಸಹಾಯ ಸಂಘಗಳಲ್ಲಿ, ಸದಸ್ಯತ್ವ ಪಡೆದಿರುವ ಮಹಿಳೆಯರ ಮಕ್ಕಳ ವಿದ್ಯಾಭ್ಯಾಸ, ಸ್ವಂತ ಉದ್ದೇಶಕ್ಕೆ ಮನೆಯವರ ಸಹಾಯವನ್ನು ನಿರೀಕ್ಷಿಸದೆ ಸ್ವತಂತ್ರವಾಗಿ ಪಾಲ್ಗೊಳ್ಳುತ್ತಿರುವುದು.

ಇಂತಹ ಸ್ವಸಹಾಯ ಗುಂಪುಗಳಿಂದಾಗಿ ಇಂದು ಗ್ರಾಮಾಂತರ ಚಿತ್ರಣವೇ ಬದಲಾವಣೆಯಾಗಿದೆ. ಸಾರ್ವಜನಿಕರು, ಗ್ರಾಮಪಂಚಾಯತ್ ಚುನಾಯಿತ ಪ್ರತಿನಿಧಿಗಳು, ಉತ್ತಮ ಸಹಕಾರ ನೀಡುವುದರಿಂದ ಇಂತಹ ಗುಂಪುಗಳಿಂದಾಗಿ ಇಂದು ಗ್ರಾಮಾಂತರ, ಹಳ್ಳಿಗಳ ಚಿತ್ರಣವೇ ಬದಲಾವಣೆ ಆಗುತ್ತಿರುವುದನ್ನು ಕಾಣುತ್ತಿದ್ದೇವೆ.

ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಸದಸ್ಯರ ಉಳಿತಾಯ

ಬುಡಕಟ್ಟು ಸಮುದಾಯದ ಮಹಿಳೆಯರು ರಚಿಸಿಕೊಂಡಿರುವ ಸ್ವಸಹಾಯ ಸಂಘಗಳು, ಈ ಸಂಘಗಳ ಪ್ರಮುಖವಾದ ಉದ್ದೇಶ ಉಳಿತಾಯ ಮಾಡುವುದು. ಈ ಉಳಿತಾಯವೇ ಈ ಸ್ವಸಹಾಯ ಸಂಘದ ಬೆನ್ನೆಲುಬು. ಸಂಘದ ಸದಸ್ಯರೆಲ್ಲಾರು ವಾರದ ಒಂದು ದಿನವನ್ನು ಆಯ್ಕೆಮಾಡಿಕೊಂಡು ಈ ದಿನದದಂದು ಸಂಘದ ಸದಸ್ಯೆರೆಲ್ಲರು ಸಭೆ ಸೇರುತ್ತಾರೆ. ಆ ಸಭೆಯಲ್ಲಿ ಸಂಘದ ಒಬ್ಬ ನಾಯಕರು ಎಲ್ಲರಿಂದಲೂ ಹಣವನ್ನು ಸಂಗ್ರಹಿಸುತ್ತಾರೆ. ಸಂಘದ ಸದಸ್ಯರು ಅನ್ಯೋನ್ಯವಾಗಿ ನಡೆದುಕೊಂಡು ಸಮಾನತೆಯ ಮನೋಭಾವನೆಯಿದ್ದರೆ ಒಳ್ಳೆಯದು, ಆದರೆ ನನ್ನ ಅಧ್ಯಯನಕ್ಷೇತ್ರದ ವ್ಯಾಪ್ತಿಯಲ್ಲಿ ಕ್ಷೇತ್ರಕಾರ್ಯದ ಸಮಯದಲ್ಲಿ ಎಷ್ಟೋ ಸ್ವಸಹಾಯ ಸಂಘಗಳಲ್ಲಿರುವಂತಹ ಮಹಿಳಾ ಸದಸ್ಯರು ಕೂಲಿಕಾರ್ಮಿಕರಾಗಿರುವುದರಿಂದ ಮತ್ತು ಅವರಿಗೆ ಸರಿಯಾಗಿ ಕೆಲಸಗಳು ಸಿಗದಿರುವ ಕಾರಣದಿಂದ ಮತ್ತು ಕೂಲಿಯಿಂದ ಬಂದ ಹಣದಲ್ಲೇ ಕುಟುಂಬ ನಿರ್ವಹಣೆ ಮಾಡಬೇಕಾಗಿರುವುದರಿಂದ ಇವರ ಉಳಿತಾಯದಲ್ಲಿ ಕುಂಠಿತವಾಗಿ ಎಷ್ಟೋ ಸ್ವಸಹಾಯ ಸಂಘಗಳು ಒಂದು ವರ್ಷ ಅಥವಾ ಎರಡು ವರ್ಷ ತಾವು ಸ್ವಸಹಾಯ ಸಂಘದ ಚಟುವಟಿಕೆಯನ್ನು ನಡೆಸಿ ನಂತರ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿರುವುದು ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡುಬಂದಿದೆ.

ಸ್ವಸಹಾಯ ಸಂಘಗಳು ವಾರದ ಒಂದು ದಿನದಲ್ಲಿ ಎಲ್ಲಾ ಸದಸ್ಯರ ಉಳಿತಾಯವನ್ನು ಸಂಗ್ರಹಿಸಿ, ಪ್ರತಿಸದಸ್ಯರ ಉಳಿತಾಯ ಎಷ್ಟಾಗಿದೆ ಎಂದು ತಿಳಿಸಿ ಅವರವರ ಉಳಿತಾಯ ಮತ್ತು ಸಾಲದ ವಿವರಗಳನ್ನು ಪಾಸ್‌ಪುಸ್ತಕಕ್ಕೆ ಬರೆದುಕೊಂಡು ಸದಸ್ಯರಿಗೆ ಈ ವಿಷಯದ ಬಗ್ಗೆ ಮನವರಿಕೆ ಮಾಡಿಕೊಡುವುದು ಪ್ರತಿಸಂಘದ ಕರ್ತವ್ಯವಾಗಿದೆ. ಹಾಗೆಯೇ ಸಾಲವನ್ನು ಪಡೆದುಕೊಂಡ ಸದಸ್ಯರು ಯಾವ ಉದ್ದೇಶಕ್ಕಾಗಿ ಸಾಲವನ್ನು ಪಡೆಯುತ್ತಾರೆ ಎಂಬುದನ್ನು ಸಂಘದ ಸದಸ್ಯರಿಗೆ ತಿಳಿಸಿಕೊಡಲಾಗುತ್ತದೆ. ತಮ್ಮ ಗ್ರಾಮದಲ್ಲಿರುವ ವ್ಯವಸಾಯ ಸೇವಾ ಸಹಕಾರ ಬ್ಯಾಂಕುಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತಮ್ಮ ಸಂಘದ ಉಳಿತಾಯ ಖಾತೆಯನ್ನು ಸಂಘದ ಇಬ್ಬರು ಪ್ರತಿನಿಧಿಗಳ ಹೆಸರಿನಲ್ಲಿ ತೆರೆಯಲಾಗುತ್ತದೆ.

ಆ ಸಂಘದ ಖಾತೆಗೆ ಪ್ರತಿವಾರ ನಡೆಸುವ ಸಭೆಯಲ್ಲಿ ಸಂಗ್ರಹವಾಗುವ ಹಣವನ್ನು ಜಮಾ ಮಾಡಲಾಗುತ್ತದೆ.

ಪ್ರಸಕ್ತ ಸಾಲಿನಲ್ಲಿ ಮಹಿಳಾ ಸ್ವಸಹಾಯವನ್ನು ಸೇರಿಕೊಂಡಿರುವ ಬುಡಕಟ್ಟು ಮಹಿಳೆಯರು ಎಲ್ಲಾ ಕೆಲಸಕಾರ್ಯಗಳಲ್ಲಿ ತಾವೇ ತೊಡಗಿಕೊಂಡು ಹೆಚ್ಚು ಖರ್ಚುಮಾಡದೆ ಪ್ರತಿವಾರ ಉಳಿತಾಯ ಮಾಡಿ ಸಂಘವನ್ನು ಬೆಂಬಲಿಸತೊಡಗಿರುವುದು ಮತ್ತು ಸಮಾನತೆಯ ಮನೋಭಾವನೆಯಿಂದ ಸಂಘವನ್ನು ಮುನ್ನಡೆಸಿಕೊಂಡು ಹೋಗುವುದು, ಯಾವುದೇ ಭಿನ್ನಾಭಿಪ್ರಾಯಗಳು ತಲೆದೋರದಂತೆ ಎಚ್ಚರಿಕೆವಹಿಸುವುದು ಮತ್ತು ಎಷ್ಟೋ ಮಹಿಳೆಯರು ಒಳ್ಳೆಯ ಹಾಗೂ ಅವಶ್ಯವಿರುವ ಜೀವನಕ್ಕೆ ಬೇಕಾಗುವ ಸಂಪನ್ಮೂಲಗಳನ್ನು ಉಳಿತಾಯ ಮಾಡಿರುವುದು ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡುಬಂದಿದೆ.

ಬುಡಕಟ್ಟು ಸಮುದಾಯದ ಎಷ್ಟೋ ಮಹಿಳೆಯರು ತಾವು ದುಡಿದ ಅಲ್ಪ-ಸ್ವಲ್ಪ ಹಣವನ್ನು ಉಳಿತಾಯಮಾಡಿಕೊಂಡು, ಕುಟುಂಬದ ಖರ್ಚನ್ನು ಕಡಿಮೆಗೊಳಿಸಿ ಸಂಪಾದನೆಯನ್ನು ಹೆಚ್ಚಿಸಿಕೊಂಡಿದ್ದಾರೆ. ಕೆಲವೊಂದು ಸಮಯದಲ್ಲಿ ಸಮುದಾಯದ ಮಹಿಳೆಯರು ಉಳಿತಾಯ ಮಾಡಿದಂತ ಹಣದಿಂದ ಕುರಿಸಾಕಾಣಿಕೆ, ಕೋಳಿಸಾಕಾಣಿಕೆ, ಹಂದಿಸಾಕಾಣಿಕೆ, ಆಡುಗಳನ್ನು ಸಾಕಿ ಅವುಗಳನ್ನು ಬೆಳೆಸಿ ಕಷ್ಟಕಾಲಬಂದಾಗ ಅವುಗಳನ್ನು ಮಾರಾಟಮಾಡಿ ತಮ್ಮ ಸಮಸ್ಯೆಗಳನ್ನು ಮತ್ತು ಕುಟುಂಬದ ಸಮಸ್ಯೆಗಳನ್ನು ನಿರ್ವಹಣೆಮಾಡಿಕೊಳ್ಳಲು ಸಹಕಾರಿಯಾಗುತ್ತಿವೆ. ಹೀಗೆ ಸಮುದಾಯದ ಬುಡಕಟ್ಟು ಮಹಿಳೆಯರು ಹಲವಾರು ರೀತಿಯಲ್ಲಿ ಉಳಿತಾಯ ಮಾಡಿ ತಮ್ಮ ಕುಟುಂಬಗಳಿಗೆ ಸಹಾಯಕವಾಗುತ್ತಿದ್ದಾರೆ.

ಪ್ರಸ್ತುತದಲ್ಲಿ ಬುಡಕಟ್ಟು ಮಹಿಳೆಯರು ಸ್ವಸಹಾಯ ಸಂಘವನ್ನು ರಚಿಸಿಕೊಂಡು ಈ ಸಂಘದ ಸಹಾಯದಿಂದಾಗಿ ಎಲ್ಲಾರು ಒಟ್ಟಾಗಿ ಸೇರಿ ಸಭೆಗಳಲ್ಲಿ ಭಾಗವಹಿಸಿ ಹಲವಾರು ವಿಷಯಗಳನ್ನು ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳುವುದರಿಂದ ಹೆಚ್ಚು ಬುದ್ಧಿವಂತರಾಗಿದ್ದಾರೆ. ಇಂದಿನ ದಿನಗಳಲ್ಲಿ ಮಹಿಳೆಯರಿಗೆ ಸಮಸ್ಯೆಗಳೇನಾದರು ಸಂಭವಿಸಿದರೆ ಬೇರೆಯವರಿಂದ ಸಾಲವನ್ನು ಪಡೆದು ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಂಡು ನಂತರ ಕಂತಿನ ರೂಪದಲ್ಲಿ ಸಾಲವನ್ನು ತೀರಿಸುವುದರಿಂದ ಮಹಿಳೆಯರು ತಮ್ಮ ಕುಟುಂಬವನ್ನು ಜವಾಬ್ದಾರಿಯುತವಾಗಿ ನಡೆಸಿಕೊಂಡು ಹೋಗುವುದನ್ನು ಕಾಣುತ್ತಿದ್ದೇವೆ.

ಮಹಿಳೆಯರ ಆರ್ಥಿಕ ಸ್ವಾವಲಂಬನೆಯಲ್ಲಿ ಮಹಿಳಾ ಸ್ವಸಹಾಯ ಸಂಘಗಳ ಪಾತ್ರ

ಮಹಿಳೆಯರ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿ, ಅವರನ್ನು ಸಶಕ್ತರನ್ನಾಗಿಸುವಲ್ಲಿ ಸ್ತ್ರೀಶಕ್ತಿ ಮತ್ತು ಮಹಿಳಾ ಸ್ವಸಹಾಯ ಗುಂಪುಗಳು ಕ್ರಾಂತಿಕಾರಿ ಬದಲಾವಣೆಯನ್ನು ತರುತ್ತಿವೆ. ಈ ಗುಂಪುಗಳ ಸಂಘಟನೆಯಿಂದ ಮನೆಯ ನಾಲ್ಕುಗೋಡೆಗಳಿಗೆ ಮಾತ್ರ ಸೀಮಿತವಾಗಿದ್ದ ಮಹಿಳೆಯು ಇಂದು ಹೊರಪ್ರಪಂಚದ ಜ್ಞಾನವನ್ನು ಪಡೆಯುತ್ತಿದ್ದಾಳೆ. ಗ್ರಾಮೀಣ ಮತ್ತು ನಗರಪ್ರದೇಶದ ಹಲವಾರು

ಸಣ್ಣಪುಟ್ಟ ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಆರ್ಥಿಕ ಸ್ವಾಲಂಬನೆಯನ್ನು ಸಾದಿಸುವಲ್ಲಿ ಮುನ್ನಡೆಯ ಹೆಜ್ಜೆಗಳನ್ನಿಡುತ್ತಿದ್ದಾರೆ.

ಸ್ತ್ರೀಶಕ್ತಿ ಮತ್ತು ಮಹಿಳಾ ಸ್ವಸಹಾಯ ಗುಂಪುಗಳನ್ನು ಅಂಗನವಾಡಿ ಕಾರ್ಯಕರ್ತೆಯರು ಸಂಘಟಿಸುತ್ತಿದ್ದಾರೆ. ಮಹಿಳಾ ಸ್ವಸಹಾಯ ಗುಂಪುಗಳು ಸ್ಥಳೀಯ ಸಂಘಸಂಸ್ಥೆಗಳಿಂದ ಸಂಘಟಿಸಲ್ಪಟ್ಟಿರುತ್ತವೆ. ಇಂದು ಸ್ವಸಹಾಯ ಗುಂಪುಗಳಿಗೆ ನೀಡುತ್ತಿರುವ ಸಹಾಯ ಸೌಲಭ್ಯಗಳನ್ನು ತಿಳಿದು ಹಲವಾರು ಮಹಿಳೆಯರು ಸ್ವಸಹಾಯ ಗುಂಪುಗಳನ್ನು ಪ್ರಾರಂಭಿಸಲು ಮತ್ತು ಈ ಸಂಘಗಳಲ್ಲಿ ಸದಸ್ಯರಾಗಲು ಉತ್ಸುಹಕರಾಗಿದ್ದಾರೆ. ಆದರೆ ಹಲವಾರು ಸಂದರ್ಭಗಳಲ್ಲಿ ಅವರ ಚಟುವಟಿಕೆಯಲ್ಲಿಯ ಪುರುಷ ಮನೋಭಾವನೆ ಅವರು ಸ್ವ ಸಹಾಯ ಗುಂಪುಗಳನ್ನು ಸೇರಿ ಸಮುದಾಯದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ತೊಡಕಾಗುತ್ತಿದೆ. ಹೀಗಾಗಿ ಹಲವಾರು ಮಹಿಳೆಯರಿಗೆ ಈ ಸ್ವಸಹಾಯ ಗುಂಪಿನ ಸದಸ್ಯರಾಗಲು ಆಸಕ್ತಿ ಇದ್ದರೂ ಹಲವಾರು ಸಮಸ್ಯೆಗಳಿಂದಾಗಿ ಸದಸ್ಯರಾಗಲು ಸಾಧ್ಯವಾಗುತ್ತಿಲ್ಲ. ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತೆ ಗುಂಪಿನ ಸದಸ್ಯರಾದರು ಅವರು ಮುಕ್ತವಾಗಿ ಸಭೆ ಸಮಾರಂಭಗಳಿಗೆ ಹೋಗುವುದು ಪುರುಷರಿಗೆ ಇಷ್ಟವಿಲ್ಲ. ಅದಕ್ಕಾಗಿ ಬಹಳಷ್ಟು ಮಹಿಳೆಯರು ಗುಂಪಿನ ಸದಸ್ಯರಾಗಿ ಕೆಲವು ತಿಂಗಳುಗಳ ನಂತರ ಹೊರನಡೆದು ಹೋದ ಉದಾಹರಣೆಗಳು ಬಹಳಷ್ಟಿವೆ. ಇನ್ನು ಕೆಲವು ಗುಂಪುಗಳಲ್ಲಿ ಕಂಡುಬಂದಂತೆ ಮಹಿಳೆಯರು ಸ್ವಸಹಾಯ ಸಂಘಗಳ ಸಭೆಗಳಿಗೆ ಹಾಜರಾಗಲು ಹಿಂಜರಿಯುತ್ತಾರೆ. ಮಹಿಳೆಯರಿಗೆ ತಾವು ಸ್ವಾವಲಂಬಿ ಬದುಕನ್ನು ಸಾಗಿಸುವ ಹಂಬಲ, ಬಯಕೆ, ಹುಮ್ಮಸ್ಸುಗಳಿವೆ. ಆದರೆ ಸಮಾಜದಲ್ಲಿಯ ಪುರುಷಶಾಹಿ ವ್ಯವಸ್ಥೆ ಅದಕ್ಕಿನ್ನು ಹೆಚ್ಚಿನ ಅವಕಾಶಗಳನ್ನು ನೀಡುತ್ತಿಲ್ಲ. ಇದರಿಂದಾಗಿ ಮಹಿಳೆಯರು ಪರಾವಲಂಬಿ ಜೀವನವನ್ನೇ ನಡೆಸುವಂತ ಸ್ಥಿತಿ ಇದೆ. ಸಹಾಯ ಸೌಲಭ್ಯಗಳು ಸಮಾನ ರೀತಿಯಲ್ಲಿ ದೊರೆಯುವಂತಾಗಬೇಕು. ಅಂದಾಗ ಮಾತ್ರ ನಾವು ನಿರ್ದಿಷ್ಟ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಸ್ತ್ರೀಶಕ್ತಿ ಗುಂಪುಗಳು ಮತ್ತು ಮಹಿಳಾ ಸ್ವಸಹಾಯ ಗುಂಪುಗಳು ಅವುಗಳು ಸಂಘಟನೆಗೊಂಡು ಪ್ರಾರಂಭದಲ್ಲಿ ತಮ್ಮ ತಮ್ಮಲ್ಲಿ ಆಂತರೀಕ ಸಾಲಸೌಲಭ್ಯಗಳನ್ನು ವಿಸ್ತರಿಸಿಕೊಳ್ಳುತ್ತವೆ. ಈ ರೀತಿಯ ಸಾಲಗಳನ್ನು ಪಡೆಯುವಾಗ ಗುಂಪಿನ ಸಭೆಯನ್ನು ನಡೆಸಿ ಎಲ್ಲರ ಅನುಮತಿ ಪಡೆದು ಸಾಲವನ್ನು ಪಡೆಯಬೇಕಾಗುತ್ತದೆ. ಹಲವಾರು ಗುಂಪುಗಳಲ್ಲಿ ಈ ರೀತಿಯ ಪ್ರಕ್ರಿಯೇ ನಡೆಯುತ್ತಿದೆ. ಆದರೆ ಇದಕ್ಕೆ ಹೊರತಾದ ಕೆಲವು ಅಂಶಗಳು ಸಹ ನಮ್ಮ ಕ್ಷೇತ್ರಕಾರ್ಯದ ಸಮಯದಲ್ಲಿ ಕಂಡುಬಂದಿದೆ. ಗುಂಪಿನ ಸದಸ್ಯರಲ್ಲಿ ಪ್ರಬಲರಾದವರು ಅವರ ಮನೆಯ ಪುರುಷರ ಬೆಂಬಲದಿಂದಾಗಿ ಇಡೀ ಗುಂಪನ್ನು ನಿಯಂತ್ರಿಸುವ ಉದಾಹರಣೆಗಳಿವೆ. ಸ್ವಸಹಾಯ ಗುಂಪು ಮಹಿಳೆಯರದ್ದಾಗಿದ್ದರು ಆ ಗುಂಪಿನ ಸದಸ್ಯರ ಮನೆಯ ಪುರುಷರು ಈ ಸಂಘಗಳನ್ನು ನಿರ್ವಹಿಸುತ್ತಾರೆ. ಅಲ್ಲದೆ ಗುಂಪಿನ ಸದಸ್ಯರ ಅನುಮತಿ ಇಲ್ಲದೆ ಪ್ರತಿನಿಧಿಗಳೇ ಏಕಪಕ್ಷಿಯವಾಗಿ ಗುಂಪಿನ ಹಣವನ್ನು ಪಡೆದಿರುವ, ಮನೆಯ ಪುರುಷರ ಬೆಂಬಲದಿಂದಾಗಿ

ಪಡೆದ ಹಣವನ್ನು ಸರಿಯಾಗಿ ಹಿಂತಿರುಗಿಸದೆ ಇರುವ ಹಲವಾರು ಉದಾಹರಣೆಗಳನ್ನು ನಾವು ಕಾಣಬಹುದಾಗಿದೆ. ಹೊರನೋಟಕ್ಕೆ ಮಹಿಳೆಯರು ಗುಂಪು ಮಾಡಿಕೊಂಡು ನಿರ್ವಹಿಸುತ್ತಿದ್ದಾರೆಂದು ಗೋಚರಿಸುತ್ತಿದ್ದರು, ಪರೋಕ್ಷವಾಗಿ ಆ ಗುಂಪು ಅಲ್ಲಿಯ ಪ್ರಬಲ ಸದಸ್ಯೆ ಮತ್ತು ಅವರ ಕುಟುಂಬದ ಪುರುಷರ ನಿಯಂತ್ರಣದಲ್ಲಿರುತ್ತದೆ. ಹೊರನೋಟಕ್ಕೆ ಇವು ಗೋಚರಿಸದಿದ್ದರು, ಸೂಕ್ಷ್ಮವಾಗಿ ಅವಲೋಕಿಸಿದಾಗ ಈ ಅಂಶಗಳನ್ನು ಅರಿಯಬಹುದಾಗಿದೆ.

ಮಹಿಳಾ ಸ್ವಸಹಾಯ ಗುಂಪುಗಳು ಇಂದು ಮಹಿಳಾ ಸಂಘಟನೆಗಳಾಗಿ ಬೆಳೆಯುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಗುಂಪುಗಳ ಸದಸ್ಯರನ್ನು ರಾಜಕೀಯ ದುರೀಣರು, ಸಂಘಸಂಸ್ಥೆಗಳು ತಮ್ಮ ವೈಯಕ್ತಿಕ ವರ್ಚಸ್ಸನ್ನು ಬೆಳೆಸಿಕೊಳ್ಳಲು ಉಪಯೋಗಿಸಿಕೊಳ್ಳುತ್ತಿದ್ದಾರೆ. ಗ್ರಾಮಗಳಿಗೆ ರಾಜಕೀಯ ವ್ಯಕ್ತಿಗಳು ಬಂದರೇ, ಸಾರ್ವಜನಿಕ ಸಭೆಗಳನ್ನು ನಡೆಸಿದರೆ, ಸರ್ಕಾರಿ ಮೆರವಣಿಗೆಗಳು ನಡೆದರೆ ಎಲ್ಲದಕ್ಕೂ ಸ್ತ್ರೀಶಕ್ತಿ ಮತ್ತು ಮಹಿಳಾ ಸ್ವಸಹಾಯಗಳ ಸದಸ್ಯರು ಬೇಕು ಆದರೆ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಈ ಸದಸ್ಯೆಯರಿಗೆ ಯಾವ ಲಾಭ ಸಹ ಇರುವುದಿಲ್ಲ, ರಾಜಕೀಯ ಮುಕಂಡರು, ಅಧಿಕಾರಿಗಳು ತಮ್ಮ ಜನಸಂಖ್ಯಾ ಬಲವನ್ನು ತೋರಿಸಲು ಸ್ವಸಹಾಯ ಗುಂಪುಗಳ ಸದಸ್ಯರುಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಮಹಿಳೆಯರು ತಮ್ಮ ದಿನನಿತ್ಯದ ಕೆಲಸ ಕಾರ್ಯಗಳನ್ನು ಬಿಟ್ಟು ಈ ರೀತಿಯ ಸಭೆ ಸಮಾರಂಭಗಳಿಂದ ತಮಗೇನಾದರು ಲಾಭವಾಗಬಹುದೇನೋ ಎಂಬ ನಿರೀಕ್ಷೆಯಿಂದ ಭಾಗವಹಿಸುತ್ತಾರೆ. ಆದರೆ ಅವರ ನಿರೀಕ್ಷೆಗಳು ಸುಳ್ಳಾಗುತ್ತಿವೆ. ಆದ್ದರಿಂದ ಮಹಿಳೆಯರು ಇಂಥ ಸಂಗತಿಗಳ ಕುರಿತಂತೆ ಜಾಗೃತರಾಗಬೇಕಾದ ಅಗತ್ಯ ಇದೆ. ಮಹಿಳೆಯರು ಯಾರನ್ನು ಅವಲಂಬಿಸದೇ ತಾವೇ ಸ್ವಾವಲಂಬಿಗಳಾಗುವ ನಿಟ್ಟಿನಲ್ಲಿ ಪ್ರಯತ್ನಪಡಬೇಕಾಗಿದೆ.

ಸ್ತ್ರೀಶಕ್ತಿ ಮಹಿಳಾ ಸ್ವಸಹಾಯ ಗುಂಪುಗಳ ಪ್ರಮುಖ ಉದ್ದೇಶ ಮಹಿಳೆಯರ ಜೀವನ ಮಟ್ಟದಲ್ಲಿ ಸುಧಾರಣೆ ತರುವುದೇ ಆಗಿದೆ. ಅವರು ಸಾಮಾಜಿಕ, ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡು ತಮ್ಮ ಸ್ವಾವಲಂಬಿ ಜೀವನಕ್ಕೆ ನಾಂದಿಯನ್ನು ಹಾಡಬೇಕಾಗುತ್ತದೆ. ಆರ್ಥಿಕ ಸ್ವಾವಲಂಬಿ ಜೀವನಕ್ಕೆ ಹಣಕಾಸಿನ ಸಂಪನ್ಮೂಲ ಅತ್ಯಗತ್ಯವಾಗಿರುತ್ತದೆ. ಇದಕ್ಕಾಗಿ ಅವರು ಸ್ಥಳೀಯ ಬ್ಯಾಂಕುಗಳಿಂದ ಸಾಲಸೌಲಭ್ಯವನ್ನು ಪಡೆಯಬೇಕಾಗುತ್ತದೆ. ಸಂಘಗಳ ಸದಸ್ಯರು ಬ್ಯಾಂಕ್‌ಗಳ ಹತ್ತಿರ ಸಾಲಕೇಳಲು ಹೋದಾಗಿನಿಂದಲೇ ಸಮಸ್ಯೆಗಳು ಪ್ರಾರಂಭಗೊಳ್ಳುತ್ತವೆ. ಸರ್ಕಾರವು ಮಹಿಳೆಯರಿಗೆ ಸಹಾಯ ಸೌಲಭ್ಯಗಳನ್ನು ನೀಡುವಲ್ಲಿ ತೋರುತ್ತಿರುವ ಕಾಳಜಿ, ಈ ಹಣಕಾಸಿನ ಸಂಸ್ಥೆಗಳಲ್ಲಿ ಇಲ್ಲದಂತಾಗಿದೆ. ಹಣಕಾಸಿನ ಸಂಸ್ಥೆಗಳು ಸಾಲ ನೀಡುವ ಸಂದರ್ಭದಲ್ಲಿ ಅನಾವಶ್ಯಕವಾಗಿ ಗುಂಪಿನ ಸದಸ್ಯರನ್ನು ಹಲವಾರು ಭಾರಿ ಓಡಾಡಿಸುವ ಉದಾಹರಣೆಗಳು ಇವೆ. ಸಾಲವನ್ನು ನೀಡುವಲ್ಲಿ ಅನವಶ್ಯಕ ವಿಳಂಬ, ಗುಂಪಿನ ಸದಸ್ಯರನ್ನು ಪರಿಗಣಿಸುವ ರೀತಿ, ಇವೆಲ್ಲವು ಗುಂಪಿನ ಸದಸ್ಯರ ಮೇಲೆ ಪ್ರಭಾವ ಬೀರಿ, ಬ್ಯಾಂಕುಗಳಿಂದ ಸಾಲವೆ ಬೇಡ ಎನ್ನುವ ಸ್ಥಿತಿಗೆ ಕೆಲವು ಗುಂಪುಗಳು ಬಂದಿವೆ. ಮಹಿಳೆಯರ

ಸಬಲೀಕರಣಕ್ಕೆ, ಸ್ವಾವಲಂಬಿ ಜೀವನಕ್ಕೆ ಮಹಿಳೆಯರ ಜೊತೆಯಲ್ಲಿ ಹಣಕಾಸಿನ ಸಂಘಸಂಸ್ಥೆಗಳು ಸಹಾಯ ಸಹಕಾರ ನೀಡಬೇಕಾಗುತ್ತದೆ. ಎಲ್ಲರ ಸಹಭಾಗಿತ್ವದ ಪ್ರಯತ್ನದಿಂದ ಮಾತ್ರ ಸಮುದಾಯದಲ್ಲಿ ಪ್ರಗತಿಯ ಬೆಳಕನ್ನು ತರಲು ಸಾಧ್ಯ. ಅಭಿವೃದ್ಧಿ ಎಂಬುದು ಎಲ್ಲಿಯೋ ನಿರ್ವಾತದಲ್ಲಿ ಸಂಭವಿಸುವುದಿಲ್ಲ. ಇದಕ್ಕೆ ಸಂಘ ಸಮುದಾಯಗಳ ಪ್ರಯತ್ನಬೇಕಾಗುತ್ತದೆ. ಮಹಿಳೆಯರ ಬದುಕನ್ನು ಹಸನಾಗಿಸುವ ಸಂಘ ಸಂಸ್ಥೆಗಳ, ಸರ್ಕಾರದ, ಜನತೆಯ ಕನಸುಗಳಿಗೆ ಹಣಕಾಸಿನ ಸಂಸ್ಥೆಗಳು ಸಹ ನೆರವಾಗಿ ನಿಲ್ಲಬೇಕಾಗುತ್ತವೆ. ಹಣಕಾಸನ್ನು ನೀಡುತ್ತಿವೆ ಎಂಬ ಹೆಗ್ಗಳಿಕೆಯಿಂದ ಹೊರಬಂದು, ಸಾಮಾನ್ಯ ಜನರೊಂದಿಗೆ ಸಾಮಾನ್ಯವಾಗಿ ಬೇರೆಯಬೇಕಾದ ಅಗತ್ಯ ಇದೆ.

ಸರ್ಕಾರ ಮತ್ತು ವಾಣಿಜ್ಯ ಬ್ಯಾಂಕುಗಳು ಸ್ತ್ರೀಶಕ್ತಿ, ಸ್ವಸಹಾಯ ಗುಂಪುಗಳಿಗೆ ಸಾಲ ಸೌಲಭ್ಯವನ್ನು ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಲು ಹಣಕಾಸನ್ನು ನೀಡಲಾಗುತ್ತಿದೆ. ಆದರೆ ಯಾವ ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಬೇಕು ಎನ್ನುವುದನ್ನು ಕುರಿತು ಗುಂಪುಗಳಿಗೆ ಹೆಚ್ಚಿನ ತರಬೇತಿಯನ್ನು ನೀಡಿರುವುದಿಲ್ಲ. ಅವುಗಳಿಗೆ ಪೂರ್ವಸಿದ್ಧತೆ ಸಹ ಇರುವುದಿಲ್ಲ. ಇದರಿಂದಾಗಿ ಪಡೆದ ಸಾಲವನ್ನು ಸದಸ್ಯರುಗಳಲ್ಲಿ ಸಮಾನವಾಗಿ ಹಂಚಿಕೊಳ್ಳುವ ಪರಿಪಾಠವನ್ನು ಹಲವಾರು ಗುಂಪುಗಳಲ್ಲಿ ಕಾಣಬಹುದಾಗಿದೆ. ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಲು ಪೂರ್ವ ತಯಾರಿ ಇಲ್ಲದೆ ಕೈಗೊಳ್ಳುವ ಚಟುವಟಿಕೆಗಳು ವಿಫಲಗೊಳ್ಳುವ ಸಾಧ್ಯತೆ ಇರುತ್ತದೆ. ಅದರಿಂದ ಬ್ಯಾಂಕುಗಳಿಂದ ಸಾಲ ಪಡೆಯುವ ಮುನ್ನ ತಾವು ಕೈಗೊಳ್ಳಬಹುದಾದ ಆರ್ಥಿಕ ಚಟುವಟಿಕೆಗಳಾವುವು; ಅವುಗಳಿಗೆ ಕಚ್ಚಾಸರಕು ಯಾವುದು, ಅವುಗಳ ಮಾರಾಟವ್ಯವಸ್ಥೆ ಹೇಗೆ ಎಂಬಿತ್ಯಾದಿ ಅಂಶಗಳ ಬಗ್ಗೆ ಗುಂಪುಗಳು ಗಮನಹರಿಸಬೇಕಾದ ಅಗತ್ಯ ಇದೆ. ಇವರೆಗೂ ಗುಂಪುಗಳು ತಾವು ಪಡೆದ ಸಾಲವನ್ನು ಸಮನಾಗಿ ಹಂಚಿಕೊಳ್ಳುವ ಪರಿಪಾಠ ಹೆಚ್ಚಿಸಿರುವುದರಿಂದ ಇಡೀ ಗುಂಪು ಒಟ್ಟಾಗಿ ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ವೈಯಕ್ತಿಕವಾಗಿ ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳುತ್ತೇವೆ ಎಂಬ ನೆಪದಲ್ಲಿ ಸಾಲ ಪಡೆದ ಹಣವನ್ನು ತಮ್ಮ ಹೊಲಗದ್ದೆಗಳಿಗೆ ಖರ್ಚುಮಾಡಿದ ಹಲವಾರು ಉದಾಹರಣೆಗಳು ಕಂಡುಬಂದಿವೆ. ಅಲ್ಲದೆ ಇಡೀ ಗುಂಪು ಒಗ್ಗಟ್ಟಾಗಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಬರುವ ಆದಾಯದ ಪ್ರಮಾಣವು ಸಹ ಅಧಿಕವಾಗಿರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಸಂಘಸಂಸ್ಥೆಗಳು ಸ್ವಸಹಾಯ ಗುಂಪುಗಳು ಕೈಗೊಳ್ಳಬೇಕಾಗಿರುವ ಚಟುವಟಿಕೆಗಳನ್ನು ನಿರ್ದಿಷ್ಟವಾಗಿ ಗುರುತಿಸಿ ಅವುಗಳ ಕುರಿತಂತೆ ಸ್ವಸಹಾಯ ಸಂಘದ ಸದಸ್ಯರಿಗೆ ತರಬೇತಿ ನೀಡಿ, ಅವರನ್ನು ಸಿದ್ಧಗೊಳಿಸಿ, ನಂತರ ಅವರಿಗೆ ಸಾಲಸೌಲಭ್ಯವನ್ನು ನೀಡುವಂತ ವ್ಯವಸ್ಥೆಯಾಗಬೇಕು ಹಾಗಾದಾಗ ಮಾತ್ರ ಮಹಿಳೆಯರು ಅಧಿಕ ಪ್ರಗತಿಯನ್ನು ಕಂಡು ಸ್ವಾವಲಂಬಿ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ.

ಸಾದಿಸಲಾದ ಪ್ರಗತಿಯನ್ನು ಉಳಿಸಿಕೊಳ್ಳಬೇಕಾದರೆ, ಆರ್ಥಿಕ ಪ್ರಗತಿ ಅನಿವಾರ್ಯವಾಗಿರುತ್ತದೆ. ಮಹಿಳಾ ಸ್ವಸಹಾಯ ಗುಂಪುಗಳು ಅದರ ಸದಸ್ಯರುಗಳು ಸಬಲೀಕರಣ ಹೊಂದಬೇಕಾದರೆ ಅವರು

ಆರ್ಥಿಕ ಸ್ವಾವಲಂಬಿಗಳಾಗಬೇಕಾಗುತ್ತದೆ. ಸರಕಾರ ಸಂಘ ಸಂಸ್ಥೆಗಳು, ಮಹಿಳೆಯರ ಸ್ವಾವಲಂಬನೆಗಾಗಿ ಹಲವಾರು ಪ್ರಯತ್ನಗಳನ್ನು ಮಾಡಿವೆಯಾದರು, ಇನ್ನೂ ಮಾಡಬೇಕಾಗಿರುವ ಕೆಲಸ ಕಾರ್ಯಗಳು ಅಗಾಧವಾಗಿವೆ. ಮಹಿಳಾ ಸ್ವಸಹಾಯ ಗುಂಪುಗಳು, ಹಣಕಾಸಿನ ಬ್ಯಾಂಕುಗಳನ್ನು, ಹಣಕಾಸಿನ ಸಂಸ್ಥೆಗಳನ್ನು ಅವಲಂಬಿಸದೆ ಆ ಗುಂಪುಗಳೇ ಹಣಕಾಸಿನ ಸಂಸ್ಥೆಗಳಿಗೆ ಸಾಲ ಸೌಲಭ್ಯವನ್ನು ನೀಡುವಂತ ಪರಿಸ್ಥಿತಿ ಉದ್ಭವವಾಗಬೇಕು. ಗುಂಪುಗಳಿಗೆ ಕೇವಲ ಸಾಲ ಸೌಲಭ್ಯಗಳನ್ನು ನೀಡಿದರೆ ಸಾಲದು. ಅವುಗಳ ನಿರ್ವಹಣೆ, ಆರ್ಥಿಕ ಚಟುವಟಿಕೆಗಳ ಕುರಿತು, ತರಬೇತಿ ಪೂರ್ವ ತಯಾರಿಯನ್ನು ಅವರಿಗೆ ನೀಡಬೇಕಾಗುತ್ತದೆ. ಸರ್ಕಾರ, ಸಮುದಾಯ, ಸಂಘ ಸಂಸ್ಥೆಗಳ ಸಹಾಯ ಸಹಕಾರದಿಂದ ಈ ಪ್ರಯತ್ನವನ್ನು ಸಾಧಿಸಬಹುದಾಗಿದೆ.

ಪ್ರಸ್ತುತ ಅಧ್ಯಯನ ಕ್ಷೇತ್ರದಲ್ಲಿ ಕ್ಷೇತ್ರಕಾರ್ಯ ಕೈಗೊಂಡಾಗ ಸ್ವಸಹಾಯ ಸಂಘಗಳಲ್ಲಿ ಕಂಡುಬಂದ ಅಂಶಗಳನ್ನು ಈ ರೀತಿಯಾಗಿ ತಿಳಿಸಲಾಗಿದೆ.

೧. ಸಂಘಗಳು ಉಳಿತಾಯ ಸಂಗ್ರಹಣೆಯಲ್ಲಿ ಮುನ್ನಡೆಯುತ್ತಿದೆ.

೨. ಸದಸ್ಯರು ಅನಕ್ಷರಸ್ಥರಾದರೂ ಸಂಘದ ಧ್ಯೇಯೋದ್ದೇಶಗಳ ಬಗ್ಗೆ ಅರಿವಿರುವುದು ಕಂಡುಬರುತ್ತದೆ.

೩. ಎಲ್ಲ ಸ್ವಸಹಾಯ ಸಂಘಗಳಲ್ಲಿ ಸದಸ್ಯರು, ಸಭೆಗಳಲ್ಲಿ ಭಾಗವಹಿಸಿದ ಬಗ್ಗೆ ಹಾಜರಾತಿ ಪುಸ್ತಕವನ್ನು ಇಟ್ಟಿರುವುದು ಒಂದು ವಿಶೇಷ.

೪. ಸಂಘದ ವತಿಯಿಂದ ಸದಸ್ಯರುಗಳಿಗೆ ಅಭಿವೃದ್ಧಿ ಹಾಗೂ ಉಪಯುಕ್ತ ಚಟುವಟಿಕೆಗಳಿಗೆ ಮಾತ್ರ ಸಾಲ ನೀಡಲಾಗುತ್ತಿದೆ.

೫. ಮಹಿಳಾ ಸಂಘಗಳನ್ನು ಗಮನಿಸಿದಾಗ, ಸಮಾನ ಮನಸ್ಸಿದ್ದು, ಒಗ್ಗಟ್ಟಿನ ಮನೋಭಾವ ಇರುವುದು ಕಂಡುಬರುತ್ತದೆ.

೬. ಸಂಘದ ನಡಾವಳಿಯನ್ನು ಸಕ್ರಿಯವಾಗಿ ಬರೆಯಲಾಗುತ್ತಿದೆ.

೭. ಸಂಘದ ಸದಸ್ಯರಲ್ಲಿ ಹೆಚ್ಚಾಗಿ ಕಡುಬಡವರು ಮತ್ತು ಸಣ್ಣರೈತರು ಕಂಡುಬರುತ್ತಾರೆ.

೮. ಸ್ವಸಹಾಯ ಸಂಘಗಳ ರಚನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಹೆಚ್ಚಾಗಿವೆ.

೯. ಸಂಘದ ಸಭೆಯಲ್ಲಿ ಶೇ ೮೦ರಷ್ಟು ಸದಸ್ಯರು ಭಾಗವಹಿಸುತ್ತಾರೆ. ಸಭೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

೧೦. ಕ್ಷೇತ್ರಕಾರ್ಯದಲ್ಲಿ ಕಂಡುಬಂದಂತೆ ಮಹಿಳಾ ಸಂಘಗಳಲ್ಲಿ ಉತ್ತಮ ನಾಯಕತ್ವದ ಲಕ್ಷಣಗಳು ಕಂಡುಬರುತ್ತವೆ.

೧೧. ಕೆಲವು ಸಂಘಗಳಲ್ಲಿ ಒಂದೇ ಸಮೂಹಕ್ಕೆ ಸೇರಿದ ಸದಸ್ಯರಿದ್ದರೆ, ಕೆಲವು ಸಂಘಗಳಲ್ಲಿ ಎಲ್ಲಾ ಸಮುದಾಯದ ಜನರು ಕಂಡುಬರುತ್ತಾರೆ.

೧೨. ಎಲ್ಲಾ ಸ್ವ ಸಹಾಯ ಸಂಘುಗಳು ಯಾವುದಾದರೊಂದು ಬ್ಯಾಂಕಿನಲ್ಲಿ ಖಾತೆ ಹೊಂದಿವೆ.

ಬುಡಕಟ್ಟು ಮಹಿಳಾ ಸ್ವಸಹಾಯ ಸಂಘುದ ಸಾಲಯೋಜನೆ

ಬುಡಕಟ್ಟು ಮಹಿಳಾ ಸ್ವಸಹಾಯ ಸಂಘುಗಳ ಪ್ರಮುಖವಾದ ಉದ್ದೇಶ ಉಳಿತಾಯವನ್ನು ಮಾಡಿ ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳುವುದು. ಅಂದರೆ ಕೆಲವು ಸಮಯದಲ್ಲಿ ಉಳಿತಾಯಸಾಧ್ಯವಾಗದಿದ್ದಾಗ ಸಾಲದ ಮೊರೆ ಹೋಗಬೇಕಾಗುತ್ತದೆ. ಈ ಸಾಲಯೋಜನೆಯು ಪ್ರತಿಯೊಂದು ಸಮುದಾಯದ ಮಹಿಳೆ ಮತ್ತು ಬುಡಕಟ್ಟು ಮಹಿಳಾ ಸ್ವಸಹಾಯ ಸಂಘುಗಳಿಗೆ ಸಹಾಯಾಸ್ತವನ್ನು ಚಾಚಿರುವುದನ್ನು ಗಮನಿಸಿದ್ದೇವೆ. ಹಾಗೆಯೇ ತಮ್ಮ ಜೀವನದ ಮೇಲೆ ಮತ್ತು ಕೆಲಸದ ಮೇಲೆ ನಿಯಂತ್ರಣ ಹೊಂದಲು ಹಾಗೂ ಬಡತನ ನಿವಾರಿಸಲು ಪ್ರಮುಖವಾದ ಮಾರ್ಗವೆಂದರೇ ಈ ಬುಡಕಟ್ಟು ಮಹಿಳೆಯರ ಮತ್ತು ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರ ಉಳಿತಾಯ ಹಾಗೂ ಸಾಲಸೌಲಭ್ಯವನ್ನು ಪಡೆದುಕೊಳ್ಳುವುದು. ಈ ಉಳಿತಾಯ ಮತ್ತು ಸಾಲ ಯೋಜನೆಯು ಎಲ್ಲಾ ಸ್ವಸಹಾಯ ಸಂಘುಗಳಲ್ಲಿಯು ಕಂಡುಬರುತ್ತದೆ. ಈ ಮಹಿಳೆಯರ ಗುಂಪುಗಳು ಸದಸ್ಯರನ್ನು ಒಬ್ಬರನ್ನೊಬ್ಬರನ್ನು ಅರ್ಥಮಾಡಿಕೊಳ್ಳಲು ಒಬ್ಬರಿಗೊಬ್ಬರು ಸಹಾಯಮಾಡಲು, ಆದಾಯವನ್ನು ಹೆಚ್ಚಿಸಿಕೊಳ್ಳಲು ಉತ್ತಮವಾದ ಮಾರ್ಗವಾಗಿದೆ. ಉಳಿತಾಯ ಮತ್ತು ಸಾಲಸೌಲಭ್ಯದ ಪ್ರಮುಖವಾದ ಮೂಲ ಈ ಸ್ವಸಹಾಯ ಸಂಘುಗಳು.

ಈ ಸ್ವಸಹಾಯ ಸಂಘುಗಳು ಮಹಿಳೆಯರ ಮತ್ತು ಪ್ರತಿಯೊಬ್ಬರ ಬದುಕಿನಲ್ಲಿ ಬದಲಾವಣೆಯನ್ನು ತರುತ್ತಿದೆ ಮತ್ತು ತಮ್ಮ ಬೇಡಿಕೆಗಳನ್ನು ಇಡೇರಿಸಿಕೊಳ್ಳಲು, ಉಳಿತಾಯ ಮಾಡಲು, ಭವಿಷ್ಯವನ್ನು ರೂಪಿಸಿಕೊಳ್ಳಲು ಈ ಸಂಘುಗಳು ಮಾರ್ಗದರ್ಶಿಯಾಗಿವೆ. ಈ ಸಂಘುಗಳು ಪ್ರತಿಯೊಬ್ಬ ಮಹಿಳಾ ಸದಸ್ಯರು ತಾವು ಸಾಲ ಪಡೆಯುವಾಗ ಯಾವ ಉದ್ದೇಶಕ್ಕಾಗಿ ಸಾಲಪಡೆಯಬೇಕು, ಅದನ್ನು ಯಾವ ರೀತಿ ವಿನಿಯೋಗ ಮಾಡಬೇಕು ಮತ್ತು ಪಡೆದ ಸಾಲವನ್ನು ಹೇಗೆ ಮರುಪಾವತಿ ಮಾಡಬೇಕೆನ್ನುವ ಹಲವಾರು ಅಂಶಗಳನ್ನು ತಿಳಿಸಿಕೊಡುತ್ತದೆ. ಜೊತೆಗೆ ಮಹಿಳೆಯರಲ್ಲಿ ಹಣವನ್ನು ಉಳಿತಾಯ ಮಾಡಿ, ಅದನ್ನು ಯಾವ ಸಮಯದಲ್ಲಿ ಉಪಯುಕ್ತವಾಗಿ ಬಳಸಿಕೊಳ್ಳಬೇಕೆನ್ನುವ ಹಲವಾರು ಅಂಶಗಳನ್ನು ತಿಳಿಸಿ ಕೊಡುತ್ತದೆ.

ವೀರಾಜಪೇಟೆ ತಾಲೂಕಿನ ಸ್ವಸಹಾಯ ಗುಂಪುಗಳು ಮತ್ತು ಸ್ತ್ರೀಶಕ್ತಿ ಸಂಘುಗಳು ಬ್ಯಾಂಕಿನ ಉಳಿತಾಯದ ಮೊತ್ತ, ಸದಸ್ಯರ ಸಂಖ್ಯೆ, ಸುತ್ತುನಿಧಿ, ಬ್ಯಾಂಕ್‌ಸಾಲವನ್ನು ಪಡೆದಿದ್ದಾರೆ ಅಥವಾ ಇಲ್ಲವೆ ಎಂಬುದನ್ನು ಈ ಕೋಷ್ಟಕದ ಮೂಲಕ ತೋರಿಸಲಾಗಿದೆ.

ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ ತಿತಿಮತಿ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುವ ಸ್ವಸಹಾಯ ಸಂಘಗಳು.

ಕ್ರ.ಸಂ.	ಗುಂಪಿನ ಹೆಸರು	ಖಾತೆಯ ಸಂಖ್ಯೆ	ಒಟ್ಟು ಸದಸ್ಯರು	ಸುತ್ತು ನಿಧಿ		ಬ್ಯಾಂಕ್ ಸಾಲ	ಸ್ವಸಹಾಯ ಧನ	ಸಂಘದ ಉಳಿತಾಯ
				ಜಿ.ಪಂ.	ಇಲಾಖೆ			
೦೧.	ಭಗವತಿ ಸ್ತ್ರೀಶಕ್ತಿ ಸಂಘ	೩೬೨	೨೦		೫೦೦೦	೧,೦೧,೦೦೦		೧೩೧೩೦೫
೦೨.	ಕನ್ನಿಕ ಸ್ತ್ರೀಶಕ್ತಿ ಸಂಘ	೩೬೩	೨೦	೧೦೦೦		೯೭೫೦೦		೮೪೭೪೨
೦೩.	ಪ್ರತಿಷ್ಠಾ ಸ್ತ್ರೀಶಕ್ತಿ ಸಂಘ	೩೬೦	೨೦	೧೦೦೦			೧,೨೫೦೦೦	೨೦೨೫೭೪
೦೪.	ಬಾಬಾಸ್ತ್ರೀ ಶಕ್ತಿ ಸಂಘ	೩೩೮	೧೨		೫೦೦೦	೧೦೦೦೦೦		೫೬೯೫೫೩
೦೫.	ಶ್ರೀಕೃಷ್ಣ ಮಹಿಳಾ ಸಂಘ	೩೪೯	೧೨		೫೦೦೦	೧೦೦೦೦೦		೫೦೭೮೯
೦೬.	ಶ್ರೀ ಗಣೇಶ ಸ್ತ್ರೀ ಸಂಘ	೩೫೦	೧೧		೫೦೦೦	೧೦೦೦೦೦		೫೮೯೮೫
೦೭.	ಜ್ಯೋತಿ ಮಹಿಳಾ ಸಂಘ	೩೯೫	೧೨	೧೦೦೦		೧೨೫೦೦೦		೧೩೦೯೯೪
೦೮.	ಮಾದೇಶ್ವರ ಸಂಘ	೪೧೪	೧೧	೫೦೦೦	೫೦೦೦	೧೪೦೦೦		೭೪೪೧೪
೦೯.	ಸಿದ್ಧಾಪ್ಪಾಜಿ ಸ್ತ್ರೀಶಕ್ತಿ ಸಂಘ	೪೨೬	೨೦	೧೦೦೦		೨೫೦೦೦		೭೩೩೭
೧೦.	ದುರ್ಗಾಪರಮೇಶ್ವರಿ ಮಹಿಳಾ ಸ್ವಸಹಾಯ ಸಂಘ ಭದ್ರಗೊಳ	೪೮೭	೨೧		೫೦೦೦	೬೨೦೦೦		೯೭೧೬೬
೧೧.	ಗಣಪತಿ ಮಹಿಳಾ ಸ್ವಸಹಾಯ ಸಂಘ ತಿರುಮಲೆ	೪೯೪	೨೦	೧೦೦೦	೫೦೦೦	೧೫೦೦೦		೬೮೧೪
೧೨.	ಕಾವೇರಿ ಮಹಿಳಾ ಸ್ವಸಹಾಯ ಸಂಘ ನೂಕ್ಯ	೫೦೬	೧೫		೫೦೦೦	೧೩೦೦೦		೧೮೦೩೬
೧೩.	ಪ್ರಗತಿ ಸ್ತ್ರೀಶಕ್ತಿ ಸಂಘ ಭದ್ರಗೋಳ ೧	೧೮೦೬	೧೫		೧೦೦೦			೬೫,೫೯೦

೧೪.	ಚಾಮುಂಡೇಶ್ವರಿ ಸ್ವಸಹಾಯ ಸಂಘ	೨೦೪೨	೧೨			೫೦೦೦೦		೮೦೦೦೦
೧೫.	ಗಣಪತಿ ಮಹಿಳಾ ಸ್ವಸಹಾಯ ಸಂಘ ಮಲ್ದಾರೆ	೨೯೦೯	೨೦					೫೦೦೦
೧೬.	ಕಿತ್ತೂರು ಚೆನ್ನಮ್ಮ ಸ್ವಸಹಾಯ ಸಂಘ	೩೦೧೭	೧೨					೪೦೦೦
೧೭.	ಕಾವೇರಿ ಮಹಿಳಾ ಸ್ವಸಹಾಯ ಸಂಘ ಮಲ್ದಾರೆ	೧೧೯೯೪	೨೦					೩೬೪೯
೧೮.	ಅಂಬೇಡ್ಕರ್ ಮಹಿಳಾ ಸಹಾಯ ಸಂಘ, ಮಲ್ದಾರೆ	೪೮೫೩	೧೦					೬೭೧೪
೧೯.	ಸುವರ್ಣ ಸ್ತ್ರೀಶಕ್ತಿ ಸಂಘ	೪೮೩	೧೭			೨೯೫೦೦		೪೫೦೦೦

ಈ ರೀತಿಯಾಗಿ ಮಹಿಳಾ ಸ್ವಸಹಾಯ ಮತ್ತು ಸ್ತ್ರೀಶಕ್ತಿ ಸಂಘಗಳು ಬ್ಯಾಂಕಿನ ಸಾಲಸೌಲಭ್ಯ ಮತ್ತು ಸಹಾಯಧನ ಮುಂತಾದವುಗಳನ್ನು ಮಹಿಳಾ ಸದಸ್ಯರಿಂದ ತಿಳಿದುಕೊಳ್ಳಲಾಗಿದೆ. ನನ್ನ ಈ ಅಧ್ಯಯನಕ್ಕೆ ೩೦ ಸ್ವಸಹಾಯ ಮತ್ತು ಸ್ತ್ರೀಶಕ್ತಿ ಗುಂಪುಗಳನ್ನು ಅಳವಡಿಸಿಕೊಳ್ಳಲಾಗಿದೆ.

ಪ್ರಸ್ತುತದಲ್ಲಿ ಮಹಿಳಾ ಸ್ವಸಹಾಯ ಸಂಘಗಳು ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಈ ಸಂಘಗಳು ಬುಡಕಟ್ಟು ಮಹಿಳೆಯರ ಮತ್ತು ಗ್ರಾಮೀಣ ಪ್ರದೇಶದ ಹಿಂದುಳಿದ ಸಮುದಾಯದ ಮಹಿಳೆಯರ ಬದುಕಿನಲ್ಲಿ ಹೊಸ ಮಾರ್ಗಗಳನ್ನು ತೋರಿಸಿಕೊಟ್ಟಿವೆ. ಈ ಮಹಿಳೆಯರಲ್ಲಿ ಸಹಕಾರ ಮನೋಭಾವನೆಯ ಜೊತೆಗೆ ಉಳಿತಾಯದ ಭಾವನೆಯನ್ನು ಹೆಚ್ಚಿಸಿ ಮಹಿಳೆಯರ ಬದುಕಿನಲ್ಲಿ ಆಶಾ ಭಾವನೆಯನ್ನು ಮೂಡಿಸಿದೆ.

ವೀರಾಜಪೇಟೆಯಲ್ಲಿರುವ ಮಹಿಳಾ ಸ್ವಸಹಾಯ ಸಂಘಗಳು ಯಾವ ಸಂಘ ಯಾವ ಬ್ಯಾಂಕಿನಿಂದ ಸಾಲ ಸಂಪರ್ಕ ಪಡೆದುಕೊಂಡಿವೆ ಹಾಗೆಯೇ ಎಷ್ಟು ಪಡೆದುಕೊಂಡಿವೆ ಎಂಬುದನ್ನು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಯಬಹುದು.

ಕ್ರ.ಸಂ. ಸಂಘದ ಹೆಸರು	ಊರು	ಪಡೆದ ಸಾಲದ ಮೊತ್ತ	ಬ್ಯಾಂಕ್‌ನ ಹೆಸರು
೦೧. ಮಹಾಲಕ್ಷ್ಮಿ ಸ್ತ್ರೀಶಕ್ತಿ ಸಂಘ	ಮಲ್ದಾರೆ	೭೦೦೦	ವ್ಯವಸಾಯ ಸೇವಾ ಸಹಕಾರ ನಿಯಮಿತ ಮಲ್ದಾರೆ.

೦೨.	ಧನಲಕ್ಷ್ಮಿ ಸ್ತ್ರೀಶಕ್ತಿ ಸಂಘ	ಗೊಡ್ಲೂರು	೭೦೦೦	ವ್ಯಸೇ.ಸ.ನಿ.ಮಲ್ದಾರೆ
೦೩.	ಅಂಬೇಡ್ಕರ್ ಮಹಿಳಾ ಸ್ವಸಹಾಯ ಸಂಘ	ನೂಕ್ಯ	೩೦,೦೦೦	ವ್ಯಸೇ.ಸ.ನಿಯಮಿತ ತಿರುಮಲೆ
೦೪.	ಗೌರಿಮಹಿಳಾ ಸ್ವ ಸಹಾಯ ಸಂಘ	ನೂಕ್ಯ	೧೮,೦೦೦	ವ್ಯಸೇ.ಸ.ನಿಯಮಿತ ತಿರುಮಲೆ
೦೫.	ದುರ್ಗಾಪರಮೇಶ್ವರಿ ಸ್ತ್ರೀಶಕ್ತಿ ಗುಂಪು	ಭದ್ರಗೋಳ ೨	೨೦,೦೦೦	ವ್ಯಸೇ.ಸ.ನಿಯಮಿತ ತಿರುಮಲೆ
೦೬.	ಪವಿತ್ರ ಮಹಿಳಾ ಸ್ವಸಹಾಯ ಸಂಘ	ಅವರೆಗೊಂದ	೨೯,೦೦೦	ವಿಎಸ್ಎಸ್ಎನ್, ಮಲ್ದಾರೆ
೦೭.	ಕೋಮಲ, ಮಹಿಳಾ ಸ್ವಸಹಾಯ ಸಂಘ	ಚೆನ್ನಂಗಿ	೧೫,೦೦೦	ವಿಎಸ್ಎಸ್ಎನ್, ಮಲ್ದಾರೆ
೦೮.	ಚೈತ್ರಾ ಮಹಿಳಾ ಸ್ವಸಹಾಯ ಸಂಘ	ಬಾಡಗಾ	೧೦,೦೦೦	ವಿಎಸ್ಎಸ್ಎನ್ ಮಲ್ದಾರೆ
೦೯.	ಪೂಜಾ ಮಹಿಳಾ ಸ್ವ ಸಹಾಯ ಸಂಘ	ಬಾಡಗ	೧೦,೦೦೦	ವಿಎಸ್ಎಸ್ಎನ್ ಮಲ್ದಾರ
೧೦.	ಕಾರದ ಮಹಿಳಾ ಸ್ವ	ಚನ್ನಂಗ	೧೫,೦೦೦	ವಿಎಸ್ಎಸ್ಎನ್. ಮಲ್ದಾರ

ಕಲ್ಯಾಣವಾದಿ ಕಾರ್ಯಕ್ರಮಗಳು

ಅನೇಕ ಅಧ್ಯಯನಗಳು ಗುರುತಿಸಿರುವಂತೆ ಮಹಿಳೆಯರನ್ನು ಕುರಿತಂತೆ ಭಾರತದಲ್ಲಿ ಆರ್ಥಿಕ ಪಾಲಿಸಿ, "ಕಲ್ಯಾಣವಾದಿ" ಧೋರಣೆ ತಳೆದಿವೆ. "ಮಹಿಳಾ ಕಲ್ಯಾಣ, ಸಮಾಜ ಕಲ್ಯಾಣ, ಕುಟುಂಬ ಕಲ್ಯಾಣ ಎಂಬ ನುಡಿಗಳಲ್ಲಿ ಇದು ಸ್ಪಷ್ಟವಾಗಿದೆ. ಅಭಿವೃದ್ಧಿಯ ಮೇಲೆ ಮಹಿಳೆಯರಿಗೆ ಹಕ್ಕುದಾರಿಕೆಯಿದೆ ಎಂಬುದನ್ನು ಆರ್ಥಿಕ ನೀತಿ ಒಪ್ಪುವುದಿಲ್ಲ. ಎಂದು ನಿರ್ಮಿಲ್ ಬುಚ್[೧೬] ಹೇಳಿದ್ದಾರೆ. ಭಾರತದಲ್ಲಿ ಮಹಿಳೆಯರನ್ನು ಕೇವಲ ಸಮಾಜ ಕಲ್ಯಾಣ ಘಟಕವಾಗಿ ಪರಿಭಾವಿಸಿಕೊಳ್ಳಲಾಗಿದೆ. ವಿನಾ ಅಭಿವೃದ್ಧಿಯ ಘಟಕವಾಗಿಲ್ಲ. ಮಹಿಳೆಯರ ಬದುಕು-ದುಡಿಮೆ ಕುರಿತಂತೆ ಆರ್ಥಿಕ ಕಾರ್ಯಕ್ರಮಗಳು, ಯೋಜನೆಗಳು 'ಕಲ್ಯಾಣವಾದಿ' ನೆಲೆಯಿಂದ ಪ್ರಾರಂಭಿಸಿ, ಸಮಾನತೆ ನೆಲೆಯನ್ನು ಹಾದು ಇಂದು 'ಸಬಲೀಕರಣ'ದ ಹಂತಕ್ಕೆ ಬಂದು ನಿಂತಿವೆ. ಆದರೆ ಸ್ವಾತಂತ್ರ್ಯನಂತರ ಭಾರತದ ಅಭಿವೃದ್ಧಿ ಕಾರ್ಯಕ್ರಮಗಳ ಮೂಲದಲ್ಲಿದ್ದ ಮಹಿಳೆಯರನ್ನು ಕುರಿತ ದೋರಣೆಯು ಕಲ್ಯಾಣವಾದಿಯಾಗಿತ್ತು ಎಂಬುದು ಸ್ಪಷ್ಟ.

ಭಾರತದಲ್ಲಿ ಮಹಿಳೆಯರನ್ನು ಕುರಿತ ಅಭಿವೃದ್ಧಿ ಕಾರ್ಯಕ್ರಮಗಳು ಕಲ್ಯಾಣವಾದಿ ಧೋರಣೆ ತಳೆಯಲು ಒಂದು ಪ್ರಬಲವಾದ ಕಾರಣವಿತ್ತು. ಭಾರತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಮಧ್ಯಮವರ್ಗದ ಜನಸಮೂಹವನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿವೆ. ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರನ್ನು ಕುಟುಂಬದ ನೆಲೆಯಲ್ಲಿ ಕೇವಲ ಗೃಹಿಣಿಯಾಗಿ ಗೃಹಲಕ್ಷ್ಮಿಯಾಗಿ ಮಾತ್ರ ಪರಿಭಾವಿಸಿಕೊಂಡಿವೆ.

ಕಲ್ಯಾಣವಾದಿ ಧೋರಣೆಯನ್ನು ತಳೆಯಲು ಕಾರಣವಾದ ಇನ್ನೊಂದು ಮುಖ್ಯ ಕಾರಣವೆಂದರೇ ಅಂತಹ ಧೋರಣೆಯುಳ್ಳ ಕಾರ್ಯಕ್ರಮಗಳು ಮಾತ್ರ ಪುರುಷಶಾಹಿಯನ್ನು ಎದುರುಹಾಕಿಕೊಳ್ಳದೆ ಮಹಿಳೆಯರ ಅಭಿವೃದ್ಧಿ ಬಗ್ಗೆ ಮಾತನಾಡಬಹುದು. ಸಾಮಂತವಾದಿ ವ್ಯವಸ್ಥೆ ಪುರುಷಶಾಹಿ ವ್ಯವಸ್ಥೆಗಳು ಮಹಿಳೆಯರಿಗೆ ಉಂಟುಮಾಡಿರುವ ಹಾನಿಯನ್ನು ಸರ್ಕಾರದ ಪಾಲಸಿಗಳು ಗುರುತಿಸಿದಂತೆ ಕಾಣಲಿಲ್ಲ. 'ಸಾಮಂತವಾದಿ ಪುರುಷಶಾಹಿ' ಚೌಕಟ್ಟಿನಲ್ಲಿ ಮಹಿಳೆಯರು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಅದು ಕಲ್ಯಾಣಾವಾದಿ ಧೋರಣೆಯಿಂದ ಮಾತ್ರ ಸಾಧ್ಯ. ಈ ಕಾರಣದಿಂದಾಗಿಯೇ ಅಬಿವೃದ್ಧಿ ಕಾರ್ಯಕ್ರಮಗಳು ಭಾರತದಲ್ಲಿ ಮಹಿಳೆಯರ ದುಡಿಮೆಯ ಬಗ್ಗೆ, ಅವರ ನಿಯೋಗವಾದಿ ಪಾತ್ರದ ಬಗ್ಗೆ ಹೆಚ್ಚು ಆಸಕ್ತಿ ತೋರಲಿಲ್ಲ. ಏಕೆಂದರೇ ಮಹಿಳೆ 'ಅಧಿಕೃತ ನ್ಯಾಯಸಮ್ಮತ' ಲೆಜಿಟಿಮೇವ್ ಕಾರ್ಯಕ್ಷೇತ್ರ 'ಕುಟುಂಬ' ಎಂಬ ನಂಬಿಕೆ ಇಲ್ಲಿ ಕೆಲಸ ಮಾಡುತ್ತಿದೆ. ಆದರಿಂದಲೇ ಕುಟುಂಬ ಕಲ್ಯಾಣವನ್ನು ಘನ ಉದ್ದೇಶವನ್ನಾಗಿ ಮಾಡಿಕೊಂಡು ಮಹಿಳೆಯರ ಬದುಕನ್ನು ಉತ್ತಮಪಡಿಸುವ ಪ್ರಯತ್ನ ಭಾರತದಲ್ಲಿ ನಡೆಯುತ್ತಿದೆ.

ಮಹಿಳೆಯರಿಗೆ ಸಂಬಂದಿಸಿದಂತೆ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳು ಕಲ್ಯಾಣವಾದಿ ಧೋರಣೆ ತಳೆಯಲು ಇನ್ನೊಂದು ಪ್ರಬಲ ಕಾರಣವಿದೆ. ಅಭಿವೃದ್ಧಿ ಯೋಜನೆಗಳು ಭಾರತದಲ್ಲಿ ಸುಧಾರಣೆವಾದಿಯಾಗಿದ್ದವೆ ವಿನಾ ಸಂಘರ್ಷವಾದಿಯಾಗಿಲ್ಲ. ೧೯೫೦ರಲ್ಲಿ ವಿದ್ಯಾರ್ಥಿನಿಯರನ್ನು ಸಂಭೋಧಿಸುತ್ತಾ ನೆಹರೂರವರು 'ಮಹಿಳೆಯರ ಪ್ರಧಾನ ಜವಾಬ್ದಾರಿಯೆಂದರೇ ಕುಟುಂಬವನ್ನು ಸಮರ್ಥವಾಗಿ ಸಂಬಾಳಿಸಿಕೊಂಡು ಹೋಗುವುದು' ಎಂದು ಕರೆ ನೀಡಿದರು. ಇದೇ ಧೋರಣೆ ಸರ್ಕಾರವು ರೂಪಿಸಿದ್ದ ಮಹಿಳೆಯರನ್ನು ಕುರಿತ ಅಭಿವೃದ್ಧಿ ಕಾರ್ಯಕ್ರಮಗಳು ಮೂಲದಲ್ಲಿ ಇತ್ತು. ಭಾರತದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರನ್ನು ಅಭಿವೃದ್ದಿಯ ನಿಯೋಗಿಗಳೆಂದು ಒಪ್ಪುವುದು ಸಾಧ್ಯವಿರಲಿಲ್ಲ. ಅವರು 'ದುಡಿಮೆಗಾರರು' ಎಂಬುದು ಅವು ಒಪ್ಪಲು ಸಿದ್ದವಿರಲಿಲ್ಲ.

ಗ್ರಾಮೀಣ ಮಹಿಳಾಭಿವೃದ್ಧಿಯ ಬಗ್ಗೆ ವಿವೇಚಿಸುವಾಗ ನಾವು ಭಾರತೀಯ ಸಂಜಾತ, ನೊಬೆಲ್ ಪ್ರಸಸ್ತಿ ವಿಜೇತರಾದ ಆರ್ಥಿಕ ತಜ್ಞ "ಡಾ.ಅಮರ್ತ್ಯಸೇನ್" ವಿಚಾರವನ್ನು ಇಲ್ಲಿ ತಿಳಿಯುವುದು ಬಹು ಪ್ರಸ್ತುತ.

ಅಮರ್ತ್ಯಸೇನ್‌ರ ವಿಚಾರಗಳು

"ಅಮರ್ತ್ಯಸೇನ್ ಅವರುಗಳು ತಮ್ಮ ಒಂದು ಅಧ್ಯಯನದಲ್ಲಿ ಲಿಂಗ ಸಂಬಂಧಗಳಲ್ಲಿನ

ಅಸಮಾನತೆ ಮತ್ತು ಮಹಿಳೆಯರ ದುಃಸ್ಥಿತಿಯನ್ನು ಭಾರತದ ಬಹುಗಂಭೀರ ಸಾಮಾಜಿಕ ವೈಫಲ್ಯಗಳು' ಎಂದು ಕರೆದಿದ್ದಾರೆ."

ಮಹಿಳೆಯರು ತಮ್ಮನ್ನು ತಾವು ದಮನಿತರು, ಅಧೀನರು, ತಾವು ದುಡಿಮೆಗಾರರಲ್ಲ ತಾವು ಗಳಿಕೆದಾರರಲ್ಲ. ತಾವು ಅವಲಂಬಿತರು, ತನ್ನ ಕಾಣಿಕೆ ಕುಟುಂಬಕ್ಕೆ ಅಥವಾ ಆರ್ಥಿಕತೆಗೆ ಏನೇನೂ ಇಲ್ಲ ಎಂಬ ಪೂರ್ವಗ್ರಹ ನಂಬಿಕೆಯಿಂದ ನರಳುತ್ತಿದ್ದಾರೆ. ಹೀಗೆ ಮಹಿಳೆಯರು ತಮ್ಮನ್ನು ತಾವೇ ಏಕೆ ಹೀಗೆ ಭಾವಿಸಿಕೊಳ್ಳುತ್ತಾರೆ. ಇದಕ್ಕೆ ಅಮರ್ತ್ಯಸೇನ್‌ರವರು. ಮಹಿಳೆಯರಲ್ಲಿ ಅಂತರ್ಗತಗೊಂಡಿರುವ ತಮ್ಮ ಬಗೆಗಿನ ಒಂದು ರೀತಿಯ ಅಸಹಾಯಕ ಭಾವನೆ ಕುರಿತಂತೆ ಅಮರ್ತ್ಯಸೇನ್ ಎರಡು ಕಾರಣ ನೀಡುತ್ತಾರೆ.

೧. ತಮ್ಮ ಹಿತಾಸಕ್ತಿಗಳ ಬಗೆಗಿನ ಅರಿವು

೨. ಆರ್ಥಿಕತೆಗೆ, ಕುಟುಂಬಕ್ಕೆ ತಮ್ಮ ಕಾಣಿಕೆ ಕೊಡುಗೆ ಬಗ್ಗೆ ಅರಿವು.

"ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರಿಗೆ ಸ್ವಹಿತಾಶಕ್ತಿ ಎಂಬುದು ಇಲ್ಲವೆ ಇಲ್ಲ ಎನ್ನುವುದನ್ನು ಪರಹಿತಭಾವನೆ ಮನಸ್ಸಿನಲ್ಲಿ ಮಡುಗಟ್ಟಿಕೊಂಡು ಬಿಟ್ಟಿದೆ."[೧೬] ಮಹಿಳೆಯರಿಗೆ ಸ್ವಹಿತಾಸಕ್ತಿ ಬಗ್ಗೆ ಅರಿವು ಪ್ರಜ್ಞೆ ಇಲ್ಲದಿರುವುದರಿಂದ ಅವರ ಶೋಷಣೆ ಪುರುಷ ಸಮಾಜಕ್ಕೆ ಸುಲಭವಾಗಿದೆ.

ಕುಟುಂಬಕ್ಕೆ ಮತ್ತು ಆರ್ಥಿಕತೆಗೆ ತಮ್ಮ ಕಾಣಿಕೆ ಏನೂ ಇಲ್ಲ ಎಂದು ಮಹಿಳೆಯರು ಭಾವಿಸಿ ಕೊಂಡಿದ್ದಾರೆ. ತಮ್ಮನ್ನು ತಾವು 'ಅನುಪಯುಕ್ತರು' ಎಂದು ಭಾವಿಸಿಕೊಂಡಿದ್ದಾರೆ. ಇಂತಹ ಭಾವನೆಯಲ್ಲಿ ಮುಳುಗಿರುವ ಮಹಿಳೆಯರನ್ನು ಶೋಷಿಸಿಸುವುದು ಸಮಾಜಕ್ಕೆ ಪುರುಷಶಾಹಿಗೆ ಸುಲಭವಾಗಿ ಬಿಡುತ್ತದೆ.

ಸ್ವಹಿತಾಶಕ್ತಿ ಅರಿವು ಮಹಿಳೆಯರಲ್ಲಿ ಇಲ್ಲದಿರುವುದು ಮತ್ತು ಸಮಾಜಕ್ಕೆ ತಮ್ಮ ಕಾಣಿಕೆ ಏನೇನೂ ಇಲ್ಲ ಎಂದು ಭಾವಿಸಿರುವುದೇ ಮಹಿಳೆಯರ ಅಧೀನ ಸ್ಥಿತಿಗೆ, ಕೀಳು ಸ್ಥಾನಮಾನಕ್ಕೆ, ಕಾರಣವಾಗಿವೆ. "ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರು ಸ್ವಹಿತಾಶಕ್ತಿಗಿಂತ ಪರರ ಹಿತಾಶಕ್ತಿಗಾಗಿ ಬದುಕುವುದು ಸಾಮಾನ್ಯ. ಹೀಗೆ ಬದುಕುವುದು ಆದರ್ಶ ಹೆಣ್ಣಿನ ತಾಯಿಯರ ಲಕ್ಷ ಎನ್ನಲಾಗಿದೆ."[೧೭] ಮಹಿಳೆಯರಿಗೆ ಸಂಬಂಧಿಸಿದಂತೆ "ನಾವು ಎಂಬ ಗುಣವಿದೆಯೇ ವಿನಾ 'ನಾನು' ಎಂಬ ಗುಣ ಅಲ್ಲಿಲ್ಲ.

ಮಹಿಳೆಯರು ತಮ್ಮ ಬಗ್ಗೆ ಅನಾಶಕ್ತಿ ಧೋರಣೆಯನ್ನು ತಳೆಯುವುದಕ್ಕೆ ಅನೇಕ ಕಾರಣಗಳಿವೆ. "ಮಹಿಳೆಯರು ಹಾಗೆ ಯೋಚಿಸುವಂತೆ ಮಾಡುವ ಸಾಮಾಜೀಕರಣ ಪ್ರಕ್ರಿಯೆಯು ಕುಟುಂಬ ಜಾಗೃತವಾಗಿರುತ್ತದೆ. ಹೆಣ್ಣುಮಗುವೊಂದು ತಾಯಿಯಾಗಿ ರೂಪುಗೊಳ್ಳಲು ಅಗತ್ಯವಾದ ಸಾಮಾಜೀಕರಣ ಪ್ರಕ್ರಿಯೆಯನ್ನು ಸಮಾಜಕ್ಕೆ ರೂಪಿಸಿಬಿಟ್ಟಿರುತ್ತದೆ". ಈ ಬಗೆಯ ಭಾವನೆಯಿಂದಾಗಿ ಸಂಘರ್ಷದ ಹಾದಿಯನ್ನು" ಅವರು ಆಯ್ಕೆ ಮಾಡಿಕೊಳ್ಳುವುದಿಲ್ಲ. ಇದನ್ನು ಅಮರ್ತ್ಯಸೇನ್ 'ಸಹಕಾರಿವಾದಿ ಸಂಘರ್ಷ ಎಂದು ಕರೆದಿದ್ದಾರೆ.

ಬುಡಕಟು ಮಹಿಳಾ ಸ್ವಸಹಾಯ ಸಂಘಗಳಲ್ಲಿನ ವೈಫಲ್ಯಗಳು

ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳ ಮಹತ್ತರವಾದ ಆರ್ಥಿಕ ಬದಲಾವಣೆಯನ್ನು ಹೊಂದುತ್ತಿವೆ. ಆದರೂ ಕೂಡ ಪ್ರಸ್ತುತದಲ್ಲಿ ಆ ಸಂಘಗಳು ಕೆಲವು ಸಮಸ್ಯೆಗಳಿಂದ ಅಥವಾ ದ್ವಂದ್ವತೆಯಿಂದ ಕೂಡಿದ್ದು, ಅವುಗಳು ಸಮಸ್ಯೆಯಿಂದ ಹೊರಬಂದು ಉತ್ತಮವಾಗಿ ಕೆಲಸನಿರ್ವಹಿಸಲು ಹರಸಾಹಸಪಡಬೇಕಾಗಿರುವ ಸ್ಥಿತಿ ನಿರ್ಮಾಣವಾಗಿದೆ. ಅಂತಹ ಸಮಸ್ಯೆಗಳೆಂದರೆ..

೧. ಮಹಿಳಾ ಸದಸ್ಯರ ಸಂಖ್ಯೆಯ ಕೊರತೆ

ಕರ್ನಾಟಕದಲ್ಲಿ ವಿವಿಧ ಜಿಲ್ಲೆಗಳಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಖಾತೆಯನ್ನು ಹೊಂದಿದ್ದ ಸ್ವಸಹಾಯ ಸಂಘಗಳು ೨೦೦೫ರ ಜನಗಣತಿ ಕರ್ನಾಟಕದ ಆಧಾರದ ಪ್ರಕಾರ ೬೨,೪೯೮ ಸಂಘಗಳನ್ನು ಹೊಂದಿದ್ದು, ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳು ಒಂದು ಸಾವಿರಕ್ಕೂ ಹೆಚ್ಚು ಸಂಘಗಳನ್ನು ಹೊಂದಿವೆ. ಇಂತಹ ಸಂಘಗಳಿಗೆ ಪ್ರಾರಂಭದಿಂದಲೂ ಮಹಿಳೆಯರನ್ನು ಮನೆಯಿಂದ ಹೊರಕ್ಕೆ ಕರೆತರುವುದು ಕೂಡ ಕಷ್ಟವಾಗಿತ್ತು. ಕೌಟುಂಬಿಕ ಸಮಸ್ಯೆಗಳು, ಮನೆಯವರ ವಿರೋಧ, ಮಹಿಳೆಯರ ಕಾರ್ಯಕ್ಷಮತೆ, ಬುದ್ಧಿವಂತಿಕೆ ಬಗ್ಗೆ ವಿಶೇಷವಾಗಿ ಹಣ ಲೆಕ್ಕಪತ್ರಗಳ ಬಗ್ಗೆ ತಿಳುವಳಿಕೆಯಿರುವುದಿಲ್ಲವೆಂಬ ತಪ್ಪು ಲೆಕ್ಕಾಚಾರದಿಂದ ಮಹಿಳೆಯರಲ್ಲಿ ಕೀಳರಿಮೆ ಉಂಟಾಗುತ್ತಿತ್ತು. ಇನ್ನು ಹತ್ತು ಹಲವು ಸಮಸ್ಯೆಗಳಿಂದ ಸ್ವಸಹಾಯ ಸಂಘಗಳಲ್ಲಿ ಸದಸ್ಯರ ಕೊರತೆ ಕಾಣುತ್ತಿದೆ.

೨. ತರಬೇತಿ ಕಾರ್ಯಕ್ರಮಗಳಲ್ಲಿ ಮಹಿಳೆಯರು ಸರಿಯಾಗಿ ಪಾಲ್ಗೊಳ್ಳದಿರುವುದು

ಆ ಜಿಲ್ಲೆಯ ಮತ್ತು ತಾಲೂಕಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನಿರ್ದೇಶನಾಲಯ ಏರ್ಪಡಿಸಿದಂತಹ ತರಬೇತಿ ಕಾರ್ಯಗಳಿಗೆ ಸರಿಯಾಗಿ ಪಾಲ್ಗೊಳ್ಳದಿರುವುದು ಇಂತಹ ದಿವ್ಯನಿರ್ಲಕ್ಷ್ಯದಿಂದ ಅವರಿಗೆ ಮಾಹಿತಿ, ತಾಂತ್ರಿಕ ಕ್ರಮ ಮುಂತಾದ ವಿಷಯಗಳು ತಿಳಿಯದೆ ಕರ್ತವ್ಯ ಪ್ರಜ್ಞೆ ಉಂಟಾಗುವುದಿಲ್ಲ. ಕೆಲವೊಮ್ಮೆ ಇಂತ ತರಬೇತಿ ಕಾರ್ಯಕ್ರಮಗಳು ಮಹಿಳೆಯರಿಗೆ ಸಹಾಯಕವಾದ ವಿಷಯಗಳನ್ನು ತಿಳಿಸಿಕೊಡದೆ ಇರುವುದು ಕೂಡ ಒಂದು ಕಾರಣವಾಗಿದೆ.

೩. ಚಾಲ್ತಿ ಬಂಡವಾಳದ ಕೊರತೆ

ಬಹುಪಾಲು ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಚಾಲ್ತಿಬಂಡವಾಳ ಕೊರತೆಕಂಡು ಬರುತ್ತದೆ. ಸದಸ್ಯೆಯರು ಪಡೆದ ಸಾಲ ಮತ್ತು ಬಡ್ಡಿಯ ಹಣವನ್ನು ಹಿಂದಿರಿಗಿಸದಿದ್ದರೆ, ಷೇರು ಹಣವನ್ನು ಸಂದಾಯಮಾಡದಿದ್ದರೆ ಈ ಸಮಸ್ಯೆ ಎದುರಾಗುತ್ತದೆ. ವರಮಾನ ಕಡಿಮೆಯಾದರೆ ಹೆಚ್ಚು ಮೊಬಲಗನ್ನು ಬಂಡವಾಳದಲ್ಲಿ ತೊಡಗಿಸಲು ಸಾಧ್ಯವಿಲ್ಲ. ಹೀಗಾಗಿ ಹಣಕಾಸು ನೀಡುವ ಸಂಸ್ಥೆಗಳು ಮತ್ತು ಬ್ಯಾಂಕುಗಳು ಇಂಥ ಮಹಿಳಾ ಸ್ವಸಹಾಯ ಸಂಘಗಳ ಬಗ್ಗೆ ಆಸಕ್ತಿ ತೋರುವುದಿಲ್ಲ. ಕೊನೆಗೊಮ್ಮೆ ವಹಿವಾಟು ನಿಂತುಹೋಗಿ ಸಂಘದ ಚಟುವಟಿಕೆಗಳು ಸ್ಥಗಿತವಾಗುತ್ತವೆ.

೪. ಉತ್ತಮ ಮುಖಂಡತ್ವದ ಕೊರತೆ

ಸ್ವಸಹಾಯ ಸಂಘಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ನಿವಾರಣೆ ಮಾಡಲು ಮತ್ತು ದಕ್ಷವಾದ ಮತ್ತು ಜವಾಬ್ದಾರಿಯುತವಾದ ಕೆಲಸಗಳನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗಲು ಮತ್ತು ಸಿಗುವಂತಹ ಸವಲತ್ತುಗಳನ್ನು ಮುಂಚೂಣಿಯಲ್ಲಿ ನಿಂತು ಹೋರಾಡಿ ಪಡೆಯುವಂತ ಸಾಮಾರ್ಥ್ಯವನ್ನು ಹೊಂದಿರುವಂತಹ ಮುಖಂಡತ್ವದ ಕೊರತೆಯು ಮಹಿಳಾ ಸ್ವಸಹಾಯ ಸಂಘಗಳಲ್ಲಿ ಕಂಡುಬಂದಿದೆ.

೫. ಕೈಗಾರಿಕೋತ್ಪನ್ನ ಮಹಿಳಾ ಸ್ವಸಹಾಯ ಸಂಘಗಳಿಗೆ ಹೆಚ್ಚಿನ ಆದ್ಯತೆ ನೀಡುವುದು

ಪ್ರಸ್ತುತದಲ್ಲಿ ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳು ಇವು ಯಾವುದೇ ರೀತಿಯಾದಂತ ಕೈಗಾರಿಕೋತ್ಪನ್ನಗಳನ್ನು ಉತ್ಪಾದಿಸುವ ಹಂತಕ್ಕೆ ತಲುಪಿರುವುದು ಕೇವಲ ಕಡಿಮೆ ಪ್ರಮಾಣದಲ್ಲಿ ಮಾತ್ರ. ಅಂತಹ ಸ್ವಸಹಾಯ ಸಂಘಗಳಿಗೆ ಮಾತ್ರ ಸಂಸ್ಥೆಗಳು ಮತ್ತು ಬ್ಯಾಂಕುಗಳು ಸಾಲ ಸೌಲಭ್ಯವನ್ನು ನೀಡುತ್ತವೆ. ಇನ್ನೂಳಿದ ಸಂಘಗಳಿಗೆ ಸಾಲ ಸೌಲಭ್ಯವನ್ನು ನೀಡುವುದು ಬಹಳ ಕಡಿಮೆ. ಆದರಿಂದ ಈ ಸ್ವಸಹಾಯ ಸಂಘಗಳಲ್ಲಿ ಈ ರೀತಿಯಾದ ತಾರತಮ್ಯ ಮನೋಭಾವನೆಯುಂಟಾಗಿ ಸಂಘಗಳು ನಾಶವಾಗುವ ಹಂತವನ್ನು ತಲುಪಿವೆ.

೬. ರಾಜಕೀಯ ವ್ಯವಸ್ಥೆ ಮಧ್ಯೆಪ್ರವೇಶ

ಈ ಸ್ವ ಸಹಾಯ ಸಂಘಗಳು ಸಹಕಾರ ತತ್ವವಾದ 'ತಾನು ಎಲ್ಲರಿಗೆ ಎಲ್ಲರು ತನಗಾಗಿ' ಎನ್ನುವ ತತ್ವದ ಆಧಾರದ ಮೇಲೆ ರಚನೆಯಾಗಿ ತಮ್ಮ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗುವ ಸಮಯದಲ್ಲಿ, "ಗೆದ್ದಲು ಕಟ್ಟಿದ ಹುತ್ತಕ್ಕೆ ಹಾವು ಬಂದು ಸೇರುವಂತೆ ನಂಬಿಕೆ", ಸೇವಾ ಮನೋಭಾವನೆಯಿಂದ ಸಂಘವನ್ನು ಕಟ್ಟಿ ಅದು ಪ್ರೌಢಾವಸ್ಥೆಗೆ ಬಂದು ಅದು ಹಲವರಿಗೆ ನೆರಳು ಕೊಡುವ ಸಮಯದಲ್ಲಿ ರಾಜಕೀಯ ವ್ಯಕ್ತಿಗಳ ಮಧ್ಯಪ್ರವೇಶಿಕೆಯಿಂದಾಗಿ ಸಂಘದ ಸದಸ್ಯರಲ್ಲಿ ಅವರಲ್ಲಿ ವಿಭಿನ್ನ ಅಭಿಪ್ರಾಯ ಬೆಳೆಯುವಂತೆ ಮಾಡಿ ಆ ಸಂಘದ ಅವನತಿಗೆ ಕಾರಣರಾಗುತ್ತಾರೆ. ಪ್ರಸ್ತುತದಲ್ಲಿ ಸ್ವಸಹಾಯ ಸಂಘಗಳು ಕೆಲವು ಅನಾನುಕೂಲತೆಗಳನ್ನು ಹೊಂದಿದ್ದರು ಕೂಡ ಅವು ಮುಂದುವರೆಯಬೇಕಾದರೆ ಹಲವಾರು ಕ್ರಮಗಳನ್ನು ಕೈಗೊಳ್ಳುವುದು ಸೂಕ್ತ. ಆ ಕ್ರಮಗಳೆಂದರೇ...

೧. ಸ್ವಸಹಾಯ ಸಂಘಗಳಿಗೆ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗೆ ತಕ್ಕಂತೆ ಹಣಕಾಸಿನ ನೆರವನ್ನು ನೀಡಬೇಕು.

೨. ಸ್ವಸಹಾಯ ಸಂಘದ ಸದಸ್ಯರಲ್ಲಿ ಸಾಮೂಹಿಕ ಬೇಸಾಯ ಪದ್ಧತಿಯನ್ನು ಜಾರಿಗೆ ತಂದು ಆ ಬೇಸಾಯ ಪದ್ಧತಿಗೆ ಬೇಕಾದ ಸಲಕರಣೆಗಳು ಮತ್ತು ಹಣಕಾಸಿನ ವ್ಯವಸ್ಥೆಯನ್ನು ಸರ್ಕಾರ ಸಹಾಯ ಮಾಡುವುದು.

೩. ಸಂಘದ ವತಿಯಿಂದ ಸರ್ಕಾರ ಬಲಹೀನ ವರ್ಗದವರಿಗೆ ಮತ್ತು ವಸತಿಹೀನರಿಗೆ ಅನುಕೂಲ ಮಾಡಿಕೊಡುವುದು.

೪. ಉಳಿತಾಯ ಮನೋಭಾವನೆ ಬಗ್ಗೆ ಪ್ರೇರಣೆ ನೀಡುವುದು.

೫. ಸಂಘದ ಸದಸ್ಯರಿಗೆ ಸೂಕ್ತಮಾರ್ಗದರ್ಶನ ಮತ್ತು ತರಬೇತಿ ನೀಡುವುದು.

ದೇಶದಲ್ಲಿ ಆರ್ಥಿಕ ಸ್ವಾವಲಂಬಿಗಳಾಗಿ, ಮಹಿಳೆಯರು ಸಂಘಟಿತರಾಗಿ, ಗ್ರಾಮೀಣಾಭಿವೃದ್ಧಿಯನ್ನು ಸಾಧಿಸಬೇಕಾದರೆ ಸ್ವಸಹಾಯ ಸಂಘಗಳ ಪಾತ್ರ ಹಿರಿದಾಗಿದೆ. ಗ್ರಾಮೀಣ ಅಭಿವೃದ್ಧಿ ಕನಸನ್ನು ನನಸಾಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಸ್ವಸಹಾಯ ಸಂಘಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರ ಇನ್ನೂ ಹಲವಾರು ಉಪಯುಕ್ತ ಯೋಜನೆಗಳನ್ನು ರೂಪಿಸಬೇಕು. ಆಗ ಮಾತ್ರ ಗ್ರಾಮೀಣ ಪ್ರದೇಶದ ಕಡು ಬಡವರ, ದೀನ ದಲಿತರ ಮತ್ತು ಬುಡಕಟ್ಟು ಸಮುದಾಯಗಳ ಅಭ್ಯುದಯ ಸಾಧ್ಯ.

ಟಿಪ್ಪಣಿಗಳು

೧. ಟಿ.ಆರ್.ಚಂದ್ರಶೇಖರ್, ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪುಟ.೧೬೩.

೨. ಟಿ.ಆರ್.ಚಂದ್ರಶೇಖರ್, ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪುಟ.೧೪೦.

೩. ಅದೇ ಪುಟ ಸಂಖ್ಯೆ. ೧೫೧.

೪. ಅದೇ ಪುಟ ಸಂಖ್ಯೆ ೧೩೮.

೫. ಅದೇ ಪುಟ ಸಂಖ್ಯೆ ೮೫.

೬. ಅದೇ ಪುಟ ಸಂಖ್ಯೆ ೧೯೨.

೭. ಅದೇ ಪುಟ ಸಂಖ್ಯೆ ೧೯೮.

೮. ಅದೇ ಪುಟ ಸಂಖ್ಯೆ ೧೯೮.

೯. ಕೆ.ಶಿವಚಿತ್ತಪ್ಪ. ೨೦೦೬, ಮಹಿಳಾ ಸಬಲೀಕರಣ ವಿಭಿನ್ನ ನೆಲೆಗಳು, ಪುಟ ಸಂಖ್ಯೆ. ೬೪.

೧೦. ಅದೇ ಪುಟ ಸಂಖ್ಯೆ ೮೫

೧೧. ಅದೇ ಪುಟ ಸಂಖ್ಯೆ ೭೮

೧೨. ಅದೇ ಪುಟ ಸಂಖ್ಯೆ ೮೧

೧೩. ಯೋಜನಾ ಮಾಸ ಪತ್ರಿಕೆ ಜನವರಿ ೨೦೦೮ ಪುಟ.೪೭

೧೪. ಅದೇ ಪುಟ ಸಂಖ್ಯೆ ೪೭.

೧೫. ಅದೇ ಪುಟ ಸಂಖ್ಯೆ ೪೭.

೧೬. State welfare policy and women, 1950-1975 (1998).

೧೭. ಟಿ.ಆರ್.ಚಂದ್ರಶೇಖರ್, ೨೦೦೧, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪುಟ ಸಂಖ್ಯೆ.೩೨.

೧೮. ಅದೇ ಪುಟ ಸಂಖ್ಯೆ ೩೨.

೧೯. ಅದೇ ಪುಟ ಸಂಖ್ಯೆ ೩೨.

ಅಧ್ಯಾಯ ೫

ಸಮಾರೋಪ

ಅಧ್ಯಾಯ ೫

ಸಮಾರೋಪ

ಮಹಿಳೆ ಶೋಷಿತೆ, ಅಬಲೆ, ಬಾಲ್ಯದಲ್ಲಿ ತಂದೆ ತಾಯಿ ರಕ್ಷೆ, ಯೌವನದಲ್ಲಿ ಗಂಡನರಕ್ಷೆ, ಮುಪ್ಪಿನಲ್ಲಿ ಮಗನರಕ್ಷೆ, ಎಂಬ ಮನುವಾದವನ್ನು ನಂಬಿ ಪರವಾಲಂಬಿ ಜೀವನವನ್ನು ನಡೆಸುವ ಮಹಿಳೆಯರು ಹಲವಾರು ತೊಟ್ಟಿಲು ತೂಗುವ ಕೈಗಳು ದೇಶವನ್ನು ಆಳಬಲ್ಲದು ಎಂಬ ಕೆಚ್ಚೆದೆಯ ಮಹಿಳೆಯರು ಆಗಬೇಕಿದೆ. ಮಹಿಳೆಯರ ಸಶಕ್ತೀಕರಣ ಆಗಬೇಕಾಗಿದೆ. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ೫೦ರಷ್ಟು ಮಹಿಳೆಯರಿದ್ದಾರೆ ಅವರು ತಮ್ಮ ಹಿತಾಶಕ್ತಿಗಳ ಈಡೇರಿಕೆಗಾಗಿ ಮುಖ್ಯವಾಹಿನಿಗೆ ತಲುಪಬೇಕಾದರೆ ಪ್ರಸ್ತುತದಲ್ಲಿ ಸಂಘಸಂಸ್ಥೆಗಳ ಸಹಾಯದಿಂದ ಹೋರಾಟಕ್ಕೆ ದುಮುಕಬೇಕಾದ ಪರಿಸ್ಥಿತಿ ಬಂದಿದೆ.

ವೇದಗಳ ಕಾಲದಲ್ಲಿ ಮಹಿಳೆ ಅತ್ಯಂತ ಶ್ರೇಷ್ಠಮಟ್ಟದಲ್ಲಿ ಉನ್ನತ ಸ್ಥಿತಿಯಲ್ಲಿ ಇದ್ದಳು. ಮಹಿಳೆಯರು ವಿದ್ಯಾವತಿಯರಾಗಿರುತ್ತಿದ್ದರು. ಪ್ರಜ್ಞರಾಗಿದ್ದರು. ಮಂತ್ರದೃಷ್ಟಾರರಾಗಿದ್ದರು. ರಾಜ್ಯವನ್ನು ಆಳುವ ಯುದ್ಧ ಭೂಮಿಯಲ್ಲಿ ಕತ್ತಿ ಹಿಡಿದು ಝಳಪಿಸುವ, ಕ್ಷಾತ್ರ ಕನ್ಯೆಯರಾಗಿದ್ದರು. ಆದರ್ಶಗೃಹಣಿಯು ಆಗಿದ್ದರು. ಆದರೆ ಮಧ್ಯಕಾಲದಲ್ಲಿ ಹಿಂದೂಧರ್ಮದ ಅಡಿಯಲ್ಲಿ ಹೆಣ್ಣಿನ ಶೀಲರಕ್ಷಣೆಗಾಗಿ ಸಮಾಜದಲ್ಲಿ ಬಹಳ ಮಟ್ಟಿಗೆ ಪರಿವರ್ತನೆಗಳಾದವು. ತಂದೆ ತಾಯಿಯವರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಬದಲು ಇನ್ನೊಬ್ಬ ಗಂಡಿಗೆ ಅವಳನ್ನು ಒಪ್ಪಿಸಿಬಿಟ್ಟರೆ ತಮ್ಮ ಜವಾಬ್ದಾರಿ ತಪ್ಪಿತ್ತೆಂಬ ಭಾವನೆಯಿಂದಾಗಿ ಬಾಲ್ಯವಿವಾಹದ ಪದ್ಧತಿಯನ್ನು ಜಾರಿಗೆ ತಂದರು. ಈ ಕಾರಣದಿಂದಾಗಿಯೇ ಅವಳು ದುಡಿಯುವ ತೊತ್ತು, ಪಡೆಯುವ ಯಂತ್ರ ಎಂಬಂತೆ, ದುರ್ಬಲಳಾದಳು.

ದಿನಕಳೆದಂತೆ ಎಂತಹ ಪರಿಸ್ಥಿತಿ ಅವಳದಾಯಿತೆಂದರೆ ಇದೇ ತನ್ನ ಸಹಜ ಸ್ಥಿತಿ. ಕೈಹಿಡಿದ ಗಂಡನ ಮತ್ತು ಮಕ್ಕಳ ಹಾಗೂ ಅವನ ಕುಟುಂಬದ ರಕ್ಷಣೆ ತನ್ನದು. ತನ್ನ ಬಾಳು ಅವಳಿಗಾಗಿಯೇ ಮೀಸಲಿಡಬೇಕು. ಇಲ್ಲದಿದ್ದರೆ ನಾನು ತಪ್ಪಿತಸ್ಥಳು. ಶಿಕ್ಷೆಗೆ ಗುರಿಯಾಗಬೇಕಾದವಳು. ಅವಳಲ್ಲಿ, ಗಂಡಸತ್ತರೆ ತಾನು ಆತನೊಂದಿಗೆ ಸಹಗಮನ ಮಾಡಿ ಆಯಸ್ಸನ್ನು ಮುಗಿಸಬೇಕು. ಹಾಗಿಲ್ಲದಿದ್ದರೆ ಹಿಂದಿನವರು ಹೇಳಿದ ಸಂಯಮ ಪದ್ಧತಿಯನ್ನು ಅನುಸರಿಸಿ ಬಾಳನ್ನು ಸವೆಸಬೇಕು ಎಂಬ ನಿರ್ಧಾರ ಅವಳದು.

ಕಾಲ ಚಕ್ರ ಉರುಳಿದಂತೆ ರಾಜರಾಮ್‌ಮೋಹನರಾಯ್ ಮತ್ತು ಇತರ ಸಮಾಜ ಸುಧಾರಕರ ಪ್ರಯತ್ನದಿಂದಾಗಿ ಈ ದುಷ್ಟ ಅನಿಷ್ಟ ಪದ್ದತಿಗಳು ಕಡಿಮೆಯಾಗುತ್ತಾ ಬಂದು ತಾನು ಮನುಷ್ಯಳು,

ತನಗೂ ವ್ಯಕ್ತಿತ್ವ ಇದೆ ಎಂಬ ಭಾವನೆ ಬಂತು. ಏನೇ ಆದರು ಪುರುಷಪ್ರಧಾನವಾದ ಈ ಸಮಾಜದಲ್ಲಿ ಹೆಣ್ಣು ಶೋಷಿತಳೇ. ಇದು ಕೇವಲ ನಮ್ಮ ದೇಶಕ್ಕೆ ಮಾತ್ರ ಅನ್ವಹಿಸುತ್ತದೆಂದು ಅಲ್ಲ ವಿದ್ಯೆಯಲ್ಲಿ ಬುದ್ಧಿಯಲ್ಲಿ ಶಕ್ತಿಯಲ್ಲಿ, ಚಾಣಕ್ಷತೆಯಲ್ಲಿ ಎಲ್ಲದರಲ್ಲೂ ಜಾಣೆ. ಆದರೂ ಅವಳ ಸ್ಥಾನ ಅಷ್ಟಕ್ಕಷ್ಟೆ. ಅಷ್ಟೇ ಏಕೆ ಘನಸರ್ಕಾರದಲ್ಲಿ ಹೆಣ್ಣಿನ ಮೀಸಲಾತಿ ಬಗ್ಗೆ ಸಾಕಷ್ಟು ಹೊರಜಗತ್ತಿನಲ್ಲಿ ಹೇಳಿದರು ಸಹ ಆಗುತ್ತಿರುವುದೇನು?

ಆದರೆ ಇಷ್ಟೆಲ್ಲಾ ಸಾಮರ್ಥ್ಯ ಅಡೆತಡೆಗಳು, ತೊಂದರೆಗಳು ಇದ್ದರೂ ಸಹ ತಾನು ಬದಕಬೇಕು ತನ್ನ ಕಾಲಮೇಲೆ ನಾನು ನಿಂತಿಕೊಳ್ಳಬೇಕು ಎನ್ನುವ ಅರ್ಹತೆಯನ್ನು ಪಡೆಯಬೇಕು ಎಂಬ ಹೆಬ್ಬಯಕೆ ಅವಳಿಗಿದೆ. ಆ ಸಾಮಾರ್ಥ್ಯ ಶಕ್ತಿ ಅವಳಲ್ಲಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ದೈವ ದೃಷ್ಟಿಯಲ್ಲಿ ಹೆಣ್ಣು ಗಂಡುಗಳೆರಡೂ ಒಂದಕ್ಕೊಂದು ಪೂರಕ. ಹೆಣ್ಣಿಲ್ಲದೆ ಸೃಷ್ಟಿಯೇ ಇಲ್ಲವಲ್ಲ. ಹಾಗಿದ್ದರು ಸಹ ಹೆಣ್ಣನ್ನು ಕೀಳರಿಮೆಯಿಂದ ಕಾಣುವುದೇ ಎಲ್ಲರ ಅಭ್ಯಾಸವಾಗಿದೆ. ಅಷ್ಟೆ ಏಕೆ, ಹೆಣ್ಣು ಮಗುವಾಯಿತ್ತೆಂದು ತಿಳಿದರೆ ಭ್ರೂಣ ಹತ್ಯೆ ಎಷ್ಟೋ! ಹೆಣ್ಣು ಹುಟ್ಟಿತೆಂದರೆ 'ಅಯ್ಯೋ ಹೆಣ್ಣೆ?' ಎಂಬ ಗಂಡಸಿಗಿಂತ ಮಗುವಿನ ತಾಯಿಯೇ ಹಲುಬುವುದನ್ನು ಕಾಣುತ್ತೇವೆ.

ಅದೇನೇ 'ಸಹಕಾರ ಜ್ಯೋತಿ' ಇರಲಿ ಇಂದು ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅವಳು ವಿದ್ಯಾವಂತೆ ಆಗಲಿ ಅಥವಾ ವಿದ್ಯೆಯ ಗಂಧವಿಲ್ಲದ ಹಳ್ಳಿಯವರಾಗಲಿ, ತಾನು ದುಡಿದು ಗಳಿಸಬೇಕು, ತನ್ನ ಮನೆಗೆ ಸಹಾಯ ಮಾಡಬೇಕು. ತನ್ನ ಮಕ್ಕಳ ಶ್ರೇಯಸ್ಸಿಗಾಗಿ ಏನೆಲ್ಲಾ ಮಾಡಬೇಕು ಎಂಬ ಮನಸ್ಸು ಅವಳದಾಗಿದೆ. ಆದರೆ ಅದಕ್ಕೆ ಮಾರ್ಗ ಏನು ಎಂದು ಚಿಂತಿಸುತ್ತಾ ಕೂತಾಗ, ಬಯಸಿದ ಬಳ್ಳಿ ಕಾಲಿಗೆ ಸಿಕ್ಕಂತೆ 'ಸ್ವಸಹಾಯ ಸಂಘಗಳು' ಎಂಬ ಜ್ಯೋತಿ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರಿಗೆ ಬೆಳಗಿದಂತಾಯಿತು.

ಕೇವಲ ೧೦-೧೫ ವರ್ಷಗಳ ಹಿಂದೆಯೇ ಪ್ರಾರಂಭವಾದ ಈ ಸ್ವಸಹಾಯ ಸಂಘಗಳು ಹೆಮ್ಮರವಾಗಿ ಬೆಳೆದು ಅನೇಕ ಸ್ವಸಹಾಯ ಸಂಘಗಳು ಯೋಜನೆಯ ರೂಪದಲ್ಲಿ ಮಹಿಳೆಯರಿಗೆ ಮತ್ತು ಬುಡಕಟ್ಟು ಮಹಿಳೆಯರಿಗೆ ಆಸರೆಯಾಗಿ ನಿಂತು ಎಷ್ಟೋ ಮಹಿಳೆಯರು ಅದರ ಸೌಲಭ್ಯಪಡೆಯುವಂತಾಗಿದ್ದಾರೆ. ಆದರೆ ಪುರುಷ ಪ್ರಧಾನವಾದ ಸಮಾಜ, ಈ ಹೆಣ್ಣುಮಕ್ಕಳಿಗೆ ಅದರಿಂದ ಸಿಗುವ ಅನುಕೂಲವಾದರು ಎಷ್ಟು ಎಂಬುದನ್ನು ಮನವರಿಕೆ ಮಾಡಿಕೊಂಡು ಮಹಿಳೆಗೆ ಸಹಕಾರ ನೀಡುವುದು ಅತಿಮುಖ್ಯವಾಗಿದೆ.

ಮಹಿಳೆಯರ ನೋವನ್ನು ಅರಿತು ಅದರ ಪ್ರಗತಿಗಾಗಿಯೇ ಮಹಿಳಾ ಸ್ವಸಹಾಯ ಸಂಘಗಳನ್ನು ಜಾರಿಗೆ ತರಲಾಯಿತು. ಈ ಸ್ವಸಹಾಯ ಸಂಘಗಳ ತತ್ವದ ಅಡಿಯಲ್ಲಿ ಪ್ರಾರಂಭವಾದ ಉಳಿತಾಯ, ಸ್ವಾವಲಂಬನೆ, ಇಂತಹ ಕಲ್ಪವೃಕ್ಷ, ಕಾಮದೇನು ಯಾರಿಗೆ ತಾನೇ ಬೇಡ. ನಿಜಕ್ಕೂ ನಿಮ್ನವರ್ಗ, ದುರ್ಬಲ ವರ್ಗದವರ, ಶೋಷಿತವರ್ಗದ ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರು ಮತ್ತು

ಬುಡಕಟ್ಟು ಮಹಿಳೆಯರಿಗೆ ಮಹತ್ತರವಾದ ಕೊಡುಗೆ. ಈ ಸ್ವಸಹಾಯ ಸಂಘಗಳ ಮುಖಾಂತರ ಸಾಲವನ್ನು ಪಡೆದು ಸಣ್ಣಪುಟ್ಟ ವ್ಯಾಪಾರ ವ್ಯವಹಾರಗಳನ್ನು ಕೈಗೊಂಡು ಪಡೆದ ಸಾಲವನ್ನು ಕಂತುಗಳಲ್ಲಿ ತೀರಾ ಸಣ್ಣಬಡ್ಡಿಯೊಂದಿಗೆ ತೀರಿಸುವುದರ ಮೂಲಕ ಋಣಮುಕ್ತರು ಆಗಬಹುದು. ಬದುಕುವ ಮಾರ್ಗ ತಿಳಿದು ತಮ್ಮ ಕಾಲ ಮೇಲೆ ತಾವು ನಿಲ್ಲಲು ಸಹಾಯಕವಾಯಿತು.

ಬುಡಕಟ್ಟು ಮಹಿಳೆಯರು ಮತ್ತು ಶೋಷಿತ ವರ್ಗದ ಹೆಣ್ಣುಮಕ್ಕಳಿಗೆ ಕಾಯಕವೇ ಕೈಲಾಸ ಗಂಡ ಗಾರೆ ಕೆಲಸವೋ, ಕೂಲಿಕೆಲಸ ಮಾಡಿ ತಂದದ್ದು ಅವನ ದುಶ್ಚಟಗಳಿಗೇ ಸಾಲದು, ಇನ್ನೂ ಹೆಂಡತಿಮಕ್ಕಳನ್ನು ಸಾಕುವುದು ಎಲ್ಲಿಂದ ಬಂತು? ಹಾಗಾಗಿ ಇಂದು ಮಹಿಳೆಯರು ಸ್ವಯಂ ಜೀವನ ಸಾಗಿಸುವುದಕ್ಕಾಗಿ, ತಾನೇ ಗಳಿಸಿ ನೆಮ್ಮದಿಯಿಂದ ಬಾಳಲು ಅವಳಿಗೆ ಸ್ವಸಹಾಯ ಸಂಘಗಳು ದಾರಿದೀಪವಾದವು.

ಚಿಲ್ಲರೆ ವ್ಯಾಪಾರ ಮಾಡುವವರು, ಊದುಬತ್ತಿ ಮಾಡುವವರು, ಹಪ್ಪಳ ಸಂಡಿಗೆ ಮಾಡುವವರು, ಉಪ್ಪಿನಕಾಯಿ ಮಾಡುವವರು, ಮುಂತಾದ ಆರ್ಥಿಕ ಚಟುವಟಿಕೆ ವ್ಯವಹಾರದೊಂದಿಗೆ, ಸ್ವಂತ ಸೂರನ್ನು ಪಡೆಯಲು ಸಾಧ್ಯವಾದಲ್ಲಿ ಅದಕ್ಕಿಂತ ಹೆಚ್ಚಿಗೆ ಮತ್ತೇನುಬೇಕು?

ಈ ಮಹಿಳಾ ಸ್ವಸಹಾಯ ಸಂಘಗಳು ಅಥವಾ ಸ್ತ್ರೀಶಕ್ತಿ ಯೋಜನೆಯಾಗಬಹುದು. ೨೦೦೦ ರಿಂದ ಈಚೆಗೆ ಮಾನ್ಯ ಮಾಜಿ ಮುಖ್ಯಮಂತ್ರಿಯಾದ ಎಸ್.ಎಂ.ಕೃಷ್ಣರವರ ಕನಸಿನ ಕೂಸಾಗಿದ್ದ ಸ್ತ್ರೀಶಕ್ತಿ ಯೋಜನೆ ಜಾರಿಗೆ ಬಂದಿತ್ತು. ಈ ಯೋಜನೆಯಿಂದ ೨ ಲಕ್ಷಕ್ಕೂ ಹೆಚ್ಚು ಸ್ತ್ರೀಶಕ್ತಿ ಗುಂಪುಗಳು ರಚಿತವಾಗಿವೆ. ಇದುವರೆವಿಗೂ ಸುಮಾರು ೧೫ ಲಕ್ಷಕ್ಕೂ ಹೆಚ್ಚುಮಹಿಳೆಯರು ಸದಸ್ಯತ್ವ ಹೊಂದಿ ಕೋಟಿಗಟ್ಟಲೆ ಉಳಿತಾಯವನ್ನು ಮಾಡಿರುತ್ತಾರೆ. ಹಾಗು ತಮ್ಮ ಉಳಿತಾಯ ಹಣದಿಂದ ಸುಮಾರು ೧೫ಕೋಟಿ ಸಾಲವನ್ನು ಪಡೆದಿದ್ದಾರೆ. ಇದನ್ನು ತಮ್ಮ ಆದಾಯೋತ್ಪನ್ನ ಚಟುವಟಿಕೆಗಳಿಗೆ ಬಳಸಿಕೊಂಡು ಆರ್ಥಿಕವಾಗಿ ಪ್ರಗತಿಯನ್ನು ಹೊಂದುವುದು ಸಾಧ್ಯವಾಗಿದೆ.

ಇತ್ತೀಚಿನ ದಿನಗಳಲ್ಲಿ ನಾವು ನೋಡುವ ಹಾಗೆ ತಮ್ಮ ಬದುಕಿನಲ್ಲಿ ಹಲವು ರೀತಿಯ ವ್ಯವಹಾರಗಳನ್ನು ನಿರ್ವಹಿಸುತ್ತಿರುವುದು, ಧೈರ್ಯವಾಗಿ ಮಾತನಾಡುವುದು ತಮ್ಮ ಹಕ್ಕುಗಳ ಬಗ್ಗೆ ಕಾಳಜಿವುಳ್ಳವರಾಗಿರುವುದು, ಹೀಗೆ ಹಲವಾರು ವಿಧದಲ್ಲಿ ಸ್ವಾವಲಂಬನೆಯನ್ನು ಸಾದಿಸಿದಂತ ಮಹಿಳೆಯರನ್ನು ನಾವಿಂದು ಕಾಳಜಿಯಿಂದ ಕಾಣುತ್ತೇವೆ. ಅಲ್ಲದೆ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಪುರುಷರಿಗೆ ಅನೇಕ ಜವಾಬ್ದಾರಿಗಳನ್ನು ಹೊಂದಿದ್ದಾರೆ. ಅದಕ್ಕೆಲ್ಲಾ ಪ್ರಮುಖ ಕಾರಣ ಸ್ವಸಹಾಯ ಸಂಘಗಳಾಗಿವೆ. ಆದರೂ ಕೂಡ ಆಧುನಿಕರಣದ ಸೋಂಕಿನಿಂದ ಇವರ ಸಾಮಾರ್ಥ್ಯತೆಯು ಅಗೋಚರವಾಗಿಯೇ ಉಳಿಯುತ್ತಿರುವುದು ಅವರ ಪಾಲಿನ ದುರಂತವಾಗಿದೆ.

ಬುಡಕಟ್ಟು ಮಹಿಳೆಯರು ಮತ್ತು ಗ್ರಾಮೀಣಪ್ರದೇಶದ ಇತರೇ ಹಿಂದೂಳಿದ ಮಹಿಳೆಯರು ಸ್ಥಾಪಿಸಿಕೊಂಡಿರುವ ಸ್ವಸಹಾಯ ಸಂಘಗಳು ಪ್ರಸ್ಥುತದಲ್ಲಿ ಹಲವಾರು ರೀತಿ ಸೌಲಭ್ಯಗಳನ್ನು, ಮತ್ತು

ಉಪಯುಕ್ತವಾದ ಮಾರ್ಗಗಳನ್ನು ಈ ಮಹಿಳೆ ಸ್ವಸಹಾಯ ಸಂಘಗಳು ಹಾಕಿಕೊಟ್ಟರು ಕೂಡ ಇನ್ನು ಮಹತ್ತರವಾದ ಬದಲಾವಣೆ ಹೊಂದುವುದು ಅವಶ್ಯಕವಾಗಿದೆ. ಅದಕ್ಕೆ ಹಲವಾರು ಸಲಹೆಗಳನ್ನು ಸೂಚಿಸಲಾಗಿದೆ. ಏಕೆಂದರೇ ಈ ಸ್ವಸಹಾಯ ಸಂಘಗಳಲ್ಲಿ ತೊಡಗಿರುವ ಮಹಿಳೆಯರು ಹೆಚ್ಚಾಗಿ ಅನಕ್ಷರಸ್ಥರಾಗಿದ್ದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಕಂಡುಬರುತ್ತವೆ. ಅದರಿಂದ ಇಂತಹ ಜನರ ಮತ್ತು ಸಮುದಾಯಗಳು ಸ್ಥಾಪಿಸಿಕೊಂಡಿರುವ ಸ್ವಸಹಾಯ ಸಂಘಗಳಿಗೆ ಹಲವಾರು ಸಲಹೆಗಳನ್ನು ನೀಡಲಾಗಿದೆ. ಅವುಗಳೆಂದರೆ ಈ ರೀತಿ ಇವೆ.

೧. ಸರ್ಕಾರ ಮತ್ತು ಸಂಘಸಂಸ್ಥೆಗಳು ಸ್ವ ಸಹಾಯ ಸಂಘಗಳ ಸದಸ್ಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗೆ ತಕ್ಕಂತೆ ಸಾಲ-ಸೌಲಭ್ಯವನ್ನು ನೀಡಬೇಕು.

೨. ಸ್ವ ಸಹಾಯ ಸಂಘದ ಸದಸ್ಯರಲ್ಲಿ ಉಳಿತಾಯದ ಬಗ್ಗೆ ಪ್ರೇರಣೆ ನೀಡುವುದು.

೩. ಸರ್ಕಾರ ಸ್ವಸಹಾಯ ಸಂಘದ ವತಿಯಿಂದ ಬುಡಕಟ್ಟು ಸಮುದಾಯದವರಿಗೆ ಮತ್ತು ಗ್ರಾಮೀಣ ಸಮುದಾಯದ ಹಿಂದುಳಿದ ವರ್ಗದವರಿಗೆ ವಸತಿಹೀನರಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡಬೇಕು.

೪. ಬುಡಕಟ್ಟು ಸಮುದಾಯಗಳ ಅಬಿವೃದ್ಧಿಗೆ ಬಜೆಟ್‌ನಲ್ಲಿ ಪ್ರತ್ಯೇಕ ಹಣವನ್ನು ಮೀಸಲಿಡಬೇಕು.

೫. ಸ್ವ ಸಹಾಯ ಸಂಘದ ಸದಸ್ಯರಿಗೆ ಮುಕ್ತಮಾರ್ಗದರ್ಶನ ಮತ್ತು ವೃತ್ತಿಪರ ಉದ್ಯೋಗಗಳ ಬಗ್ಗೆ ಪ್ರೇರಣೆ ನೀಡುವುದು.

೬. ಬುಡಕಟ್ಟು ಮಹಿಳೆಯರ ಆದ್ಯತೆಗಳು ಬದಲಾಗುವಂತೆ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಬೇಕು.

೭. ಬುಡಕಟ್ಟು ಮಹಿಳೆಯರು ತಾವು ಉತ್ಪಾದಿಸಿದ ವಸ್ತುಗಳನ್ನು ತಾವೇ ಮಾರಾಟಮಾಡಿ ಅದರಿಂದ ಬಂದ ಆದಾಯವನ್ನು ತಾವೇ ಅನುಭವಿಸುವಂತಾಗಲು ಸ್ವಸಹಾಯ ಸಂಘಗಳ ಮೂಲಕ ಸಹಕಾರ ಮಾರುಕಟ್ಟೆಗಳನ್ನು ಬುಡಕಟ್ಟು ಸಮುದಾಯಗಳು ವಾಸಮಾಡುವ ಪ್ರತಿಯೊಂದು ಪ್ರದೇಶಗಳಲ್ಲಿಯು ಸ್ಥಾಪನೆ ಮಾಡಲು ಸರ್ಕಾರ ಗಮನಹರಿಸಬೇಕು.

೮. ಬುಡಕಟ್ಟು ಮಹಿಳೆಯರು ಹೈನುಗಾರಿಕೆ, ಹೊಲಿಗೆ ತರಬೇತಿ, ಮೀನುಗಾರಿಕೆ ಮೊದಲಾದ ಉದ್ಯೋಗಗಳಲ್ಲಿ ಆಕೆ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ರಿಯಾಯಿತಿ ಇರುವ ಆರ್ಥಿಕ ನೆರವನ್ನು ಸರ್ಕಾರ ಘೋಷಿಸಬೇಕು.

೯. ಸ್ವ ಸಹಾಯ ಸಂಘಗಳಲ್ಲಿ ಕಂಡುಬರುವ ಪ್ರಗತಿಯನ್ನು ಸರ್ಕಾರಕ್ಕೆ ವರದಿ ಮಾಡುವ ಉಸ್ತುವಾರಿಯನ್ನು ಸ್ಥಳೀಯ ಮಹಿಳಾ ಸಂಘಟನೆಗಳಿಗೆ ನೀಡಬೇಕು. ಈ ಉಸ್ತುವಾರಿಯಿಂದ ಸರ್ಕಾರದ ಅಧಿಕಾರಿಗಳು ದೂರವಿರಬೇಕು. ಸ್ವಸಹಾಯ ಸಂಘದ ಮುಖಾಂತರ ಯಶಸ್ವಿಯಾಗುವ ಮಹಿಳೆಯರನ್ನು ಸಾರ್ವಜನಿಕವಾಗಿ ಪರಿಚಯಿಸುವ ಕೆಲಸ ಕೂಡ ಸರ್ಕಾರದಿಂದಲೇ ಆಗಬೇಕು.

೧೦. ಬುಡಕಟ್ಟು ಸಮುದಾಯಗಳು ವಾಸಮಾಡುವ ಹಾಡಿಗಳಲ್ಲಿ ಶಿಕ್ಷಣದ ಪ್ರಮಾಣ ಬಹಳ ಕಡಿಮೆ ಇದೆ. ಆದ್ದರಿಂದ ಸರ್ಕಾರ ಸ್ವಸಹಾಯ ಸಂಘಗಳ ಮೂಲಕ ಶಿಕ್ಷಣಕ್ಕೆ ಬೇಕಾದ ಸವಲತ್ತುಗಳನ್ನು ಪೂರೈಕೆ ಮಾಡಬೇಕು. ಪ್ರತಿಯೊಂದು ಗಿರಿಜನ ಹಾಡಿಗಳಲ್ಲಿ ವಾಸಮಾಡುವ ಮಕ್ಕಳಿಗೆ ವಸತಿ ಶಾಲೆಯನ್ನು ತೆರೆಯಬೇಕು.

೧೧. ಬುಡಕಟ್ಟು ಮಹಿಳಾ ಸ್ವಸಹಾಯ ಸಂಘಗಳ ಪ್ರತಿಯೊಂದು ಸದಸ್ಯರ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಿ, ಸರ್ಕಾರವೇ ಉದ್ಯೋಗ ಖಾತರಿಯನ್ನು ನೀಡಬೇಕು.

೧೧. ಸ್ವತಂತ್ರ ಬದುಕನ್ನು ಬಯಸುವ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಯಾವ ಕಟ್ಟು - ಕಟ್ಟಲೆಗಳು ಇಲ್ಲದೆ ಆರ್ಥಿಕ ನೆರವು ನೀಡಲು ಸರ್ಕಾರ ಬದ್ದವಾಗಬೇಕು.

೧೨. ಬುಡಕಟ್ಟು ಸಮುದಾಯದ ಎಲ್ಲಾ ಮಹಿಳೆಯರು ಪ್ರಸ್ತುತದಲ್ಲಿ ಅಸಂಘಟಿತ ವಲಯದಲ್ಲಿ ದುಡಿದು ವೇತನದಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ. ಅದರಿಂದ ಸರ್ಕಾರವೇ ನಿಗದಿತ ಸಂಬಳವನ್ನು ಘೋಷಿಸಬೇಕು.

೧೩. ಬುಡಕಟ್ಟು ಸಮುದಾಯದ ವಿದ್ಯಾಭ್ಯಾಸ ಮಾಡಿದ ಯುವಕ-ಯುವತಿಯರಿಗೆ ಉದ್ಯೋಗಾವಕಾಶಗಳನ್ನು ಒದಗಿಸಲು ಪ್ರತ್ಯೇಕ ಯೋಜನೆಯನ್ನು ರೂಪಿಸಿ ಸಾಲ ನೀಡುವ ಹಾಗೂ ವಿಮಾ ಸೌಲಭ್ಯ ಒದಗಿಸುವ ಪ್ರಯತ್ನವನ್ನು ಸರ್ಕಾರ ಕೈಗೊಳ್ಳಬೇಕು.

ಈ ಮೇಲಿನ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ಬುಡಕಟ್ಟು ಮಹಿಳೆಯರು ದೇಶದ ಪ್ರತಿಯೊಂದು ವಲಯದಲ್ಲಿಯು ತೀವ್ರಗತಿಯ ಪ್ರಗತಿಯನ್ನು ಕಾಣಲು ಸಹಾಯಕವಾಗುವುದು. ಇದರಿಂದ ಬುಡಕಟ್ಟು ಸಮುದಾಯದ ಮಹಿಳೆಯರು ಸಮಾಜದ ಶೋಷಣೆಯಿಂದ ಹೊರಬಂದು ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ಹೇಳುವುದರಲ್ಲಿ ಸಂಶಯವಿಲ್ಲ.

ಪ್ರಸ್ತುತ ಅಧ್ಯಯನದಲ್ಲಿ ಕೊಡಗು ಜಿಲ್ಲೆಯ ವೀರಾಜಪೇಟೆ ತಾಲೂಕಿನ ಬುಡಕಟ್ಟು ಮಹಿಳೆಯರು ಸ್ವಸಹಾಯ ಸಂಘದ ಮೂಲಕ ಆರ್ಥಿಕ ಚಟುವಟಿಕೆಯನ್ನು ಕೈಗೊಂಡು ಆರ್ಥಿಕವಾಗಿ ಯಾವ ರೀತಿ ಪ್ರಗತಿಯನ್ನು ಹೊಂದುತ್ತಿದ್ದಾರೆ ಎಂಬುದನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ಪ್ರತ್ಯಕ್ಷವಾಗಿ ನೋಡಲಾಗಿದೆ. ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರನ್ನು ಸ್ವ ಸಹಾಯ ಸಂಘಗಳಿಗೆ ಸೀಮಿತಗೊಳಿಸಲಾಗಿದೆ. ಅನಂತರ ಒಂದು ನಿರ್ದಿಷ್ಟ ಕ್ಷೇತದಲ್ಲಿ ಬುಡಕಟ್ಟು ಮಹಿಳೆಯರು ಯಾವ ರೀತಿ ಆರ್ಥಿಕವಾಗಿ ಸಾಮಾಜಿಕವಾಗಿ ಸ್ವಾವಲಂಬಿ ಜೀವನ ಮಾಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಲಾಗಿದೆ.

ಪ್ರಸ್ತುತದಲ್ಲಿ ನನ್ನ ಸಂಪ್ರಬಂಧವು ಐದು ಅಧ್ಯಯನವನ್ನೊಳಗೊಂಡಿದೆ. ಮೊದಲ ಅಧ್ಯಯನವು ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ಮಹತ್ವ, ಅಧ್ಯಯನದ ವಿಧಾನಗಳನ್ನು ಒಳಗೊಂಡಿದೆ. ಎರಡನೆಯ

ಅಧ್ಯಯನದಲ್ಲಿ ಅಧ್ಯಯನ ಕ್ಷೇತ್ರದ ಭೌಗೋಳಿಕ ಪರಿಸರದ ಬಗ್ಗೆ ಮತ್ತು ಆ ಕ್ಷೇತ್ರದ ಬುಡಕಟ್ಟು ಸಮುದಾಯಗಳನ್ನು ಪರಿಚಯಿಸಲಾಗಿದೆ. ಮೂರನೇಯ ಅಧ್ಯಾಯದಲ್ಲಿ ಬುಡಕಟ್ಟು ಮಹಿಳೆಯರು ಆದಿಮ ಕಾಲಘಟ್ಟದಿಂದ ಆಧುನೀಕರಣದವರೆಗೆ ಆರ್ಥಿಕ ಸಂರಚನೆಯನ್ನು ಹೇಗೆ ಪರಿವರ್ತಿಸಿಕೊಂಡರು ಬಂದಿದ್ದಾರೆ ಎಂದು ವಿವರಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಬುಡಕಟ್ಟು ಮಹಿಳೆಯರು ಸ್ವಸಹಾಯ ಸಂಘಗಳ ಸಹಾಯದಿಂದ ಪ್ರಸ್ತುತದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಹೇಗೆ ಪ್ರಗತಿಯನ್ನು ಹೊಂದುತ್ತಿದ್ದಾರೆ. ಈ ಮಹಿಳೆಯರ ಸ್ವಸಹಾಯ ಸಂಘಗಳ ಕೊಡುಗೆ ಏನು ಎಂಬುದನ್ನು ಅಧ್ಯಯನ ಕ್ಷೇತ್ರಕ್ಕೆ ಹೋಗಿ ಸಂಗ್ರಹಿಸಿದ ಮಾಹಿತಿಗನುಗುಣವಾಗಿ ವಿವರಿಸಲಾಗಿದೆ.

ಅನುಬಂಧ

ಗ್ರಂಥಸೂಚಿ

೧. ಅಂಜನಪ್ಪ ಬಿ.ಹೆಚ್., ಮಹಿಳೆ ಮತ್ತು ದುಡಿಮೆ, ಸೃಷ್ಟಿ ಪಬ್ಲಿಕೇಷನ್ ನಾಗಶೆಟ್ಟಿಹಳ್ಳಿ, ಬೆಂಗಳೂರು-೯೪, ೨೦೦೬.

೨. ಕೆ.ಎಂ.ಮೈತ್ರಿ, ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೨.

೩. ಹಿ.ಚಿ.ಬೋರಲಿಂಗಯ್ಯ, ಕಾಡು ಮತ್ತು ಕಾಂಕ್ರಿಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ-೧೯೯೫.

೪. ಟಿ.ಆರ್.ಚಂದ್ರಶೇಖರ್, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೧.

೫. ಹೆಚ್.ಎಂ.ಹೇಮಲತಾ, ಮಹಿಳಾ ಅಧ್ಯಯನ-೩, ಡಿ.ವಿ.ಕೆ.ಮೂರ್ತಿ, ಪ್ರಕಾಶಕರು ಮೈಸೂರು-೨೦೦೫.

೬. ಹೆಚ್.ಎಂ.ಹೇಮಲತಾ, ಮಹಿಳಾ ಅಧ್ಯಯನ-೨, ಡಿ.ವಿ.ಕೆ.ಮೂರ್ತಿ, ಪ್ರಕಾಶಕರು ಮೈಸೂರು-೨೦೦೬.

೭. ಹೆಚ್.ಎಸ್.ಶ್ರೀಮತಿ, ಮಹಿಳಾ ಅಧ್ಯಯನ ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೦.

೮. ಹೆಚ್.ಎಸ್.ಶ್ರೀಮತಿ, ಶಿವಾನಂದ ಎಸ್.ವಿರಕ್ತಮಠ, ಜೆ.ಕೃಷ್ಣ, ಮಹಿಳೆ, ದುಡಿಮೆ ಮತ್ತು ಬಿಡುವು, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೭.

೯. ಕೆ.ಶಿವಚಿತ್ತಪ್ಪ, ಮಹಿಳಾ ಸಬಲೀಕರಣದ ವಿಭಿನ್ನನೆಲೆಗಳು, ಲಕ್ಷ್ಮಿ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್‌ಹೌಸ್ ನಂ.೩೪೧, ಕಾಳಮ್ಮನ ಗುಡಿ ಬೀದಿ, ಮೈಸೂರು-೨೦೦೬.

೧೦. ಕೆ.ಶಿವಚಿತ್ತಪ್ಪ, ಎಂ.ಚೌಡೇಗೌಡ, ಮಹಿಳೆ ಮತ್ತು ಅಭಿವೃದ್ಧಿ, ಚಿನ್ಮಯ ಪ್ರಕಾಶನ, ನಂ.೪೫೪ ಕೆ.ಸಿ.ನಗರ, ಮೈಸೂರು-೨೦೦೫.

೧೧. ಎನ್.ಪಿ.ಶಂಕರನಾರಾಯಣರಾವ್, ಪಂಜರಿಯರವ ಸಮಾಜ ಮತ್ತು ಜಾನಪದ ಇತಿಹಾಸ, ಅಭಿದವ ಮರೇನಹಳ್ಳಿ ವಿಜಯನಗರ, ಬೆಂಗಳೂರು.

೧೨. ಎಸ್.ಪ್ರಭಾಕರ್, ಬುಡಕಟ್ಟು ಸಮುದಾಯಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೮.

೧೩. ಪಿ.ಎಸ್.ರಾಮಾನುಜಮ್, ಕೊಡವರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಎಸ್.ಸಿ.ರಮೇಶ್, ಅಲೆಮಾರಿಗಳ ಸ್ಥಿತಿಗತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೫.

೧೫. ಪ್ರೊ.ಸಿ.ಪಾರ್ವತಮ್ಮ, ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ-೨೦೦೭.

೧೬. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು-೨೦೦೧.

೧೭. ಸಹಕಾರ ಚಳುವಳಿಯ ಶತಮಾನೋತ್ಸವ ನೆನಪಿನ ಬುತ್ತಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ ನಿಯಮಿತ ಬೆಂಗಳೂರು-೨೦೦೭.

೧೮. ವಿಜಯಕರ್ನಾಟಕ (ಮಹಿಳಾ ವಿಜಯ) ಜುಲೈ ೨೯, ೨೦೦೮.

೧೯. ಕೆ.ಅನಂತರಾವ್, ಸುವರ್ಣ ಕರ್ನಾಟಕ ದರ್ಶನ, ಪ್ರಕಾಶನ ವಿದ್ಯಾಪಬ್ಲಿಷಿಂಗ್ ಹೌಸ್, ಮಂಗಳೂರು-೨೦೦೬.

೨೦. Kodagu Distrect population Booklet Directorate of census operation Karnataka-2005

೨೧. ಬಾಮಿನಿ ರಾಘುವಯ್ಯ, ಕೊಡಗಿನ ಬುಡಕಟ್ಟುಗಳು, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು-೨೦೦೭.

೨೨. ಬಾಮಿನಿ ರಾಘುವಯ್ಯ, ಕರ್ನಾಟಕ ಬುಡಕಟ್ಟುಗಳು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೨೦೦೭.

೨೩. ಸೂರ್ಯನಾಥ.ಯು.ಕಾಮತ್, ಕರ್ನಾಟಕ ಗೆಜೆಟಿರಿಯನ್, ಬೆಂಗಳೂರು-೧೯೯೨.

೨೪. ಡಿ.ಎನ್.ಕೃಷ್ಣಯ್ಯ, ಕೊಡಗಿನ ಇತಿಹಾಸ, ಪ್ರಸಾರಾಂಗ ಮಾನಸಗಂಗೋತ್ರಿ ಮೈಸೂರು-೧೯೯೫.

೨೫. ಚೆಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ವಕ್ತೃಗಳ ವಿವರ

ಕ್ರ.ಸಂ.	ಹೆಸರು	ವಯಸ್ಸು	ಊರು
೦೧.	ಲೀಲಾ	೩೦	ಭದ್ರಗೋಳ II
೦೨.	ಜಯಂತಿ	೨೫	ಭದ್ರಗೋಳ II
೦೩.	ಕಮಲ	೩೦	ಭದ್ರಗೋಳ II
೦೪.	ಯಶೋಧ	೩೧	ಭದ್ರಗೋಳ II
೦೫.	ಶೀಲಾ	೨೯	ಭದ್ರಗೋಳ II
೦೬.	ರತ್ನ	೨೮	ಭದ್ರಗೋಳ II
೦೭.	ಜಯಮ್ಮ	೨೭	ಭದ್ರಗೋಳ II
೦೮.	ಸುಜಾತ	೨೬	ಭದ್ರಗೋಳ II
೦೯.	ಶಾರದ	೩೨	ಭದ್ರಗೋಳ II
೧೦.	ಶಾಂತ	೩೧	ಭದ್ರಗೋಳ II
೧೧.	ಗಿರಿಜಾ	೨೯	ಭದ್ರಗೋಳ II
೧೨.	ಕಾವ್ಯ	೨೬	ಭದ್ರಗೋಳ II
೧೩.	ನಸೀಮಾ	೨೯	ಭದ್ರಗೋಳ II
೧೪.	ಸುಮಿತ್ರಾ	೨೭	ಭದ್ರಗೋಳ II
೧೫.	ಶಾರದ	೩೧	ದೇವರಪುರ
೧೬.	ಮೀನಾ	೨೬	ದೇವರಪುರ
೧೭.	ಕೀತಿ	೨೯	ದೇವರಪುರ
೧೮.	ಕೌಶಲ್ಯ	೨೬	ದೇವರಪುರ
೧೯.	ಲಲಿತ	೨೫	ದೇವರಪುರ
೨೦.	ಲಲ್ಲಿ	೨೮	ಭದ್ರಗೋಳ II
೨೧.	ಅನಿತ	೨೪	ಭದ್ರಗೋಳ II

೨೨.	ಪ್ರೇಮಿಳಾ	೩೧	ಭದ್ರಗೋಳ II
೨೩.	ಸಿಂಧೂ	೨೯	ಭದ್ರಗೋಳ II
೨೪.	ಅಕ್ಕಯ್ಯ	೩೨	ಭದ್ರಗೋಳ II
೨೫.	ಸುಕುಮಾರಿ	೨೯	ಭದ್ರಗೋಳ II
೨೬.	ಪುಷ್ಪಾ	೨೪	ಭದ್ರಗೋಳ II
೨೭.	ಶಾಂತಿ	೨೬	ಭದ್ರಗೋಳ II
೨೮.	ಸುಬೇದಾ	೨೯	ಭದ್ರಗೋಳ II
೨೯.	ಸೂರ	೨೮	ಭದ್ರಗೋಳ II
೩೦.	ಶಶಿ	೨೭	ಭದ್ರಗೋಳ II



ಮಾದೇಶ್ವರ ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಸದಸ್ಯರು ಮರಪಾಲ, ತಿತಿಮತಿ




ಪ್ರಗತಿ ಸ್ತ್ರೀ ಶಕ್ತಿ ಸಂಘ ಬದ್ರಗೊಳ -ಖ ಸದಸ್ಯೆ ಅಂಗಡಿ ನಡೆಸುತ್ತಿರುವುದು



ಪ್ರತಿಷಟ ಸ್ತೀ ಶಕ್ತಿ ಗುಂಪು ಎಡತೊರೆ (ನೊಕ್ಯ)



ಪ್ರಗತಿ ಸ್ತ್ರೀ ಶಕ್ತಿ ಸಂಘ ಬದ್ರಗೋಳ–Iಸದಸ್ಯೆ ಮೇಕೆಗಳೊಂದಿಗೆ



ಕಿತ್ತೂರು ಚನ್ನಮ್ಮ ಸ್ವಸಹಾಯ ಸಂಘ ಕಲ್ಲಾಳ್ ಗೇಟ್ ಹಾಡಿ ಮಲ್ದಾರೆ (ಜೇನುಕುರುಬ) ಸದಸ್ಯರು



ಗಣಪತಿ ಮಹಿಳಾ ಸ್ವಸಹಾಯ ಸಂಘದ ಸದಸ್ಯೆಯರು ಕಲ್ಲಾಳ್ ಗೇಟ್ ಗಿರಿಜನಹಾಡಿ ಮಲ್ದಾರೆ(ಜೇನುಕುರುಬ)



ಪ್ರತಿಷ್ಠ ಸ್ತ್ರೀ ಶಕ್ತಿ ಸಂಘದ ಸದಸ್ಯೆಯರು ಶುಂಠಿ ಬೇಸಾಯದಲ್ಲಿ ತೊಡಗಿರುವುದು (ಎಡತೊರೆ)



ಸ್ತ್ರೀ ಶಕ್ತಿ ಸಂಘಗಳು ಮಾರಾಟದ ಮೇಳದಲ್ಲಿ ತೊಡಗಿರುವುದು



ಪ್ರಗತಿ ಸ್ತ್ರೀ ಶಕ್ತಿ ಸಂಘ ಬದ್ರಗೋಳ (ದೇವರಪುರ ವ್ಯಾಪ್ತಿ) ಸಂಘ ಸದಸ್ಯೆಯರು